ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	654
ಸದಸ್ಯರ ಹೆಸರು	:	ಡಾ:ವೈ.ಎ.ನಾರಾಯಣಸ್ವಾಮಿ.
ಉತ್ತರಿಸಬೇಕಾದ ದಿನಾಂಕ	:	17-12-2021
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಸಮಾಜ ಕಲ್ಯಾಣ ಇಲಾಖೆಯಡಿ ಬರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕ್ರೈಸ್) ದಲ್ಲಿ 2018 ಜನವರಿ ತಿಂಗಳಿಂದ ಮೇ ತಿಂಗಳವರೆವಿಗೆ ಎಷ್ಟು ಶಾಲೆಗಳು/ ವಸತಿ ನಿಲಯಗಳನ್ನು ನಿರ್ಮಿಸಲು ಕರೆಯಲಾದ ಗುತ್ತಿಗೆಗಳಿಗೆ ಮೀಸಲಿಟ್ಟಿರುವ ಅನುದಾನ ಎಷ್ಟು; (ವಿವರಗಳನ್ನು ಜಿಲ್ಲಾವಾರು, ಟೆಂಡರ್‌ವಾರು ಮಾಹಿತಿಯನ್ನು ನೀಡುವುದು)	ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ 2018 ಜನವರಿ ತಿಂಗಳಿನಿಂದ ಮೇ ತಿಂಗಳವರೆಗೆ ಶಾಲೆಗಳು/ ವಸತಿ ನಿಲಯಗಳನ್ನು ನಿರ್ಮಿಸಲು ಕರೆಯಲಾಗಿರುವ ಗುತ್ತಿಗೆಗಳಿಗೆ ಮೀಸಲಿಟ್ಟಿರುವ ಅನುದಾನದ ಸಂಪೂರ್ಣ ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.
ಆ)	ಮೇಲ್ಕಂಡ ಗುತ್ತಿಗೆಗಳನ್ನು ಅರ್ಹತೆ ಇಲ್ಲದಿರುವ ಗುತ್ತಿಗೆದಾರರಿಗೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕ್ರೈಸ್) ಯಾವ ಯಾವ ಟೆಂಡರ್ ಅರ್ಹರಲ್ಲದ ಗುತ್ತಿಗೆದಾರರಿಗೆ ನೀಡಲಾಗಿದೆ; (ವಿವರಗಳನ್ನು ಒದಗಿಸುವುದು)	2017-18 ನೇ ಸಾಲಿನಲ್ಲಿ ಸಂಘದ ವತಿಯಿಂದ ಕೈಗೊಂಡ ಕಾಮಗಾರಿಗಳನ್ನು ಲೆಕ್ಕ ತಪಾಸಣೆಗೊಳಪಡಿಸುವ ಸಂಬಂದ ವಿಶೇಷ ಲೆಕ್ಕ ಪರಿಶೋಧನಾ ತಂಡವನ್ನು ರಚಿಸಲಾಗಿರುತ್ತದೆ. ಸದರಿ ತಂಡವು ಪರಿಶೀಲನೆ ನಡೆಸಿ ವರದಿಯನ್ನು ನೀಡಲಾಗಿರುತ್ತದೆ. ಈ ವರದಿಯನುಸಾರ ಪ್ರಸ್ತಾಪಿತ ಅವಧಿಯಲ್ಲಿನ ಕೆಲವು ಕಾಮಗಾರಿಗಳ ಟೆಂಡರ್‌ಗಳಲ್ಲಿ ಅರ್ಹತೆಯಿಲ್ಲದಿರುವ ಗುತ್ತಿಗೆದಾರರಿಗೆ ಟೆಂಡರ್‌ಗಳನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ವಿಶೇಷ ಲೆಕ್ಕ ಪರಿಶೋಧನಾ ತಂಡದ ವರದಿಯ ಅನ್ವಯ ಅರ್ಹರಲ್ಲದ ಗುತ್ತಿಗೆದಾರರಿಗೆ ನೀಡಿರುವ ಟೆಂಡರ್‌ಗಳ ವಿವರಗಳನ್ನು ಅನುಬಂಧ-2 ರಲ್ಲಿ ನೀಡಿದೆ.

ಇ)	ಈ ಅನರ್ಹ ಗುತ್ತಿಗೆದಾರರಿಗೆ ಟೆಂಡರ್ ನೀಡಲು ಸಹಕರಿಸಿದ ಕ್ರೈಸ್ ಸಂಸ್ಥೆಯ ಅಧಿಕಾರಿಗಳು ಯಾರು; ಇವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು;	ವಿಶೇಷ ಲೆಕ್ಕ ಪರಿಶೋಧನಾ ತಂಡ ನೀಡಿರುವ ವರದಿಯನ್ನು ಪರಿಶೀಲಿಸಿ, ಅನರ್ಹ ಗುತ್ತಿಗೆದಾರರಿಗೆ ಟೆಂಡರ್ ನೀಡಲು ಸಹಕರಿಸಿದ ಕ್ರೈಸ್ ಸಂಸ್ಥೆಯ ಅಧಿಕಾರಿಗಳನ್ನು ಗುರುತಿಸಿ ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳಲು ಕ್ರಮವಹಿಸಲಾಗುವುದು.
ಈ)	ಮೇಲ್ಕಂಡ ಅವಧಿಯ ಗುತ್ತಿಗೆಗಳ ಬಗ್ಗೆ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯಲ್ಲಿ ವಿಶೇಷ ಆಡಿಟ್ ನಡೆಸಲು ಸೂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ವಿಶೇಷ ಆಡಿಟ್ ವರದಿಯ ವಿವರಗಳನ್ನು ನೀಡುವುದು?	ಹೌದು. ವಿಶೇಷ ಅಡಿಟ್ ವರದಿಯನ್ನು ಅನುಬಂಧ-3 ರಲ್ಲಿ ನೀಡಿದೆ.

ಸಂಖ್ಯೆ: ಸಕಇ 548 ಮೊದೇಶಾ 2021

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ವೈ.ಎ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 654ಕ್ಕೆ ಅನುಬಂಧ-1

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕ್ರೈಸ್) ದಲ್ಲಿ ಜನವರಿ 2018 ರಿಂದ ಮೇ 2018ರ ವರೆಗೆ ಕರೆಯಲಾದ ಟೆಂಡರ್‌ಗಳ ಕಾಮಗಾರಿ ವಿವರಗಳ ಘೋಷ್ವಾರೇ

ಕ್ರಮ ಸಂಖ್ಯೆ	ವಿವರ	ಗುತ್ತಿಗೆ ಮೊತ್ತ	ಕಾಮಗಾರಿಗಳ ಸಂಖ್ಯೆ
1	ವಸತಿ ಶಾಲೆ ನಿರ್ಮಾಣ ಕಾಮಗಾರಿಗಳು	20021.46	18
2	ಪ್ರಥಮ ದರ್ಜೆ ಕಾಲೇಜು ನಿರ್ಮಾಣ ಕಾಮಗಾರಿಗಳು	26748.73	10
3	ವಿದ್ಯಾರ್ಥಿ ನಿಲಯ ನಿರ್ಮಾಣ ಕಾಮಗಾರಿಗಳು	25326.7	53
	ಒಟ್ಟು	**72096.89**	**81**

ಅನುಬಂಧ-1

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ವೈ.ಎ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 654ಕ್ಕೆ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕ್ರೈಸ್) ದಲ್ಲಿ ಜನವರಿ 2018 ರಿಂದ ಮೇ 2018ರ ವರೆಗೆ ಕರೆಯಲಾದ ಟೆಂಡರ್‌ಗಳ ಕಾಮಗಾರಿ ವಿವರಗಳು

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಕಾಮಗಾರಿಯ ಹೆಸರು	ಗುತ್ತಿಗೆದಾರರು	ಗುತ್ತಿಗೆ ಮೊತ್ತ (ರೂ. ಲಕ್ಷಗಳಲ್ಲಿ)
1	ಚಿತ್ರದುರ್ಗ	ಮೊಳಕಾಲ್ಮೂರು	ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆ, ದೇವಸಮುದ್ರ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ	ಕೆ.ವಿ. ಕೃಷ್ಣರೆಡ್ಡಿ	5005.79
2	ಚಿತ್ರದುರ್ಗ	ಹಿರಿಯೂರು	ಮೊರಾರ್ಜಿ ದೇಸಾಯಿ ವಸತಿ ಶಾಲೆ, ಯಲ್ಲದಕೆರೆ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.	ಕೆ.ವಿ. ಕೃಷ್ಣರೆಡ್ಡಿ	
3	ಚಿತ್ರದುರ್ಗ	ಚಳ್ಳಕೆರೆ	ಮೊರಾರ್ಜಿ ದೇಸಾಯಿ ವಸತಿ ಶಾಲೆ, ಎನ್. ಮಹಾದೇವಪುರ ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.	ಕೆ.ವಿ. ಕೃಷ್ಣರೆಡ್ಡಿ	
4	ಚಿತ್ರದುರ್ಗ	ಹೊಳಲ್ಕೆರೆ	ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಚಿತ್ರಹಳ್ಳಿ (ತಾಳ್ಯ), ಹೊಳಲ್ಕೇರೆ ತಾ॥, ಚಿತ್ರದುರ್ಗ ಜಿಲ್ಲೆ.	ಪಿ.ಎನ್. ನಾಗಭೂಷನ್	3704.76
5	ಚಿತ್ರದುರ್ಗ	ಹೊಳಲ್ಕೆರೆ	ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬಸಾಪುರ, ಹೊಳಲ್ಕೇರೆ ತಾ॥, ಚಿತ್ರದುರ್ಗ ಜಿಲ್ಲೆ.	ಪಿ.ಎನ್. ನಾಗಭೂಷನ್	
6	ಮಂಡ್ಯ	ಮಳವಳ್ಳಿ	ಮಂಡ್ಯ ಜಿಲ್ಲೆ ಮಳವಳ್ಳಿತಾಲ್ಲೂಕು, ಕಸಬಾ ಹೋಬಳಿ ಹುಸ್ಕುರು (ಯಥಂಬಾಡಿ) ಮೊರಾರ್ಜಿ ದೇಸಾಯಿ ವಸತಿ ಶಾಲೆ ನಿರ್ಮಾಣ ಕಾಮಗಾರಿ.	ಡಿ ಎಸ್ ಚಂದ್ರು	998.49
7	ಮಂಡ್ಯ	ಮಳವಳ್ಳಿ	ಮಂಡ್ಯ ಜಿಲ್ಲೆ ಮಳವಳ್ಳಿತಾಲ್ಲೂಕು, ಬಿ.ಜಿ ಪುರ ಹೋಬಳಿ ಸರಗೂರು ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆ ನಿರ್ಮಾಣ ಕಾಮಗಾರಿ.	ಕೆ ಬಸವಾನಂದ	999.51
8	ತುಮಕೂರು	ಪಾವಗಡ	ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು, ಕೊಡಿಗೆಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ನಿರ್ಮಾಣ ಕಾಮಗಾರಿ.	ಕೆ ವಿ ಕೃಷ್ಣಾರೆಡ್ಡಿ	999
9	ತುಮಕೂರು	ಮಧುಗಿರಿ	ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು, ಮಿಡಿಗೇಶಿ ಹೋಬಳಿ ಕಾರೇನಹಳ್ಳಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ನಿರ್ಮಾಣ ಕಾಮಗಾರಿ.	ಪಿ.ಗಿರೀಶ್	999.96
10	ಚಿತ್ರದುರ್ಗ	ಚಿತ್ರದುರ್ಗ	ಚಿತ್ರದುರ್ಗ ಜಿಲ್ಲೆ ಚಿತ್ರದುರ್ಗ ತಾಲ್ಲೂಕು, ತುರ್ವನೂರು ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆ ನಿರ್ಮಾಣ ಕಾಮಗಾರಿ.	ಪವನ್ ಜಿ ಸಿ	966.26
11	ರಾಯಚೂರು	ದೇವದುರ್ಗ	ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕು, ಗಬ್ಬೂರು ಮೊರಾರ್ಜಿ ದೇಸಾಯಿ ವಸತಿ ಶಾಲೆ ನಿರ್ಮಾಣ ಕಾಮಗಾರಿ.	ವೈ ಪಿಟ್ಟೇಶ್ವರ ರಾವ್	1449.74
12	ತುಮಕೂರು	ಪಾವಗಡ	ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು, ವೈ ಎನ್ ಹೊಸಕೋಟೆ ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆ ನಿರ್ಮಾಣ ಕಾಮಗಾರಿ.	ಕೆ ವಿ ಕೃಷ್ಣರೆಡ್ಡಿ	999.19
13	ಮೈಸೂರು	ಎಚ್ ಡಿ ಕೋಟೆ	ಮೈಸೂರು ಜಿಲ್ಲೆ ಎಚ್ ಡಿ ಕೋಟೆ ತಾಲ್ಲೂಕು, ಸೊಳ್ಳೆಪುರ ಏಕಲವ್ಯ ಮಾದರಿ ವಸತಿ ಶಾಲೆಗೆ ಆಟದ ಮೈದಾನ ಸಂಕೀರ್ಣ ಕಾಮಗಾರಿ.	ಡಿ ಎಸ್ ಚಂದ್ರು	290.5

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಕಾಮಗಾರಿಯ ಹೆಸರು	ಗುತ್ತಿಗೆದಾರರು	ಗುತ್ತಿಗೆ ಮೊತ್ತ (ರೂ. ಲಕ್ಷಗಳಲ್ಲಿ)
14	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ ಜಿಲ್ಲೆ ಎಚ್ ಡಿ ಕೋಟೆ ತಾಲ್ಲೂಕು, ನಂದಿ ಹೋಬಳಿ ಕೊಲ್ಲಮನೆಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಸಂಕೀರ್ಣ ಕಾಮಗಾರಿ.	ಜಿ.ವಿ ಗೋಪಾಲರೆಡ್ಡಿ	1354.75
15	ತುಮಕೂರು	ಪಾವಗಡ	ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು, ಹೊಸಕೋಟೆ ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆ ಹೆಚ್ಚುವರಿ ಕಾಮಗಾರಿ .	ಕೆ ವಿ ಕೃಷ್ಣ ರೆಡ್ಡಿ	617.97
16	ತುಮಕೂರು	ಪಾವಗಡ	ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು, ಕೊಡಿಗೇನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಹೆಚ್ಚುವರಿ ಕಾಮಗಾರಿ.	ಕೆ ವಿ ಕೃಷ್ಣ ರೆಡ್ಡಿ	511.35
17	ತುಮಕೂರು	ಮಧುಗಿರಿ	ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು, ಭಡವನಹಳ್ಳಿ ಮೊರಾರ್ಜಿದೇಸಾಯಿ ವಸತಿ ಶಾಲೆ ಹೆಚ್ಚುವರಿ ಕಾಮಗಾರಿ.	ಶ್ರೀನಿವಾಸ	386.84
18	ಚಿತ್ರದುರ್ಗ	ಹೊಳಲ್ಕೆರೆ	ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು, ಚಿತ್ರಹಳ್ಳಿ ಪ್ರಥಮ ದರ್ಜೆ ಕಾಲೇಜು ಕವಶಿಸಸಂಘದ ಕಟ್ಟಡ ಕಾಮಗಾರಿ.	ಪಿ.ಎಸ್. ನಾಗಭೂಷನ್	737.35
			ಒಟ್ಟು		20021.46
19	ಹಾವೇರಿ	ಹಾವೇರಿ	ಹಾವೇರಿ ಜಿಲ್ಲೆ ಮತ್ತು ತಾಲ್ಲೂಕು, ದೇವಗಿರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿ.	ವೆಂಕಟರಮಣ ಇ ಗೌಡ	10659.87
20	ಚಿತ್ರದುರ್ಗ	ಹೊಳಲ್ಕೆರೆ	ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು, ಮಲ್ಲಾಡಿಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿ.		
21	ಕೋಲಾರ	ಮುಳಬಾಗಿಲು	ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ದೇವರಾಯಸಮುದ್ರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿ.		
22	ಚಾಮರಾಜನಗರ	ಚಾಮರಾಜನಗರ	ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕು, ಯಡಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿ.		
23	ಬೀದರ್	ಬೀದರ್	ಬೀದರ್ ಜಿಲ್ಲೆ ಮತ್ತು ತಾಲ್ಲೂಕು, ಬೀದರ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿ.	ಕೆ.ಎಂ.ವಿ. ಪ್ರಸಾದ್ ರಾವ್	8071.74
24	ಯಾದಗಿರಿ	ಯಾದಗಿರಿ	ಯಾದಗಿರಿ ಜಿಲ್ಲೆ ಮತ್ತು ತಾಲ್ಲೂಕು, ಮುದ್ನಾಳ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿ.		
25	ಕಲ್ಬುರ್ಗಿ	ಸೇಡಂ	ಕಲ್ಬುರ್ಗಿ ಜಿಲ್ಲೆ, ಸೇಡಂ ತಾಲ್ಲೂಕು, ಗುಂಡೇಪಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿ.		
26	ವಿಜಯಪುರ	ಮುದ್ದೇಬಿಹಾಳ	ವಿಜಯಪುರ ಜಿಲ್ಲೆ, ಮುದ್ದೆಬಿಹಾಳ ತಾಲ್ಲೂಕು, ಹಡಲಗೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ಕಾಮಗಾರಿ.	ಕೆ. ವೆಂಕಟ ಕೃಷ್ಣ ರೆಡ್ಡಿ	8017.12
27	ರಾಯಚೂರು	ಮಾನ್ವಿ	ರಾಯಚೂರು ಜಿಲ್ಲೆ, ಮಾನ್ವಿ ತಾಲ್ಲೂಕು, ಕವಿತಾಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ಕಾಮಗಾರಿ.		

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಕಾಮಗಾರಿಯ ಹೆಸರು	ಗುತ್ತಿಗೆದಾರರು	ಗುತ್ತಿಗೆ ಮೊತ್ತ (ರೂ. ಲಕ್ಷಗಳಲ್ಲಿ)
28	ಕೊಪ್ಪಳ	ಯಲ್ಬುರ್ಗಾ	ಕೊಪ್ಪಳ ಜಿಲ್ಲೆ, ಯಲ್ಬುರ್ಗಾ ತಾಲ್ಲೂಕು, ತಳಬಾಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ಕಾಮಗಾರಿ.		
			ಒಟ್ಟು		**26748.73**
29	ಧಾರವಾಡ	ಧಾರವಾಡ	ಧಾರವಾಡ ಜಿಲ್ಲೆ ಮತ್ತು ತಾಲ್ಲೂಕು, ಅತ್ತಿಕೊಳ್ಳ (ಮಾಲಮಡ್ಡಿ) (ಪ.ವರ್ಗ) ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಬಸವರಾಜು ಬಲೊಲಮಟ್ಟಿ	350.81
30	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ತಾಲ್ಲೂಕು, ಚಿಕ್ಕಬಳ್ಳಾಪುರ ಟೌನ್ (ಹಿಂ.ವರ್ಗ) ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ರಾಜಾ ರೆಡ್ಡಿ ಕೀಲಪತಲ	314.96
31	ದಾವಣಗೆರೆ	ದಾವಣಗೆರೆ	ದಾವಣಗೆರೆ ಜಿಲ್ಲೆ ಮತ್ತು ತಾಲ್ಲೂಕು, ಜಗಳೂರು ಟೌನ್ (ಹಿಂ.ವರ್ಗ) ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಕೆ. ತಿಪ್ಪೇಸ್ವಾಮಿ	313.44
32	ಚಿಕ್ಕಮಗಳೂರು	ಚಿಕ್ಕಮಗಳೂರು	ಚಿಕ್ಕಮಗಳೂರು ಜಿಲ್ಲೆ ಮತ್ತು ತಾಲ್ಲೂಕು, ಕೊಪ್ಪ (ಹಿಂ.ವರ್ಗ) ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಪ್ರಶಾಂತ್ ರಾವ್ ಬೆಲ್‌ಮನ್	314.09
33	ಬಾಗಲಕೋಟೆ	ಜಮಖಂಡಿ	ಬಾಗಲಕೋಟೆ ಜಿಲ್ಲೆ, ಜಮಖಂಡಿ ತಾಲ್ಲೂಕು, ಜಮಖಂಡಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ (೧೦೦ ವಿದ್ಯಾರ್ಥಿಗಳು)	ಉಮೇಶ್ ಪ್ರಭಾಕರ್ ರಾವ್	909.98
34	ಬಾಗಲಕೋಟೆ	ಬಾಗಲಕೋಟೆ	ಬಾಗಲಕೋಟೆ ಜಿಲ್ಲೆ ಮತ್ತು ತಾಲ್ಲೂಕು, ಬಾಗಲಕೋಟೆ ಟೌನ್ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ (150 ವಿದ್ಯಾರ್ಥಿಗಳು)	ಉಮೇಶ್ ಪ್ರಭಾಕರ್ ರಾವ್	
35	ಬೆಳಗಾವಿ	ಬೆಳಗಾವಿ	ಬೆಳಗಾವಿ ಜಿಲ್ಲೆ ಮತ್ತು ತಾಲ್ಲೂಕು, ಬೆಳಗಾವಿ ಟೌನ್ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ (೧೦೦ ವಿದ್ಯಾರ್ಥಿಗಳು)	ಕೋಟಿ ಲಕ್ಷ್ಮೀನಾರಾಯಣ	436.07
36	ತುಮಕೂರು	ತುಮಕೂರು	ತುಮಕೂರು ಜಿಲ್ಲೆ ಮತ್ತು ತಾಲ್ಲೂಕು, ಪಾವಗಡ ಟೌನ್ (ಪ.ಜಾತಿ) ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ (ಯುನಿಟ್-2) ಕಟ್ಟಡ ನಿರ್ಮಾಣ ಕಾಮಗಾರಿ	ವೆಂಕಟೇಶ್ವರ ರಾವ್ ಪಾಲಚಾರ್ಲ	3661.4
37	ಚಾಮರಾಜನಗರ	ಕೊಳ್ಳೇಗಾಲ	ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು, ಹನೂರು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ (ಜಿ+1) ಕಟ್ಟಡ ನಿರ್ಮಾಣ ಕಾಮಗಾರಿ	ಉಮೇಶ್ ಪ್ರಭಾಕರ್ ರಾವ್	696.78
38	ಚಾಮರಾಜನಗರ	ಗುಂಡ್ಲುಪೇಟೆ	ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಗುಂಡ್ಲುಪೇಟೆ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ (ಜಿ+4) ಕಟ್ಟಡ ನಿರ್ಮಾಣ ಕಾಮಗಾರಿ	ಉಮೇಶ್ ಪ್ರಭಾಕರ್ ರಾವ್	
39	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬಳ್ಳಾಪುರ ಟೌನ್ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ (ಜಿ+4) ಕಟ್ಟಡ ನಿರ್ಮಾಣ ಕಾಮಗಾರಿ	ವೆಂಕಟೇಶ್‌ರೆಡ್ಡಿ	337.37

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಕಾಮಗಾರಿಯ ಹೆಸರು	ಗುತ್ತಿಗೆದಾರರು	ಗುತ್ತಿಗೆ ಮೊತ್ತ (ರೂ. ಲಕ್ಷಗಳಲ್ಲಿ)
40	ದಾವಣಗೆರೆ	ದಾವಣಗೆರೆ	ದಾವಣಗೆರೆ ಜಿಲ್ಲೆ ಮತ್ತು ತಾಲ್ಲೂಕು, ಹರಪನಹಳ್ಳಿ ವೃತ್ತಿಪರ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಯು. ವೆಂಕಟರಮಣರೆಡ್ಡಿ	444.95
41	ಕೋಲಾರ	ಕೋಲಾರ	ಕೋಲಾರ ಜಿಲ್ಲೆ ಮತ್ತು ತಾಲ್ಲೂಕು, ಕೋಲಾರ ಟೌನ್ ಸರ್ಕಾರಿ ಮೆಟ್ರಿಕ್ ನಂತರದ ವೃತ್ತಿಪರ ಮತ್ತು ಪದವಿ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ.	ಎಸ್. ಶಿವಕುಮಾರಸ್ವಾಮಿ	853.15
42	ಉಡುಪಿ	ಉಡುಪಿ	ಉಡುಪಿ ಜಿಲ್ಲೆ ಮತ್ತು ತಾಲ್ಲೂಕು, ಕುಂದಾಪುರ ಟೌನ್ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ (ಜಿ+3) & ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ (ಜಿ+2) ಕಟ್ಟಡ ನಿರ್ಮಾಣ ಕಾಮಗಾರಿ.	ಕೋಟಿ ಲಕ್ಷ್ಮೀನಾರಾಯಣ	853.44
43	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ತಾಲ್ಲೂಕು, ಚಿಕ್ಕಬಳ್ಳಾಪುರ ಸರ್ಕಾರಿ ಮೆಟ್ರಿಕ್ ನಂತರದ ವೃತ್ತಿಪರ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಸತೀಶ್ ಕುಮಾರ್ ಜಿ	925.55
44	ಬಳ್ಳಾರಿ	ಬಳ್ಳಾರಿ	ಬಳ್ಳಾರಿ ಜಿಲ್ಲೆ ಮತ್ತು ತಾಲ್ಲೂಕು, ಹಿರೇಹಡಗಲಿ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಮಧುಮೋಹನ್	779.83
45	ಬಳ್ಳಾರಿ	ಹಗರಿಬೊಮ್ಮನಹಳ್ಳಿ	ಬಳ್ಳಾರಿ ಜಿಲ್ಲೆ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ಹಗರಿಬೊಮ್ಮನಹಳ್ಳಿ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಮಧುಮೋಹನ್	
46	ಉತ್ತರಕನ್ನಡ	ಕಾರವಾರ	ಉತ್ತರಕನ್ನಡ ಜಿಲ್ಲೆ, ಕಾರವಾರ ತಾಲ್ಲೂಕು, ಕಾರವಾರ ಟೌನ್ ಮೆಟ್ರಿಕ್ ನಂತರದ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಉಮೇಶ್ ಪ್ರಭಾಕರ್ ರಾವ್	730.79
47	ಉತ್ತರಕನ್ನಡ	ಕುಮುಟ	ಉತ್ತರಕನ್ನಡ ಜಿಲ್ಲೆ, ಕುಮುಟ ತಾಲ್ಲೂಕು, ಕುಮುಟ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಉಮೇಶ್ ಪ್ರಭಾಕರ್ ರಾವ್	
48	ಉತ್ತರಕನ್ನಡ	ಶಿರಸಿ	ಉತ್ತರಕನ್ನಡ ಜಿಲ್ಲೆ, ಶಿರಸಿ ತಾಲ್ಲೂಕು, ಶಿರಸಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಉಮೇಶ್ ಪ್ರಭಾಕರ್ ರಾವ್	896.23
49	ಉತ್ತರಕನ್ನಡ	ಹಳಿಯಾಳ	ಉತ್ತರಕನ್ನಡ ಜಿಲ್ಲೆ, ಹಳಿಯಾಳ ತಾಲ್ಲೂಕು, ಹಳಿಯಾಳ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಉಮೇಶ್ ಪ್ರಭಾಕರ್ ರಾವ್	
50	ಮಂಡ್ಯ	ಕೆ.ಆರ್. ಪೇಟೆ	ಮಂಡ್ಯ ಜಿಲ್ಲೆ, ಕೆ.ಆರ್. ಪೇಟೆ ತಾಲ್ಲೂಕು, ಸಾರಂಗಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ (ಜಿ+1)	ಅಂಕನಹಳ್ಳಿ ಕಾಳೇಗೌಡ ವೆಂಕಟೇಶ್	460.88
51	ಮಂಡ್ಯ	ಪಾಂಡವಪುರ	ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಪಾಂಡವಪುರ ಟೌನ್ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ (ಜಿ+2)	ಅಂಕನಹಳ್ಳಿ ಕಾಳೇಗೌಡ ವೆಂಕಟೇಶ್	

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಕಾಮಗಾರಿಯ ಹೆಸರು	ಗುತ್ತಿಗೆದಾರರು	ಗುತ್ತಿಗೆ ಮೊತ್ತ (ರೂ. ಲಕ್ಷಗಳಲ್ಲಿ)
52	ಧಾರವಾಡ	ಧಾರವಾಡ	ಧಾರವಾಡ ಜಿಲ್ಲೆ ಮತ್ತು ತಾಲ್ಲೂಕು, ನಿಸರ್ಗ ಲೇಔಟ್ ಮೆಟ್ರಿಕ್ ನಂತರದ ಪಿಜಿ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಜಿ.ಎಂ. ಗಡವಾಲೆ	412.83
53	ಧಾರವಾಡ	ಧಾರವಾಡ	ಧಾರವಾಡ ಜಿಲ್ಲೆ ಮತ್ತು ತಾಲ್ಲೂಕು, ಧಾರವಾಡ ಟೌನ್ ಮೆಟ್ರಿಕ್ ನಂತರದ ಪಿಜಿ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಉಮೇಶ್ ಪ್ರಭಾಕರ್ ರಾವ್	865.52
54	ಧಾರವಾಡ	ಧಾರವಾಡ	ಧಾರವಾಡ ಜಿಲ್ಲೆ ಮತ್ತು ತಾಲ್ಲೂಕು, ಗಾಂಧಿನಗರ ಸರ್ಕಾರಿ ಮೆಟ್ರಿಕ್ ನಂತರದ ವೃತ್ತಿಪರ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಉಮೇಶ್ ಪ್ರಭಾಕರ್ ರಾವ್	
55	ಧಾರವಾಡ	ಧಾರವಾಡ	ಧಾರವಾಡ ಜಿಲ್ಲೆ ಮತ್ತು ತಾಲ್ಲೂಕು, ಸಪ್ತಾಪುರ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಉಮೇಶ್ ಪ್ರಭಾಕರ್ ರಾವ್	839.52
56	ಧಾರವಾಡ	ಧಾರವಾಡ	ಧಾರವಾಡ ಜಿಲ್ಲೆ ಮತ್ತು ತಾಲ್ಲೂಕು, ಜಯನಗರ ಸರ್ಕಾರಿ ಮೆಟ್ರಿಕ್ ನಂತರದ ವೃತ್ತಿಪರ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಉಮೇಶ್ ಪ್ರಭಾಕರ್ ರಾವ್	865.52
57	ಧಾರವಾಡ	ಧಾರವಾಡ	ಧಾರವಾಡ ಜಿಲ್ಲೆ ಮತ್ತು ತಾಲ್ಲೂಕು, ಸೈದಾಪುರ ಸರ್ಕಾರಿ ಮೆಟ್ರಿಕ್ ನಂತರದ ವೃತ್ತಿಪರ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಉಮೇಶ್ ಪ್ರಭಾಕರ್ ರಾವ್	
58	ಧಾರವಾಡ	ಹುಬ್ಬಳ್ಳಿ	ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲ್ಲೂಕು, ಗಂಟಿಕೆರೆ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಪ್ರಶ್ರಾಂತ್ ರಾವ್ ಬೆಲ್ಮನ್	734.12
59	ಧಾರವಾಡ	ಹುಬ್ಬಳ್ಳಿ	ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲ್ಲೂಕು, ಲಿಂಗರಾಜನಗರ, ಉಣಕಲ್ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಪ್ರಶ್ರಾಂತ್ ರಾವ್ ಬೆಲ್ಮನ್	
60	ಕಲ್ಬುರ್ಗಿ	ಕಲ್ಬುರ್ಗಿ	ಕಲ್ಬುರ್ಗಿ ಜಿಲ್ಲೆ ಮತ್ತು ತಾಲ್ಲೂಕು, ಕಲ್ಬುರ್ಗಿ ಟೌನ್ ಸರ್ಕಾರಿ ಪಿಜಿ ಕಾಲೇಜ್ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಅಮರೇಗೌಡ	615.04
61	ಕಲ್ಬುರ್ಗಿ	ಚಿತ್ತಾಪುರ	ಕಲ್ಬುರ್ಗಿ ಜಿಲ್ಲೆ, ಚಿತ್ತಾಪುರ ತಾಲ್ಲೂಕು, ವಾಡಿ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಅಮರೇಗೌಡ	
62	ಕಲ್ಬುರ್ಗಿ	ಕಲ್ಬುರ್ಗಿ	ಕಲ್ಬುರ್ಗಿ ಜಿಲ್ಲೆ ಮತ್ತು ತಾಲ್ಲೂಕು, ಆಳಂದ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಎಂ. ಯಜ್ಞ ನಾರಾಯಣ	654.02
63	ಯಾದಗಿರಿ	ಶಹಪುರ	ಯಾದಗಿರಿ ಜಿಲ್ಲೆ, ಶಹಪುರ ತಾಲ್ಲೂಕು, ಭೀಮರಾಯನಗುಡಿ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ.	ಸುಧೀರ್ ಕುಮಾರ್ ರೆಡ್ಡಿ ಸಿ.ಹೆಚ್.	857.7
64	ಯಾದಗಿರಿ	ಯಾದಗಿರಿ	ಯಾದಗಿರಿ ಜಿಲ್ಲೆ ಮತ್ತು ತಾಲ್ಲೂಕು, ಯಾದಗಿರಿ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವೃತ್ತಿಪರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ.	ಸುಧೀರ್ ಕುಮಾರ್ ರೆಡ್ಡಿ ಸಿ.ಹೆಚ್.	

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಕಾಮಗಾರಿಯ ಹೆಸರು	ಗುತ್ತಿಗೆದಾರರು	ಗುತ್ತಿಗೆ ಮೊತ್ತ (ರೂ. ಲಕ್ಷಗಳಲ್ಲಿ)
65	ಯಾದಗಿರಿ	ಶಹಪುರ	ಯಾದಗಿರಿ ಜಿಲ್ಲೆ, ಶಹಪುರ ತಾಲ್ಲೂಕು, ಶಹಪುರ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ.	ದಾವಲಸಾಬ್	539.2
66	ರಾಮನಗರ	ರಾಮನಗರ	ರಾಮನಗರ ಜಿಲ್ಲೆ ಮತ್ತು ತಾಲ್ಲೂಕು, ಮಾಗಡಿ ಆಶ್ರಮ ಶಾಲಾ ಸಂಕೀರ್ಣ ನಿರ್ಮಾಣ ಕಾಮಗಾರಿ.	ಬಸವನಹಳ್ಳಿ ಮಾಯಪ್ಪ ನಟರಾಜ್	282.94
67	ಹಾಸನ	ಹಾಸನ	ಹಾಸನ ಜಿಲ್ಲೆ ಮತ್ತು ತಾಲ್ಲೂಕು, ಹೊಳೆನರಸೀಪುರ ಟೌನ್ ಎರಡನೆ ಮತ್ತು ಮೂರನೆ ಮಹಡಿಯ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ.	ಅಂಕನಹಳ್ಳಿ ಕಾಳೇಗೌಡ ವೆಂಕಟೇಶ್	279.07
68	ಮಂಡ್ಯ	ಪಾಂಡವಪುರ	ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು, ಮೆಲುಕೋಟೆ ಹೋಬಳಿ ಮುಡಲಕೊಪ್ಪಲು(ಹಳೇಬಿಡು) ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ನಿರ್ಮಾಣ ಕಾಮಗಾರಿ.	ನಾಗಪ್ಪ ಪರಮೆಶ್	997.42

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಕಾಮಗಾರಿಯ ಹೆಸರು	ಗುತ್ತಿಗೆದಾರರು	ಗುತ್ತಿಗೆ ಮೊತ್ತ (ರೂ. ಲಕ್ಷಗಳಲ್ಲಿ)
69	ಗದಗ	ಗದಗ	ಗದಗ ಜಿಲ್ಲೆ ಗದಗ ತಾಲ್ಲೂಕು, ಗದಗ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ನಿರ್ಮಾಣ ಕಾಮಗಾರಿ.	ರವಿಂದ್ರ ಕೂಮಾರ್ ಮಲ್ಲಶೇಟ್ಟಪ್ಪ	171.76
70	ಬೆಳಗಾವಿ	ಬೆಳಗಾವಿ	ಬೆಳಗಾವಿ ಜಿಲ್ಲೆ ಬೆಳಗಾವಿ ತಾಲ್ಲೂಕು, ಬೆಳಗಾವಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ನಿರ್ಮಾಣ ಕಾಮಗಾರಿ.	ಆರ್ ಶ್ರೀನಿವಾಸ ರೆಡ್ಡಿ	171.76
71	ಕಲಬುರಗಿ	ಚಿತ್ತಾಪುರ	ಕಲಬುರಗಿ ಜಿಲ್ಲೆ ಚಿತ್ತಾಪುರ ತಾಲ್ಲೂಕು, ಚಿತ್ತಾಪುರ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ನಿರ್ಮಾಣ ಕಾಮಗಾರಿ.	ಪಿ ಮುರಳಿಕೃಷ್ಣ	313.44
72	ಉತ್ತರಕನ್ನಡ	ಹಳಿಯಾಳ	ಉತ್ತರಕನ್ನಡ ಜಿಲ್ಲೆ, ಹಳಿಯಾಳ ತಾಲ್ಲೂಕು, ಕೇರವಾಡ ಆಶ್ರಮ ಶಾಲಾ ಸಂಕೀರ್ಣ ನಿರ್ಮಾಣ ಕಾಮಗಾರಿ.	ರೊಲ್ಯಾಂಡ್ ಎಸ್ ಫರ್ನಾಂಡೀಸ್	432.04
73	ಬೆಳಗಾವಿ	ಗೋಕಾಕ್	ಬೆಳಗಾವಿ ಜಿಲ್ಲೆ, ಗೋಕಾಕ ತಾಲ್ಲೂಕು, ಮೂಡಲಗಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ.	ರಸುಲ್ ಅಹ್ಮದ್ ಕಾಸಿಮ್‌ಸಾಬ್ ಭಗವಾನ್	305.96
74	ಉತ್ತರಕನ್ನಡ	ಉತ್ತರಕನ್ನಡ	ಉತ್ತರಕನ್ನಡ ಜಿಲ್ಲೆ ಮತ್ತು ತಾಲ್ಲೂಕು, ಸಿದ್ದಾಪುರ ಟೌನ್ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ.	ರೊಲ್ಯಾಂಡ್ ಎಸ್ ಫರ್ನಾಂಡಿಸ್	312.85
75	ರಾಯಚೂರು	ರಾಯಚೂರು	ರಾಯಚೂರು ಜಿಲ್ಲೆ ಮತ್ತು ತಾಲ್ಲೂಕು, ಸಿಂಧನೂರು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ.	ಸಣ್ಣ ಬೋಗಪ್ಪ	285.58
76	ಚಿತ್ರದುರ್ಗ	ಚಿತ್ರದುರ್ಗ	ಚಿತ್ರದುರ್ಗ ಜಿಲ್ಲೆ ಮತ್ತು ತಾಲ್ಲೂಕು, ಹೊಳಲ್ಕೆರೆ ಟೌನ್ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ.	ಬಿ.ಎಸ್. ಶ್ರೀಧರ್	311.92
77	ಧಾರವಾಡ	ನವಲಗುಂದ	ಧಾರವಾಡ ಜಿಲ್ಲೆ, ನವಲಗುಂದ ತಾಲ್ಲೂಕು, ನವಲಗುಂದ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ.	ಹೆಚ್. ಶಿವಕುಮಾರ್	343.94
78	ತುಮಕೂರು	ತುಮಕೂರು	ತುಮಕೂರು ಜಿಲ್ಲೆ ಮತ್ತು ತಾಲ್ಲೂಕು, ಸೋಮೇಶ್ವರಪುರಂ ಮೆಟ್ರಿಕ್ ನಂತರದ ವೃತ್ತಿಪರ ಬಾಲಕಿಯರ ವಿದ್ಯಾರ್ಥಿ ನಿಲಯ ತುಮಕೂರು ಸಿಜಿಹೆಚ್-3 (ಕ್ಯಾತಸಂದ್ರ) ಕಟ್ಟಡ ನಿರ್ಮಾಣ ಕಾಮಗಾರಿ	ಜನಾರ್ಧನ ರಾವ್	370.67
79	ತುಮಕೂರು	ತುಮಕೂರು	ತುಮಕೂರು ಜಿಲ್ಲೆ ಮತ್ತು ತಾಲ್ಲೂಕು, ಬಟವಾಡಿ ಮೆಟ್ರಿಕ್ ನಂತರದ ಗ್ರ್ಯಾಜುಯೇಟ್ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ	ಜನಾರ್ಧನ ರಾವ್	402.35
80	ತುಮಕೂರು	ತುಮಕೂರು	ತುಮಕೂರು ಜಿಲ್ಲೆ ಮತ್ತು ತಾಲ್ಲೂಕು, ಕ್ಯಾತಸಂದ್ರ (ತುಮಕೂರು-2) ಮೆಟ್ರಿಕ್ ನಂತರದ ವೃತ್ತಿಪರ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ.	ಜನಾರ್ಧನ ರಾವ್	367.64
81	ಚಿಕ್ಕಮಗಳೂರು	ಕಡೂರು	ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು, ಕಡೂರು ಟೌನ್ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ.	ಬಿ.ಎಸ್. ಶ್ರೀಧರ್	314.17
			ಒಟ್ಟು		**25326.7**

ಕಾರ್ಯನಿರ್ವಾಹಕ ನಿರ್ದೇಶಕರು

ಅನುಬಂಧ-2

ಆ) ಮೇಲ್ಕಂಡ ಗುತ್ತಿಗೆಗಳನ್ನು ಅರ್ಹತೆ ಇಲ್ಲದಿರುವ ಗುತ್ತಿಗೆದಾರರಿಗೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಇದ್ದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕ್ರೈಸ್) ಯಾವ ಯಾವ ಟೆಂಡರ್ ಅರ್ಹರಲ್ಲದ ಗುತ್ತಿಗೆದಾರರಿಗೆ ನೀಡಲಾಗಿದೆ. (ವಿವರಗಳನ್ನು ಒದಗಿಸುವುದು)

(ವಿಶೇಷ ಲೆಕ್ಕ ಪರಿಶೋಧನಾ ತಂಡವು ಪರಿಶೀಲನಾ ವರದಿಯ ಅನ್ವಯ ಅರ್ಹ/ಅನರ್ಹ ಗುತ್ತಿಗೆದಾರರಿಗೆ ಟೆಂಡರ್ ನೀಡಿರುವ ವಿವರ)

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಗುತ್ತಿಗೆದಾರರ ವಿವರ
1	ಚಿತ್ರದುರ್ಗದಲ್ಲಿರುವ ಸರ್ಕಾರಿ ಕಲಾ ಕಾಲೇಜಿಗೆ ಹೆಚ್ಚುವರಿ ಕಟ್ಟಡ ನಿರ್ಮಾಣ	ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರಾದ ಶ್ರೀ ಆರ್. ರಾಮರೆಡ್ಡಿ ರವರು ಟೆಂಡರ್‌ಗೆ ಅಗತ್ಯವಿರುವ ಬಿಡ್ ಕೆಪಾಸಿಟಿಗಿಂತ ಹೆಚ್ಚಾಗಿದ್ದು, ಅರ್ಹರಾಗಿದ್ದರೂ, ಸದರಿಯವರನ್ನು ಈ ಕಾಮಗಾರಿಗೆ ಅಗತ್ಯವಿರುವ ಬಿಡ್ ಕೆಪಾಸಿಟಿ ಇರುವುದಿಲ್ಲವೆಂದು ಅನರ್ಹಗೊಳಸಲಾಗಿದೆ.
2	ಬೆಂಗಳೂರಿನ ಸಿದ್ದಾಪುರದಲ್ಲಿ ಡಾ: ಬಿ.ಆರ್. ಅಂಬೇಡ್ಕರ್ ಮತ್ತು ಬಿ. ಕೃಷ್ಣಪ್ಪ ಸ್ಮಾರಕ ಭವನ ನಿರ್ಮಾಣ	ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರಾದ ಶ್ರೀ ಆರ್. ರಾಮರೆಡ್ಡಿ ರವರ ಟೆಂಡರ್ ಬಿಡ್ ಕೆಪಾಸಿಟಿ ಅಗತ್ಯವಿರುವ ಬಿಡ್ ಕೆಪಾಸಿಟಿಗಿಂತ ಹೆಚ್ಚಾಗಿದ್ದು, ಸದರಿಯವನ್ನು ಅರ್ಹಗೊಳಸಲಾಗಿದೆ.
3	ತುಮಕೂರು ತಾಲ್ಲೂಕು ನರಸಾಪುರದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿಶೇಷ ದುರಸ್ಥಿ	ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರಾದ ಶ್ರೀ ಸಿ. ಕಾರ್ತಿಕ್ ಯಾದವ್, ಗುತ್ತಿಗೆದಾರರು ತಮ್ಮಲ್ಲಿರುವ ತಾಂತ್ರಿಕ ಸಿಬ್ಬಂದಿಯವರ ವಿದ್ಯಾರ್ಹತೆಯ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವುದಿಲ್ಲ. ನೀರು ಸರಬರಾಜು ಕಾಮಗಾರಿ ನಿರ್ವಹಣೆಗೆ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವುದಿಲ್ಲ ಹಾಗೂ ನೀರು ಸರಬರಾಜು ಟ್ಯಾಂಕರ್ ತಮ್ಮಲ್ಲಿ ಲಭ್ಯವಿರುವ ಬಗ್ಗೆ ದಾಖಲಾತಿ/ ಇನ್‌ವಾಯ್ಸ್ ಸಲ್ಲಿಸಿರುವುದಿಲ್ಲವೆಂದು ತಾಂತ್ರಿಕ ಬಿಡ್ ಪರಿಶೀಲನೆಯ ವಿವರಣಾ ಪಟ್ಟಿಯಲ್ಲಿ ನಮೂದಿಸಿದೆ. ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಮತ್ತೊಬ್ಬ ಗುತ್ತಿಗೆದಾರರಾದ ಶ್ರೀ ಎಂ. ಹೆಚ್. ನಾರಾಯಣಪ್ಪ ರವರು ನೀರು ಸರಬರಾಜು ಕಾಮಗಾರಿ ನಿರ್ವಹಣೆಗೆ ಸಂಬಂಧಿಸಿದ ಪ್ರಮಾಣ ಪತ್ರಗಳು ಸಲ್ಲಿಸಿರುವುದಿಲ್ಲವೆಂದು ತಾಂತ್ರಿಕ ಬಿಡ್ ಪರಿಶೀಲನೆಯ ವಿವರಣಾ ಪಟ್ಟಿಯಲ್ಲಿ ನಮೂದಿಸಿದೆ. ಆದಾಗ್ಯೂ ಇಬ್ಬರೂ ಗುತ್ತಿಗೆದಾರರನ್ನು ತಾಂತ್ರಿಕ ಬಿಡ್‌ನಲ್ಲಿ ಅರ್ಹಗೊಳಸಲಾಗಿದೆ.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಗುತ್ತಿಗೆದಾರರ ವಿವರ
4	ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕು ಕೆ.ಸಿ ರೊಪ್ಪದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿಶೇಷ ದುರಸ್ಥಿ	ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರಾದ ಶ್ರೀ ಸಿ. ಕಾರ್ತಿಕ್ ಯಾದವ್, ಗುತ್ತಿಗೆದಾರರು ತಮ್ಮಲ್ಲಿರುವ ತಾಂತ್ರಿಕ ಸಿಬ್ಬಂದಿಯವರ ವಿದ್ಯಾರ್ಹತೆಯ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವುದಿಲ್ಲ. ನೀರು ಸರಬರಾಜು ಕಾಮಗಾರಿ ನಿರ್ವಹಣೆಗೆ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವುದಿಲ್ಲ ಹಾಗೂ ನೀರು ಸರಬರಾಜು ಟ್ಯಾಂಕರ್ ತಮ್ಮಲ್ಲಿ ಲಭ್ಯವಿರುವ ಬಗ್ಗೆ ದಾಖಲಾತಿ/ ಇನ್‌ವಾಯ್ಸ್ ಸಲ್ಲಿಸಿರುವುದಿಲ್ಲವೆಂದು ತಾಂತ್ರಿಕ ಬಿಡ್ ಪರಿಶೀಲನೆಯ ವಿವರಣಾ ಪಟ್ಟಿಯಲ್ಲಿ ನಮೂದಿಸಿದೆ. ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಮತ್ತೊಬ್ಬ ಗುತ್ತಿಗೆದಾರರಾದ ಶ್ರೀ ಎಂ. ಹೆಚ್. ನಾರಾಯಣಪ್ಪ ರವರು ನೆಲಹಾಸು ಮತ್ತು ಇಟ್ಟಿಗೆ (Flooring & ¨BBM) ಕಾಮಗಾರಿ ನಿರ್ವಹಣೆಗೆ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವುದಿಲ್ಲವೆಂದು ತಾಂತ್ರಿಕ ಬಿಡ್ ಪರಿಶೀಲನೆಯ ವಿವರಣಾ ಪಟ್ಟಿಯಲ್ಲಿ ನಮೂದಿಸಿದೆ. ಆದಾಗ್ಯೂ ಇಬ್ಬರೂ ಗುತ್ತಿಗೆದಾರರನ್ನು ತಾಂತ್ರಿಕ ಬಿಡ್‌ನಲ್ಲಿ ಅರ್ಹಗೊಳಿಸಲಾಗಿದೆ.
5	ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು ಹುಲಿಕುಂಟೆಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಲೆಯ ವಿಶೇಷ ದುರಸ್ಥಿ	ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರಾದ ಶ್ರೀ ವಿ.ಎ. ಅಶ್ವಿನ್ ಗುತ್ತಿಗೆದಾರರು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿರುವ ವಾರ್ಷಿಕ ಆದಾಯ ತೆರಿಗೆ ವಿವರಗಳನ್ನು ಸಲ್ಲಿಸಿರುವುದಿಲ್ಲ. ವಿದ್ಯುತ್ ಕಾಮಗಾರಿ ನಿರ್ವಹಣೆಯ ಬಗ್ಗೆ ಮತ್ತು ನೀರು ಸರಬರಾಜು ಕಾಮಗಾರಿ ನಿರ್ವಹಣಗೆ ಸಂಬಂದಿಸಿದ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವುದಿಲ್ಲವೆಂದು ತಾಂತ್ರಿಕ ಬಿಡ್ ಪರಿಶೀಲನೆಯ ವಿವರಣಾ ಪಟ್ಟಿಯಲ್ಲಿ ನಮೂದಿಸಿದೆ. ಆದಾಗ್ಯೂ ಸದರಿ ಗುತ್ತಿಗೆದಾರರನ್ನು ತಾಂತ್ರಿಕ ಬಿಡ್‌ನಲ್ಲಿ ಅರ್ಹಗೊಳಿಸಲಾಗಿದೆ.
6	ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿಶೇಷ ದುರಸ್ಥಿ	ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರಾದ ಶ್ರೀ ಆರ್. ರಾಮಲಿಂಗೇಗೌಡ ರವರ ಟೆಂಡರ್ ಬಿಡ್ ಕೆಪಾಸಿಟಿಯು ಟೆಂಡರ್‌ನಲ್ಲಿ ನಿಗಧಿಪಡಿಸಿದ ಬಿಡ್‌ಕೆಪಾಸಿಟಿಗಿಂತ ಕಡಿಮೆ ಇದ್ದು, ಇದೇ ರೀತಿಯ ಕಾಮಗಾರಿ ನಿವಹಿಸಿರುವ ಬಗ್ಗೆ ದೃಢೀಕರಣ ಪತ್ರ ಸಲ್ಲಿಸದೇ ಇರುವುದರಿಂದ ಅನರ್ಹರಾಗಿದ್ದರೂ, ತಾಂತ್ರಿಕ ಬಿಡ್‌ನಲ್ಲಿ ಅರ್ಹಗೊಳಿಸಲಾಗಿದೆ.
7	ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಮಜಲಟ್ಟಿಯಲ್ಲಿರವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಹೆಚ್ಚುವರಿ ಸಿಬ್ಬಂದಿ ಗೃಹ ನಿರ್ಮಾಣ ಮತ್ತು ಮೂಲ ಸೌಲಭ್ಯ ಕಾಮಗಾರಿ	ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರಾದ ಶ್ರೀ ಇಮಾಮ್ ಎಂ. ಮೂಡಲಗಿ ಮತ್ತು ಮೆ॥ ನೇಹಾ ಕನ್‌ಸ್ಟ್ರಕ್ಷನ್ಸ್ ರವರು ನಿರ್ವಹಿಸಿರುವ ಸ್ಟೀಲ್‌ನ ಪರಿಮಾಣವು ಟೆಂಡರ್ ಅರ್ಹತೆಗಾಗಿ ನಿಗಧಿಪಡಿಸಿದ ಸ್ಟೀಲ್‌ನ ಪರಿಮಾಣಗಿಂತ ಕಡಿಮೆ ಇದ್ದು ಅನರ್ಹರಾಗಿದ್ದರೂ, ತಾಂತ್ರಿಕ ಬಿಡ್‌ನಲ್ಲಿ ಅರ್ಹಗೊಳಿಸಲಾಗಿದೆ.
8	ಚಾಮರಾಜನಗರ ಜಿಲ್ಲೆ, ಹೆಚ್.ಡಿ ಕೋಟೆ ತಾಲ್ಲೂಕಿನ ಸೊಳ್ಳೆಪುರದಲ್ಲಿರುವ ಏಕಲವ್ಯ ವಸತಿ ಶಾಲೆಗೆ ಕ್ರೀಡಾ ಸಂಕೀರ್ಣ ನಿರ್ಮಾಣ	ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರಾದ ಶ್ರೀ ಡಿ.ಎಸ್.ಚಂದ್ರು (ಆಶ್ರಯ ಕನ್‌ಸ್ಟ್ರಕ್ಷನ್) ಮತ್ತು ಶ್ರೀ ಕೋಟಿ ಲಕ್ಷ್ಮೀ ನಾರಾಯಣ (ಮೆ॥ಸಿಗ್ಮಾ ಪ್ರಾಜೆಕ್ಟ್) ರವರು ನಿರ್ವಹಿಸಿರುವ ಮಣ್ಣು ಅಗೆತದ ಕೆಲಸದ ಪರಿಮಾಣವು ಟೆಂಡರ್ ಅರ್ಹತೆಗಾಗಿ ನಿಗಧಿಪಡಿಸಿದ ಮಣ್ಣು ಅಗೆತದ ಕೆಲಸದ ಪರಿಮಾಣಗಿಂತ ಕಡಿಮೆ ಇದ್ದು ಅನರ್ಹರಾಗಿದ್ದರೂ, ತಾಂತ್ರಿಕ ಬಿಡ್‌ನಲ್ಲಿ ಅರ್ಹಗೊಳಿಸಲಾಗಿದೆ.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಗುತ್ತಿಗೆದಾರರ ವಿವರ
9	ದಕ್ಷಿಣ ಕನ್ನಡ ಮಂಜವಾಡಿ ತಾಲ್ಲೂಕಿನ ಪರಿಶಿಷ್ಟ ವರ್ಗದ ಮೆಟ್ರಿಕ್ ನಂತರದ ಬಾಲಕರ ವಸತಿ ಶಾಲೆ ನಿರ್ಮಾಣ	ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರಾದ ಶ್ರೀ ಅವಿನಾಶ್ ಅಂಚನ್ ರವರು ತಮ್ಮಲ್ಲಿರುವ ತಾಂತ್ರಿಕ ಸಿಬ್ಬಂದಿಯವರ ವಿದ್ಯಾರ್ಹತೆಯ ಪ್ರಮಾಣ ಪತ್ರಗಳನ್ನು ಸಲ್ಲಿಸದಿರುವುದರಿಂದ ಅನರ್ಹರಾಗಿದ್ದರೂ, ತಾಂತ್ರಿಕ ಬಿಡ್‌ನಲ್ಲಿ ಅರ್ಹಗೊಳಿಸಲಾಗಿದೆ.
10	ಕೊಪ್ಪಳ ಜಿಲ್ಲೆ, ಗಂಗಾವತಿ ತಾಲ್ಲೂಕಿನಲ್ಲಿ ಪರಿಶಿಷ್ಟ ವರ್ಗದ ಮೆಟ್ರಿಕ್ ನಂತರದ ಬಾಲಕರ ವಸತಿ ಶಾಲೆ ನಿರ್ಮಾಣ	ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರಾದ ಶ್ರೀ ಕೆ. ರಾಮಮೂರ್ತಿ ನಾಯ್ಡು ರವರು ಟೆಂಡರ್‌ಗೆ ಅಗತ್ಯವಿರುವ ಬಿಡ್ ಕೆಪಾಸಿಟಿಗಿಂತ ಹೆಚ್ಚಾಗಿದ್ದು, ಅರ್ಹರಾಗಿದ್ದರೂ, ಸದರಿಯವರನ್ನು ಈ ಕಾಮಗಾರಿಗೆ ಅಗತ್ಯವಿರುವ ಬಿಡ್ ಕೆಪಾಸಿಟಿ ಇರುವುದಿಲ್ಲವೆಂದು ಅನರ್ಹಗೊಳಿಸಲಾಗಿದೆ.
11	ಕೊಪ್ಪಳ ಜಿಲ್ಲೆ, ಗಂಗಾವತಿ ತಾಲ್ಲೂಕಿನಲ್ಲಿ ಪರಿಶಿಷ್ಟ ವರ್ಗದ ಮೆಟ್ರಿಕ್ ನಂತರದ ಬಾಲಕರ ವಸತಿ ಶಾಲೆ ನಿರ್ಮಾಣ	ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರಾದ ಶ್ರೀ ಕೆ. ರಾಮಮೂರ್ತಿ ನಾಯ್ಡು ರವರು ಟೆಂಡರ್‌ಗೆ ಅಗತ್ಯವಿರುವ ಬಿಡ್ ಕೆಪಾಸಿಟಿಗಿಂತ ಹೆಚ್ಚಾಗಿದ್ದು, ಅರ್ಹರಾಗಿದ್ದರೂ, ಸದರಿಯವರನ್ನು ಈ ಕಾಮಗಾರಿಗೆ ಅಗತ್ಯವಿರುವ ಬಿಡ್ ಕೆಪಾಸಿಟಿ ಇರುವುದಿಲ್ಲವೆಂದು ಅನರ್ಹಗೊಳಿಸಲಾಗಿದೆ.
12	ಕಡೂರು ತಾಲ್ಲೂಕಿನ ಕಾಮನಕೆರೆಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜನ್ನಾಗಿ ಮೇಲ್ದರ್ಜೇಗೇರಿಸುವ ಕಾಮಗಾರಿ	ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರಾದ ಶ್ರೀ. ಎಂ. ಸತ್ಯನಾರಾಯಣರಾಜು ರವರು ಮತ್ತು ಶ್ರೀ. ಹೆಚ್. ಶಿವಪ್ರಸಾದ್‌ರವರು ನೀರು ಸರಬರಾಜು ಕಾಮಗಾರಿ ನಿರ್ವಹಣೆ ದೃಢೀಕರಣ & ನೊಂದಾಣಿ ಪತ್ರವನ್ನು ಒದಗಿಸಿರುವುದಿಲ್ಲವೆಂದು ನಮೂದಿಸಲಾಗಿದ್ದು, ನಿಗದಿಪಡಿಸಿದ ಕಲ್ಲು ಕಟ್ಟಡದ ಕೆಲಸ ಮತ್ತು ನೆಲಹಾಸು ಕೆಲಸ ನಿರ್ವಹಣಾ ದೃಢೀಕರಣ ಪತ್ರ ನೀಡದಿರುವುದರಿಂದ ಅನರ್ಹರಾಗಿದ್ದರೂ, ತಾಂತ್ರಿಕ ಬಿಡ್‌ನಲ್ಲಿ ಅರ್ಹಗೊಳಿಸಲಾಗಿದೆ.
13	ಅಫಜಲ್‌ಪುರ ತಾಲ್ಲೂಕಿನ ಅರ್ಜುನಗಿಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜನ್ನಾಗಿ ಮೇಲ್ದರ್ಜೇಗೇರಿಸುವ ಕಾಮಗಾರಿ	ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರಾದ ಶ್ರೀ. ವಿ.ಬಿ. ಪ್ರಸಾದ್ ರೆಡ್ಡಿ ರವರ ತಾಂತ್ರಿಕ ಬಿಡ್ ಕೆಪಾಸಿಟಿ ನಿಗದಿಪಡಿಸಲಾದ ಬಿಡ್ ಕೆಪಾಸಿಟಿ ಮೊತ್ತಕ್ಕಿಂತ ಹೆಚ್ಚಾಗಿದ್ದು ಅರ್ಹರಾಗಿದ್ದರೂ, ಅನರ್ಹಗೊಳಿಸಲಾಗಿದೆ.
14	ಶಹಾಪುರ ತಾಲ್ಲೂಕಿನ, ಬೇವಿನಹಳ್ಳಿಯಲ್ಲಿರುವ ಪರಿಶಿಷ್ಟ ಜಾತಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜನ್ನಾಗಿ ಮೇಲ್ದರ್ಜೇಗೇರಿಸುವ ಕಾಮಗಾರಿ	ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರಾದ ಶ್ರೀ. ವಿ.ಬಿ. ಪ್ರಸಾದ್ ರೆಡ್ಡಿ ರವರ ತಾಂತ್ರಿಕ ಬಿಡ್ ಕೆಪಾಸಿಟಿ ನಿಗದಿಪಡಿಸಲಾದ ಬಿಡ್ ಕೆಪಾಸಿಟಿ ಮೊತ್ತಕ್ಕಿಂತ ಹೆಚ್ಚಾಗಿದ್ದು ಅರ್ಹರಾಗಿದ್ದರೂ, ಅನರ್ಹಗೊಳಿಸಲಾಗಿದೆ.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಗುತ್ತಿಗೆದಾರರ ವಿವರ
15	ಗಂಗಾವತಿ ತಾಲ್ಲೂಕಿನ ಸಿಂಧನೂರು ಸಿದ್ದಾಪುರದಲ್ಲಿರುವ ಪರಿಶಿಷ್ಟ ಜಾತಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜನ್ನಾಗಿ ಮೇಲ್ದರ್ಜೇಗೇರಿಸುವ ಕಾಮಗಾರಿ	ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರಾದ ಶ್ರೀ. ವಿ.ಬಿ. ಪ್ರಸಾದ್ ರೆಡ್ಡಿ ರವರ ತಾಂತ್ರಿಕ ಬಿಡ್ ಕೆಪಾಸಿಟಿ ನಿಗಧಿಪಡಿಸಲಾದ ಬಿಡ್ ಕೆಪಾಸಿಟಿ ಮೊತ್ತಕ್ಕಿಂತ ಹೆಚ್ಚಾಗಿದ್ದು ಅರ್ಹರಾಗಿದ್ದರೂ, ಅನರ್ಹಗೊಳಸಲಾಗಿದೆ.
16	ಸಿಂಧನೂರು ತಾಲ್ಲೂಕಿನ ಉಮಲೋಟಿಯಲ್ಲಿರುವ ಪರಿಶಿಷ್ಟ ವರ್ಗದ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜನ್ನಾಗಿ ಮೇಲ್ದರ್ಜೇಗೇರಿಸುವ ಕಾಮಗಾರಿ	ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರಾದ ಶ್ರೀ. ವಿ.ಬಿ. ಪ್ರಸಾದ್ ರೆಡ್ಡಿ ರವರ ತಾಂತ್ರಿಕ ಬಿಡ್ ಕೆಪಾಸಿಟಿ ನಿಗಧಿಪಡಿಸಲಾದ ಬಿಡ್ ಕೆಪಾಸಿಟಿ ಮೊತ್ತಕ್ಕಿಂತ ಹೆಚ್ಚಾಗಿದ್ದು ಅರ್ಹರಾಗಿದ್ದರೂ, ಅನರ್ಹಗೊಳಸಲಾಗಿದೆ.
17	ಇಂಡಿ ತಾಲ್ಲೂಕಿನ, ಮರಗೂರುನಲ್ಲಿರುವ ಪರಿಶಿಷ್ಟ ಜಾತಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜನ್ನಾಗಿ ಮೇಲ್ದರ್ಜೇಗೇರಿಸುವ ಕಾಮಗಾರಿ	ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರಾದ ಶ್ರೀ. ವಿ.ಬಿ. ಪ್ರಸಾದ್ ರೆಡ್ಡಿ ರವರ ತಾಂತ್ರಿಕ ಬಿಡ್ ಕೆಪಾಸಿಟಿ ನಿಗಧಿಪಡಿಸಲಾದ ಬಿಡ್ ಕೆಪಾಸಿಟಿ ಮೊತ್ತಕ್ಕಿಂತ ಹೆಚ್ಚಾಗಿದ್ದು ಅರ್ಹರಾಗಿದ್ದರೂ, ಅನರ್ಹಗೊಳಸಲಾಗಿದೆ. ಗುತ್ತಿಗೆದಾರರಾದ ಶ್ರೀ. ಶಂಕರ್ ಗೌಡ ಎನ್ ಹೊಸಮನಿ ರವರು ಟೆಂಡರ್‌ನಲ್ಲಿ ನಿಗಧಿಪಸಿರುವ ಪ್ರಮಾಣಕ್ಕಿಂತಲೂ ಆರ್.ಸಿ.ಸಿ ಕೆಲಸವನ್ನು ಕಡಿಮೆ ನಿರ್ವಹಿಸಿದ್ದು, ಅನರ್ಹರಾಗಿದ್ದರೂ, ಸದರಿ ಗುತ್ತಿಗೆದಾರರನ್ನು ತಾಂತ್ರಿಕ ಬಿಡ್‌ನಲ್ಲಿ ಅರ್ಹಗೊಳಸಲಾಗಿದೆ.
18	ಮಾನ್ವಿ ತಾಲ್ಲೂಕಿನ, ವಟಗಲ್ ಗ್ರಾಮದಲ್ಲಿರುವ ಇಂದಿರಾ ಗಾಂಧಿ ವಸತಿ ಶಾಲಾ ಸಂಕೀರ್ಣ ನಿರ್ಮಾಣ ಪರಿಶಿಷ್ಟ ಜಾತಿಯ ಮೊರಾರ್ಜಿ ದೇಸಾಯಿ ವಸತಿ ಶಾಲಾ ಸಂಕೀರ್ಣ ನಿರ್ಮಾಣ	ಈ ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಗುತ್ತಿಗೆದಾರರಾದ ಶ್ರೀ.ವಿ.ವಿ.ಎಸ್. ರಾಮಕೃಷ್ಣ ರವರ ತಾಂತ್ರಿಕ ಬಿಡ್ ಕೆಪಾಸಿಟಿ ನಿಗಧಿಪಡಿಸಲಾದ ಬಿಡ್ ಕೆಪಾಸಿಟಿ ಮೊತ್ತಕ್ಕಿಂತ ಹೆಚ್ಚಾಗಿದ್ದು ಅರ್ಹರಾಗಿದ್ದರೂ, ಅನರ್ಹಗೊಳಸಲಾಗಿದೆ.

ಅನುಬಂಧ–03

2017-18ನೇ ಸಾಲಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ರಾಜ್ಯ ವ್ಯಾಪಿ ಕೈಗೊಂಡ ಕಾಮಗಾರಿಗಳ ಅವ್ಯವಹಾರ ಕುರಿತು ಕೈಗೊಂಡಿರುವ ವಿಶೇಷ ಲೆಕ್ಕಪರಿಶೋಧನಾ ವರದಿ.

142

3

2017–18ನೇ ಸಾಲಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ರಾಜ್ಯ ವ್ಯಾಪಿ ಕೈಗೊಂಡ ಕಾಮಗಾರಿಗಳ ಅವ್ಯವಹಾರ ಕುರಿತು ಕೈಗೊಂಡಿರುವ ವಿಶೇಷ ಲೆಕ್ಕಪರಿಶೋಧನಾ ವರದಿ

2017–18ನೇ ಸಾಲಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ರಾಜ್ಯ ವ್ಯಾಪಿ ಕೈಗೊಂಡ ಕಾಮಗಾರಿಗಳ ಅವ್ಯವಹಾರ ಕುರಿತು ಕೈಗೊಂಡಿರುವ ವಿಶೇಷ ಲೆಕ್ಕಪರಿಶೋಧನಾ ವರದಿ:

1. ಪ್ರಸ್ತಾವನೆ:

ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 69 ರಾಲೆಪ 2019, ಬೆಂಗಳೂರು ದಿನಾಂಕ: 29–07–2019 ರಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ರಾಜ್ಯ ವ್ಯಾಪಿ ಕೈಗೊಂಡ ಕಾಮಗಾರಿಗಳಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಕುರಿತು ವಿಶೇಷ ಲೆಕ್ಕಪರಿಶೋಧನೆ ಕೈಗೊಂಡು ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವ ಸಲುವಾಗಿ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ಲೆಕ್ಕಪರಿಶೋಧನಾ ತಂಡವನ್ನು ರಚಿಸಲಾಗಿದ್ದು, ಅದರಂತೆ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಗಿದೆ. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ನ್ಯೂನ್ಯತೆಗಳನ್ನು ಹಾಗೂ ಲೋಪದೋಷಗಳನ್ನು ಮುಂದಿನ ಕಂಡಿಕೆಗಳಲ್ಲಿ ಪ್ರಸ್ತಾಪಿಸಲಾಗಿದೆ.

2.1 ಲೆಕ್ಕ ಪರಿಶೋಧನಾ ತಂಡ :

1	ಶ್ರೀ ಎಸ್.ಎನ್. ಚಂದ್ರಶೇಖರ	ಅಪರ ನಿರ್ದೇಶಕರು
2	ಶ್ರೀಎಸ್.ಪಿ. ಸುರೇಶ್‌ಕುಮಾರ್	ಉಪ ನಿರ್ದೇಶಕರು
3	ಶ್ರೀ ಆಂಜನಪ್ಪ	ಉಪ ನಿರ್ದೇಶಕರು
4	ಶ್ರೀ ವಿ. ಚಂದ್ರಶೇಖರ	ಲೆಕ್ಕ ಪರಿಶೋಧನಾಧಿಕಾರಿ
5	ಶ್ರೀ ಟಿ. ತಿಮ್ಮರಾಯಪ್ಪ	ಲೆಕ್ಕಾಧೀಕ್ಷಕರು

1. ತನಿಖೆ ಪ್ರಾರಂಭಿಸಿದ ದಿನಾಂಕ : 19–08–2019
2. ತನಿಖೆ ಮುಕ್ತಾಯಗೊಳಿಸಿದ ದಿನಾಂಕ : 27–09–2019

2.2 ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಆಡಳಿತ ವರ್ಗದ ವಿವರ:

ಹುದ್ದೆ	ಹೆಸರು	ಅವಧಿ
ಕಾರ್ಯ ನಿರ್ವಾಹಕ ನಿರ್ದೇಶಕರು	1) ಶ್ರೀ ಎಂ.ಆರ್. ಹಿರೇಮಠ್ ಕೆ.ಎ.ಎಸ್.,	01.04.2017 ರಿಂದ 17.07.2017
	2) ಶ್ರೀ ಅನ್ಬುಕುಮಾರ್ ಐ.ಎ.ಎಸ್.,	17.07.2017 ರಿಂದ 31.07.2017
	3) ಶ್ರೀಮತಿ ರಮ ಆರ್.	01.08.2017 ರಿಂದ 03.08.2017
	4) ಶ್ರೀ ವಿಕಾಸ್‌ಕುಮಾರ್ ವಿಕಾಸ್ ಐ.ಪಿ.ಎಸ್.,	03.08.2017 ರಿಂದ 10.08.2017
	5) ಶ್ರೀ ವಿ. ದೊಡ್ಡಪ್ಪ ಕೆ.ಎ.ಎಸ್.,	10.08.2017 ರಿಂದ 31.03.2018
ಮುಖ್ಯ ಲೆಕ್ಕಾಧಿಕಾರಿ	ಶ್ರೀ ದೊಡ್ಡಸಿದ್ದಯ್ಯ	01.04.2017 ರಿಂದ 31.03.2018
ಉಪ ನಿಯಂತ್ರಕರು	ಶ್ರೀ ಶ್ರೀನಿವಾಸಲು	01.04.2017 ರಿಂದ 31.03.2018
ಅಧೀಕ್ಷಕಅಭಿಯಂತರು	1) ಶ್ರೀ ಬಿ.ಕೆ. ಪವಿತ್ರ	01.04.2017 ರಿಂದ 06.09.2017
	2) ಶ್ರೀ ಸಣ್ಣಚಿತ್ತಯ್ಯ	06.09.2017 ರಿಂದ 31.03.2018

ಪಾಲಿಸದೇ ಬಹಳಷ್ಟು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿರುವ ಬಗ್ಗೆ ಹಾಗೂ 2017-18 ನೇ ಸಾಲಿನ ಆಯವ್ಯಯದಲ್ಲಿ ರೂ.650 ಕೋಟಿ ಅನುದಾನ ಮಾತ್ರ ಲಭ್ಯವಿದ್ದರೂ ಅಂದಾಜು ರೂ.3000.00 ಕೋಟಿಗೂ ಮಿಗಿಲಾದ ಕಾಮಗಾರಿಗಳಿಗೆ ಯಾವುದೇ ಅನುಮೋದನೆ ಇಲ್ಲದೆ ಸಂಘದ ಅಧಿಕಾರಿಗಳು ಟೆಂಡರ್ ಆಹ್ವಾನಿಸಿರುವ ಬಗ್ಗೆ ಹಾಗೂ ಕಾಮಗಾರಿಗಳ ನಿರ್ವಹಣೆಯಲ್ಲಿ ಹಲವು ಸ್ವರೂಪದ ನ್ಯೂನ್ಯತೆಗಳು ನಡೆದಿರುವ ಬಗ್ಗೆ ಚರ್ಚಿಸಿ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ಲೆಕ್ಕಪರಿಶೋಧನೆ ನಡೆಸುವಂತೆ ಆರ್ಥಿಕ ಇಲಾಖೆಗೆ ಸೂಚಿಸಿದ್ದು, ಅದರಂತೆ ಸದರಿ ನ್ಯೂನ್ಯತೆಗಳ ಬಗ್ಗೆ ವಿಶೇಷ ಲೆಕ್ಕಪರಿಶೋಧನೆ ಕೈಗೊಳ್ಳಲಾಗಿದೆ.

2.5 ಈ ಕೆಳಕಂಡ ಪ್ರಾವಿಧಾನಗಳಡಿಯಲ್ಲಿ ಲೆಕ್ಕ ಪರಿಶೋಧನೆಯನ್ನು ಕೈಗೊಳ್ಳಲಾಗಿದೆ:

1. ಕರ್ನಾಟಕ ಸರ್ಕಾರದ ಆಯವ್ಯಯ ಕೈಪಿಡಿ 1975
2. ಕರ್ನಾಟಕ ಆರ್ಥಿಕ ಸಂಹಿತೆ 1958
3. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳು 2000 ಹಾಗೂ ಆರ್ಥಿಕ ಇಲಾಖೆಯಿಂದ ಕಾಲ ಕಾಲಕ್ಕೆ ಸಾರ್ವಜನಿಕ ಸಂಗ್ರಹಣೆಯ ವಿಷಯದಲ್ಲಿ ಹೊರಡಿಸಲಾದ ಸುತ್ತೋಲೆಗಳು ಮತ್ತು ಸ್ಪಷ್ಟನೆಗಳು.
4. ಲೋಕೋಪಯೋಗಿ ಇಲಾಖೆಯ ಇಲಾಖಾ ಸಂಹಿತೆ ಮತ್ತು ಲೆಕ್ಕ ಸಂಹಿತೆ.
5. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಿವಿಧ ಅಧಿಕಾರಿಗಳಿಗೆ ನೀಡಲಾದ ಆಡಳಿತಾತ್ಮಕ ಮತ್ತು ತಾಂತ್ರಿಕ ಅಧಿಕಾರ ಪ್ರತ್ಯಾಯೋಜನೆ ಆದೇಶಗಳು ಹಾಗೂ
6. ಪ್ರಚಲಿತ ನಿಯಮಗಳು ಮತ್ತು ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳು, ಸುತ್ತೋಲೆಗಳು ಇತ್ಯಾದಿ.

2.6 ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧಿಕಾರಿಗಳಿಗೆ ಕಾಮಗಾರಿಗಳ ನಿರ್ವಹಣೆಗಾಗಿ ಅಧಿಕಾರ ಪ್ರತ್ಯಾಯೋಜನೆ ವಿವರ:

ಸರ್ಕಾರದ ಅಧೀನ ಕಾರ್ಯದರ್ಶಿ-1, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 608 ಬಿಇಟಿ 2015, ದಿನಾಂಕ: 10-12-2015 ರಲ್ಲಿ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧಿಕಾರಿಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ವಿಷಯಗಳಲ್ಲಿ ಅಧಿಕಾರ ಪ್ರತ್ಯಾಯೋಜನೆ ನೀಡಿದ್ದು, ಅದರಲ್ಲಿ ಕಾಮಗಾರಿಗಳ ನಿರ್ವಹಣೆಗೆ ಸಂಬಂಧಿಸಿದ ಅಧಿಕಾರ ಪ್ರತ್ಯಾಯೋಜನೆ ನೀಡಿರುವ ವಿವರ ಕೆಳಕಂಡಂತಿದೆ.

ಕ್ರ. ಸಂ.	ಅಧಿಕಾರ ಪ್ರತ್ಯಾಯೋಜನೆ ವಿವರ	ಲೆಕ್ಕಾಧಿಕಾರಿಗಳು ಮತ್ತು ಮುಖ್ಯ ಲೆಕ್ಕಾಧಿಕಾರಿಗಳು	ಮುಖ್ಯ ಲೆಕ್ಕಾಧಿಕಾರಿ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು	ಉಪಾಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು
1	ಆರ್ಥಿಕ ಅಧಿಕಾರ: ಬ್ಯಾಂಕ್ ಚೆಕ್ಕು/ಅಡ್ವೈಸ್‌ಗಳಿಗೆ ಸಹಿ ಮಾಡುವುದು	ರೂ.10.00 ಲಕ್ಷದ ವರೆಗೆ	ರೂ.20.00 ಲಕ್ಷದ ವರೆಗೆ	ರೂ.20.00 ಲಕ್ಷದ ಮೇಲ್ಪಟ್ಟು

2.3 ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸ್ಥಾಪನೆ ಮತ್ತು ಕಾರ್ಯ ಚಟುವಟಿಕೆಗಳ ವಿವರ:

ರಾಜ್ಯದಲ್ಲಿ ವಿವಿಧ ವರ್ಗಗಳ ಗ್ರಾಮೀಣ ಪ್ರದೇಶದ ಬಡ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಎಲ್ಲಾ ವರ್ಗಗಳ ವಸತಿ ಶಾಲೆಗಳನ್ನು ಒಂದೇ ಸಂಸ್ಥೆಯ ಕಾರ್ಯ ವ್ಯಾಪ್ತಿಗೆ ಒಳಪಡಿಸುವ ಉದ್ದೇಶದಿಂದ ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಸಕಇ 532 ಪಕವಿ 96 ದಿನಾಂಕ: 06.10.1999 ರಲ್ಲಿ "ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ" ವನ್ನು ಪ್ರಾರಂಭಿಸಲು ಆದೇಶಿಸಿದೆ. ಅದರಂತೆ ಈ ಸಂಘವನ್ನು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಅಡಿಯಲ್ಲಿ ದಿನಾಂಕ: 22.11.1999 ರಂದು ನೋಂದಣಿಯಾಗಿ ದಿನಾಂಕ: 02.02.2000 ರಂದು ಕಾರ್ಯಾರಂಭ ಮಾಡಿದೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ.

1. ವಸತಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳಿಗೆ ಗುಣಮಟ್ಟದ ವಿದ್ಯಾಭ್ಯಾಸ ನೀಡಲು ಶಿಕ್ಷಕರುಗಳಿಗೆ ಅಧ್ಯಯನ ಕೋರ್ಸುಗಳನ್ನು, ಸಮ್ಮೇಳನಗಳನ್ನು, ಉಪನ್ಯಾಸಗಳನ್ನು, ಕಾರ್ಯಾಗಾರಗಳನ್ನು ಮತ್ತು ಇತರೆ ಚಟುವಟಿಕೆಗಳನ್ನು ನಡೆಸುವುದು.
2. ಸಂಘದ ಮತ್ತು ವಸತಿ ಶಾಲೆಗಳ ಕಾರ್ಯ ಚಟುವಟಿಕೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ಅಗತ್ಯವಿರುವ ಸಮಿತಿಗಳನ್ನು ರಚಿಸುವುದು.
3. ವಸತಿ ಶಾಲೆಗಳಿಗೆ ಅಗತ್ಯವಿರುವ ಶಾಲಾ ಸಂಕೀರ್ಣಗಳನ್ನು (ಮೊರಾರ್ಜಿದೇಸಾಯಿ/ಶ್ರೀಮತಿ ಇಂದಿರಾಗಾಂಧಿ/ಡಾ: ಬಿ.ಆರ್. ಅಂಬೇಡ್ಕರ್/ಕಿತ್ತೂರು ರಾಣಿಚೆನ್ನಮ್ಮ ವಸತಿ ಶಾಲೆಗಳು, ಏಕಲವ್ಯ ಮಾದರಿ ವಸತಿ ಶಾಲೆಗಳು, ಡಾ: ಬಾಬು ಜಗಜೀವನರಾಮ್ ಭವನಗಳು, ಡಾ: ಬಿ.ಆರ್, ಅಂಬೇಡ್ಕರ್ ಸಮುದಾಯ ಭವನಗಳು, ಆದಿವಾಸಿ ಸಮುದಾಯ ಭವನಗಳು ಇತ್ಯಾದಿ) ನಿರ್ಮಿಸುವುದು ಮತ್ತು ಅವುಗಳ ನಿರ್ವಹಣೆ.
4. ಸರ್ಕಾರದಿಂದ ಗ್ರಾಮೀಣ ಭಾಗದ ಆರ್ಥಿಕವಾಗಿ ಹಿಂದುಳಿದ ಪ.ಜಾತಿ / ಪ.ವರ್ಗ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ಆಂಗ್ಲ ಮಾಧ್ಯಮದಲ್ಲಿ ನೀಡುವ ಉದ್ದೇಶದಿಂದ ಮಂಜೂರಾದ ವಸತಿ ಶಾಲೆಗಳ ನಿರ್ವಹಣೆ.

2.4 ಲೆಕ್ಕಪರಿಶೋಧನಾ ವ್ಯಾಪ್ತಿ:

ಸರ್ಕಾರದ ಆದೇಶ ದಿನಾಂಕ: 29.07.2019 ರ ಒದಲಾಗಿರುವ ಕ್ರಮ ಸಂಖ್ಯೆ (1) ರ ಟಿಪ್ಪಣಿಯಲ್ಲಿ ತಿಳಿಸಿರುವಂತೆ ಪ್ರಸ್ತುತ ಲೆಕ್ಕಪರಿಶೋಧನೆಯಲ್ಲಿ ಈ ಕೆಳಕಂಡ ವಿವರಗಳನ್ನು ಮತ್ತು ದಾಖಲೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

1: 2017-18 ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ "4225-01-277-2-03-386, 4225-01-796-0-01-132, 4225-02-277-2-03, 4225-03-277-2-04-386, 4225-03-277-04-422, 4225-03-277-2-04-423" - ಅಡಿಯಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಮತ್ತು ಭರಿಸಲಾದ ವೆಚ್ಚಗಳ ಒಟ್ಟಾರೆ ಮೊತ್ತ.

2. ಸದರಿ ಅವಧಿಯಲ್ಲಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಇ-ಸಂಗ್ರಹಣೆ ಮೂಲಕ ಕೈಗೊಂಡಿರುವ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಮಂಜೂರಾತಿ ಆದೇಶಗಳು ಮತ್ತು ನಿರ್ವಹಿಸಲಾದ ಕಡತಗಳು, ವಹಿಗಳು
3. ವಿಧಾನ ಮಂಡಲದ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯು ದಿನಾಂಕ: 02-07-2019 ರಂದು ನಡೆಸಿದ ಸಭೆಯಲ್ಲಿ ಕರ್ನಾಟಕ ರಾಜ್ಯ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಮಾರ್ಗ ಸೂಚಿಗಳನ್ನು

2.7 ಸಂಸ್ಥೆಯ 2017-18 ನೇ ಸಾಲಿನ ಆರ್ಥಿಕ ವಹಿವಾಟು:

ಸಂಸ್ಥೆಯಲ್ಲಿ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದ ವ್ಯವಹಾರಗಳನ್ನು ಒಟ್ಟು 17 ವಿವಿಧ ರಾಷ್ಟ್ರೀಯ ಬ್ಯಾಂಕ್ ಖಾತೆಗಳಲ್ಲಿ ವ್ಯವಹರಿಸಲಾಗಿದೆ. ಎಲ್ಲಾ ಬ್ಯಾಂಕ್ ಖಾತೆಗಳ ಒಟ್ಟಾರೆ ಆರ್ಥಿಕ ವಹಿವಾಟು/ಆರ್ಥಿಕ ಪರಿಸ್ಥಿತಿ ಈ ಕೆಳಕಂಡಂತಿದೆ:

(ರೂ. ಕೋಟಿಗಳಲ್ಲಿ)

ಪ್ರಾರಂಭಿಕ ಶಿಲ್ಕು	ರೂ.	526.17
2017-18 ರ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಮೊತ್ತ	ರೂ.	5453.95
2017-18 ರ ಸಾಲಿನಲ್ಲಿ ಅರ್ಜಿಸಲಾದ ಬಡ್ಡಿಯ ಮೊತ್ತ	ರೂ.	92.17
ಒಟ್ಟು	ರೂ.	6072.29
2017-18 ನೇ ಸಾಲಿನ ವೆಚ್ಚ	ರೂ.	4127.83
ನಗದು ಪುಸ್ತಕದ ಪ್ರಕಾರ 31.03.2018 ರಂದು ಅಂತಿಮ ಶಿಲ್ಕು	ರೂ.	1944.46
ಬ್ಯಾಂಕ್ ಪಾಸ್ ಪುಸ್ತಕದ ಪ್ರಕಾರ 31.03.2018 ರಂದು ಅಂತಿಮ ಶಿಲ್ಕು	ರೂ.	2046.76
ವ್ಯತ್ಯಾಸದ ಮೊತ್ತ (ನಗದೀಕರಣವಾಗದ ಚೆಕ್‌ಗಳು)	ರೂ.	102.30

ಒಟ್ಟು ಬಿಡುಗಡೆಯಾದ ಮೊತ್ತದಲ್ಲಿ ಪಾರ್ಕಿಂಗ್ ಫಂಡ್ ಸಹ ಸೇರಿರುತ್ತದೆ. (ಅನುಬಂಧ-1 ರ ಕ್ರಮ ಸಂಖ್ಯೆ 15 ರ ಬ್ಯಾಂಕ್ ಖಾತೆ ಸಂಖ್ಯೆ: ಎಸ್.ಬಿ.ಐ. 64081571734) ವಿವಿಧ ಬ್ಯಾಂಕ್ ಖಾತೆಗಳ ವ್ಯವಹಾರದ ವಿವರಗಳನ್ನು ಅನುಬಂಧ-1 ರಲ್ಲಿ ವರದಿಗೆ ಲಗತ್ತಿಸಿದೆ.

3. <u>ಲೆಕ್ಕಪತ್ರಗಳ ಪರಿಶೀಲನೆಯಲ್ಲಿ ಗಮನಿಸಲಾದ ನ್ಯೂನ್ಯತೆಗಳು:</u>

3.1 <u>ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿರುವ ಬಗ್ಗೆ:</u>

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ 2017-18ನೇ ಸಾಲಿನಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲಾ ಕಟ್ಟಡಗಳು, ಕಿತ್ತೂರು ರಾಣಿಚೆನ್ನಮ್ಮ ವಸತಿ ಶಾಲಾ ಕಟ್ಟಡಗಳು, ಇಂದಿರಾಗಾಂಧಿ ವಸತಿ ಶಾಲಾ ಕಟ್ಟಡಗಳು, ಡಾಃ ಬಿ.ಆರ್. ಅಂಬೇಡ್ಕರ್ ವಸತಿ ಶಾಲಾ ಕಟ್ಟಡಗಳು ಸೇರಿದಂತೆ ವಿವಿಧ ಕಟ್ಟಡ ಕಾಮಗಾರಿಗಳನ್ನು ನಿರ್ಮಾಣ ಮಾಡಲು ಟೆಂಡರ್ ಪ್ರಕ್ರಿಯೆ ಕೈಗೊಂಡು ಕಾರ್ಯಾದೇಶಗಳನ್ನು ನೀಡಲಾಗಿದೆ. ಸದರಿ ಸಾಲಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ 2017-18ನೇ ಸಾಲಿನಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಲಭ್ಯವಿರುವ, ನಿಗದಿಪಡಿಸಿರುವ ಮತ್ತು ಬಿಡುಗಡೆಯಾಗಿರುವ ಅನುದಾನದ ವಿವರಗಳು ಹಾಗೂ ಸದರಿ ಸಾಲಿನಲ್ಲಿ ಟೆಂಡರ್ ಆಹ್ವಾನಿಸಿ ಕಾರ್ಯಾದೇಶ ನೀಡಿರುವ ಕಾಮಗಾರಿಗಳ ಮೊತ್ತದ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 02/2019, ದಿನಾಂಕ: 26.08.2019 ರಲ್ಲಿ ಕೋರಲಾಗಿದ್ದು, ಸದರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರಕ್ಕೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ನೀಡಿರುವ ವಿವರಣೆಯಲ್ಲಿ 2017-18 ನೇ ಸಾಲಿನಲ್ಲಿ ಲಭ್ಯವಿರುವ ಅನುದಾನದ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

2	**ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ:** ಶಾಶ್ವತ ಕಾಮಗಾರಿಗಳ ಅಂದಾಜು ಪಟ್ಟಿ	**ಕಾರ್ಯನಿರ್ವಾಹಕ ನಿರ್ದೇಶಕರು** ರೂ.20.00 ಲಕ್ಷದವರೆಗೆ	**ಉಪಾಧ್ಯಕ್ಷರು** ರೂ.20.00 ಲಕ್ಷ ಮೇಲ್ಪಟ್ಟು ರೂ.5.00 ಕೋಟಿವರೆಗೆ	**ಸಚಿವ ಸಂಪುಟ** ರೂ. 5.00 ಕೋಟಿ ಮೇಲ್ಪಟ್ಟು
3	ತಾತ್ಕಾಲಿಕ/ನಿರ್ವಹಣೆ ಕಾಮಗಾರಿಗಳ ಅಂದಾಜು ಪಟ್ಟಿ	ರೂ.20.00 ಲಕ್ಷದ ವರೆಗೆ	ರೂ.20.00 ಲಕ್ಷ ಮೇಲ್ಪಟ್ಟು ರೂ.1.00 ಕೋಟಿವರೆಗೆ	-
4	ಅಂದಾಜು ಪಟ್ಟಿಗೆ ತಾಂತ್ರಿಕ ಅನುಮೋದನೆ ಹಾಗೂ ಪರಿಷ್ಕೃತ ಅಂದಾಜು/ಡಾಟಾ ದರಗಳಿಗೆ ಅನುಮೋದನೆ	**ಸ.ಕಾ.ನಿ. ಅಭಿಯಂತರರು** ರೂ.1.00 ಲಕ್ಷದ ವರೆಗೆ	**ಕಾರ್ಯಪಾಲಕ ಅಭಿಯಂತರರು** ರೂ.20.00 ಲಕ್ಷದ ವರೆಗೆ	**ಅಧೀಕ್ಷಕ ಅಭಿಯಂತರರು** ರೂ.20.00 ಲಕ್ಷದ ಮೇಲ್ಪಟ್ಟು
5	ಟೆಂಡರ್ ಮೌಲ್ಯ ಮಾಪನ ಹಾಗೂ ಪರಿಶೀಲನೆ	**ಆಡಳಿತ ಮಂಡಳಿ ರಚಿಸಿದ ಟೆಂಡರ್** ಪರಿಶೀಲನೆ ಸಮಿತಿ ಪೂರ್ಣ ಅಧಿಕಾರ		
6	ಟೆಂಡರ್ ಆಹ್ವಾನಿಸುವ ಪ್ರಾಧಿಕಾರ	**ಸಹಾಯಕ ಕಾರ್ಯಪಾಲಕ ಅಭಿಯಂತರು:** ಸಂಘದ ಉಪಾಧ್ಯಕ್ಷರ ಅನುಮೋದನೆ ಪಡೆದು ರೂ.3.00 ಕೋಟಿವರೆಗೆ		
7	ಶಾಶ್ವತ ಕಾಮಗಾರಿಯ ಅಂದಾಜು ಪಟ್ಟಿ ಪರಿಮಾಣ ಪರಿಷ್ಕರಣೆಗೊಂಡಲ್ಲಿ	**ಸಂಘದ ಉಪಾಧ್ಯಕ್ಷರು:** ಕಾಮಗಾರಿಯ ಪರಿಷ್ಕೃತ ಮೊತ್ತ ರೂ.3.00 ಕೋಟಿಗೆ ಸೀಮಿತ ಆದಲ್ಲಿ	**ಆರ್ಥಿಕ ಇಲಾಖೆಯ ಒಪ್ಪಿಗೆ ಪಡೆದ ನಂತರ ಉಪಾಧ್ಯಕ್ಷರ** ಅನುಮೋದನೆ: ಕಾಮಗಾರಿಯ ಪರಿಷ್ಕೃತ ಮೊತ್ತ ರೂ.3.00 ಕೋಟಿಗಿಂತ ಹೆಚ್ಚು ಹಾಗೂ ರೂ.5.00 ಕೋಟಿ ಒಳಗೆ ಇದ್ದಲ್ಲಿ	
8	ಟೆಂಡರ್ ಅನುಮೋದನೆ	ಆಡಳಿತ ಮಂಡಳಿ **ಸೃಜಿಸಿದ ಟೆಂಡರ ಅನುಮೋದನಾ ಸಮಿತಿ:** ಪೂರ್ಣ ಅಧಿಕಾರ		

ಸಮಾಜ ಕಲ್ಯಾಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ಸಂಘದ ಉಪಾಧ್ಯಕ್ಷರಾಗಿರುತ್ತಾರೆ

3	ಡಾ.ಬಿ.ಆರ್.ಅಂಬೇಡ್ಕರಭವನ/ ಬಾಬು ಜಗಜೀವನರಾಂ ಭವನ/ ದೇವರಾಜ ಅರಸು ಭವನ/ ಆದಿವಾಸಿ ಭವನಗಳು/ ವಾಲ್ಮೀಕಿ ಭವನ ನಿರ್ಮಾಣ	35	167.37
4	ಮೊರಾರ್ಜಿ ವಸತಿ ಶಾಲೆ ದುರಸ್ತಿ ಕಾಮಗಾರಿಗಳು	65	45.24
	ಒಟ್ಟು	**376**	**2157.46**

ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ನೇರ ನಿಯಂತ್ರಣ ಹೊಂದಿದ ಮೊರಾರ್ಜಿ ವಸತಿ ಶಾಲೆ/ಕಿತ್ತೂರು ರಾಣಿಚೆನ್ನಮ್ಮ ವಸತಿ ಶಾಲೆ/ಶ್ರೀಮತಿ ಇಂದಿರಾಗಾಂಧಿ ವಸತಿ ಶಾಲೆ/ಏಕಲವ್ಯ ವಸತಿ ಶಾಲೆಗಳ ನಿರ್ಮಾಣದ ಜೊತೆಗೆ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಸತಿ ನಿಲಯಗಳ ನಿರ್ಮಾಣ, ಕಾಲೇಜು ಶಿಕ್ಷಣ ಇಲಾಖೆಯ ಪ್ರಥಮ ದರ್ಜೆ ಕಾಲೇಜು ಕಟ್ಟಡಗಳ ನಿರ್ಮಾಣ, ಹಿಂದುಳಿದ ವರ್ಗಗಳ ಇಲಾಖೆಗೆ ಸಂಬಂಧಿಸಿದ ಡಾ॥ಬಿ.ಆರ್. ಅಂಬೇಡ್ಕರ ಭವನ/ಜಗಜೀವನರಾಂ ಭವನ/ಆದಿವಾಸಿ ಭವನ ಕಟ್ಟಡ ನಿರ್ಮಾಣ ಇತ್ಯಾದಿ ಕಾಮಗಾರಿಗಳ ಅನುಷ್ಠಾನ ಹಾಗೂ ಮೇಲ್ವಿಚಾರಣೆಯನ್ನು ಸಹ ಸರ್ಕಾರವು ಸಂಘಕ್ಕೆ ವಹಿಸಿಕೊಟ್ಟಿರುವುದರಿಂದ 2017-18 ರ ಸಾಲಿನಲ್ಲಿ ಸಂಘದ ವತಿಯಿಂದ ಮೇಲ್ಕಂಡ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಪಿಡಬ್ಲ್ಯುಡಿ 423 ಎಫ್‌ಸಿ-1 2018 ಬೆಂಗಳೂರು ದಿನಾಂಕ: 24.09.2018 ರಲ್ಲಿ ಲೋಕೋಪಯೋಗಿ, ನೀರಾವರಿ ಮತ್ತು ಸಣ್ಣ ನೀರಾವರಿ ಇಲಾಖೆಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದ ಕ್ರಮ ಸಂಖ್ಯೆ: 1(ಎ) ರ ಟಿಪ್ಪಣಿಯಂತೆ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಬೇಕಾದಲ್ಲಿ ಕಟ್ಟಡ ಕಾಮಗಾರಿಗಳಿಗೆ ಅಂದಾಜು ಮೊತ್ತದ ಶೇಕಡ 30 ರಷ್ಟು ಮತ್ತು ರಸ್ತೆ ಕಾಮಗಾರಿಗಳಿಗೆ ಅಂದಾಜು ಮೊತ್ತದ ಶೇಕಡ 50 ರಷ್ಟು ಅನುದಾನ ಲಭ್ಯವಿರಬೇಕಾಗಿರುತ್ತದೆ. 2017-18ನೇ ಸಾಲಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಒಟ್ಟು ರೂ.1591.01 ಕೋಟಿಗಳ ಅನುದಾನ ಲಭ್ಯವಿದ್ದು, ಸರ್ಕಾರದಿಂದ ವಿವಿಧ ಆದೇಶಗಳಲ್ಲಿ ಒಟ್ಟು ರೂ. 2157.46 ಕೋಟಿಗಳ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಸದರಿ ಸಾಲಿನಲ್ಲಿ ಒಟ್ಟು ರೂ.2184.19 ಕೋಟಿಗಳ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ ಹಾಗೂ ರೂ.2353.25 ಕೋಟಿಗಳ ಮೊತ್ತಕ್ಕೆ ಕಾರ್ಯಾದೇಶಗಳನ್ನು ನೀಡಲಾಗಿದ್ದು, ಈ ಎಲ್ಲಾ ಕಾಮಗಾರಿಗಳ ಬಿಲ್ಲು ಪಾವತಿಗೆ ಸಾಕಷ್ಟು ಅನುದಾನ ಲಭ್ಯವಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

3.2 <u>ಇ-ಸಂಗ್ರಹಣೆ ಮೂಲಕ ಕೈಗೊಂಡಿರುವ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿ ಏಕ ಬಿಡ್ ಟೆಂಡರ್‌ಗಳನ್ನು ಅನುಮೋದಿಸಿರುವ ಬಗ್ಗೆ:</u>

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ 2017-18ನೇ ಸಾಲಿನಲ್ಲಿ ಇ-ಸಂಗ್ರಹಣೆ ಮೂಲಕ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದೆ. ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಕಡತಗಳನ್ನು ಪರಿಶೀಲಿಸಿದಾಗ ಬಹಳಷ್ಟು ಏಕ ಹಾಗೂ ಎರಡು ಬಿಡ್ ಟೆಂಡರ್‌ಗಳನ್ನು ಅನುಮೋದಿಸಿರುವುದು ಕಂಡು ಬಂದಿದ್ದು ವಿವರಗಳನ್ನು ಅನುಬಂಧ-2 ರಲ್ಲಿ ವರದಿಗೆ ಲಗತ್ತಿಸಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳು 2000 ರನ್ವಯ ಹೆಚ್ಚಿನ ಬಿಡ್ಡುದಾರರು ಟೆಂಡರ್‌ನಲ್ಲಿ ಭಾಗವಹಿಸಿ ಹೆಚ್ಚು ಸ್ಪರ್ಧಾತ್ಮಕ ದರಗಳು ಬಂದಲ್ಲಿ ಸರ್ಕಾರಕ್ಕೆ ಹೆಚ್ಚು ಲಾಭದಾಯಕವಾಗುವ ಸಾಧ್ಯತೆ ಇರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 1066 ವೆಚ್ಚ-12/2016, ದಿನಾಂಕ: 20.03.2017 ರಲ್ಲಿ ಏಕ ಬಿಡ್ ಟೆಂಡರ್‌ಗಳ ಬಗ್ಗೆ ಈ ಕೆಳಕಂಡಂತೆ ಸ್ಪಷ್ಟೀಕರಣವನ್ನು ನೀಡಲಾಗಿದೆ. ತಾಂತ್ರಿಕ ಬಿಡ್‌ಗಿಂತ ಮೊದಲು

(ರೂ. ಕೋಟಿಗಳಲ್ಲಿ)

ಕ್ರ. ಸಂ.	ಲೆಕ್ಕ ಶೀರ್ಷಿಕೆ	ಪ್ರಾರಂಭಿಕ ಶಿಲ್ಕು	2017-18ನೇ ಸಾಲಿನಲ್ಲಿ ನಿಗದಿಪಡಿಸಿದ ಅನುದಾನ	ಲಭ್ಯವಿರುವ ಒಟ್ಟು ಅನುದಾನ	ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿರುವ ಒಟ್ಟು ಮೊತ್ತ	ಕಾಮಗಾರಿಗಳಿಗೆ ಕಾರ್ಯಾದೇಶ ನೀಡಿರುವ ಒಟ್ಟು ಮೊತ್ತ
1	ಪರಿಶಿಷ್ಟ ಜಾತಿಯ ವಸತಿ ಶಾಲೆಗಳು	423.49	230.00	653.49	1172.10	1263.11
2	ಪರಿಶಿಷ್ಟ ವರ್ಗಗಳ ವಸತಿ ಶಾಲೆಗಳು	74.23	92.74	166.97		
3	ಹಿಂದುಳಿದ ವರ್ಗಗಳ ವಸತಿ ಶಾಲೆಗಳು	32.21	159.19	191.40		
4	ಪರಿಶಿಷ್ಟ ಜಾತಿಯ ವಿದ್ಯಾರ್ಥಿ ನಿಲಯಗಳು	104.61	23.90	128.51	237.89	253.15
5	ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ನಿಲಯಗಳು	65.38	7.40	72.78	38.59	39.96
6	ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳು	0.02	138.82	138.84	349.34	366.65
7	ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ವರ್ಗಗಳ ಭವನಗಳು	4.05	153.04	157.09	157.42	164.11
8	ಕಾಲೇಜು ಶಿಕ್ಷಣ ಇಲಾಖೆಯಿಂದ ಬಿಡುಗಡೆಯಾದ ಅನುದಾನ	0.00	81.93	81.93	228.85	266.27
	ಒಟ್ಟು	703.99	887.02	1591.01	2184.19	2353.25

ವಿಶೇಷ ಲೆಕ್ಕ ಪರಿಶೋಧನೆಯಲ್ಲಿ ಗಮನಿಸಿದಂತೆ 2017-18 ರ ಸಾಲಿನಲ್ಲಿ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಮೂಲಕ ನಿರ್ವಹಿಸಬೇಕಾದ ಕಟ್ಟಡ ಕಾಮಗಾರಿಗಳಿಗೆ ಸರ್ಕಾರವು ನೀಡಿದ ಆಡಳಿತಾತ್ಮಕ ಮಂಜೂರಾತಿ ವಿವರಗಳು ಕೆಳಕಂಡಂತಿದೆ. ಲೆಕ್ಕ ಪರಿಶೋಧನೆಗೆ ಲಭ್ಯವಾದ ಆಡಳಿತಾತ್ಮಕ ಮಂಜೂರಾತಿ ಆದೇಶ ಪ್ರತಿಗಳ ಆಧಾರದ ಮೇಲೆ ಕೆಳಕಂಡ ಅಂಕಿ ಅಂಶಗಳನ್ನು ಒದಗಿಸಿದೆ.

ಕ್ರ. ಸಂ.	ಕಾಮಗಾರಿಗಳ ವಿವರ	ಆಡಳಿತಾತ್ಮಕ ಮಂಜೂರಾತಿ ನೀಡಿರುವ ಒಟ್ಟು ಕಾಮಗಾರಿಗಳು	ಮೊತ್ತ (ರೂ. ಕೋಟಿಗಳಲ್ಲಿ)
1	ಮೊರಾರ್ಜಿ ವಸತಿ ಶಾಲೆ [ಪ.ಜಾತಿ/ಪ.ವರ್ಗ/ಹಿಂದುಳಿದ ಜಾತಿ] ಇಂದಿರಾಗಾಂಧಿ ವಸತಿ ಶಾಲೆ, ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ, ಕಿತ್ತೂರು ರಾಣಿಚೆನ್ನಮ್ಮ ವಸತಿ ಶಾಲೆ ನಿರ್ಮಾಣ	92	1268.29
2	ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಮೆಟ್ರಿಕ್ ನಂತರದ ಬಾಲಕರ/ಬಾಲಕಿಯರ ವಿದ್ಯಾರ್ಥಿ ನಿಲಯಗಳು/ಪರಿಶಿಷ್ಟ ವರ್ಗದ ಆಶ್ರಮ ಶಾಲೆಗಳು	184	676.56

ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 576 ವೆಚ್ಚ-12 2018, ದಿನಾಂಕ: 22.05.2018 ರಂತೆ ಏಕ ಬಿಡ್‌ಗಳನ್ನು ಪರಿಗಣಿಸಬಹುದಾಗಿದ್ದು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಟೆಂಡರ್ ಅಂಗೀಕಾರ ಸಮಿತಿಯ ಸಭೆಯಲ್ಲಿ ಏಕ ಬಿಡ್‌ದಾರರನ್ನು ಟೆಂಡರ್ ಪ್ರೀಮಿಯಂ ಶೇಕಡ 5 ಕ್ಕೆ ನಿಗದಿಪಡಿಸಲು ಕೋರಿದಾಗ, ಈಗಾಗಲೇ ಜಿ.ಎಸ್.ಟಿ. ಶೇಕಡ 12 ರಷ್ಟು ಮತ್ತು ಲೋಕೋಪಯೋಗಿ ದರಗಳು ಶೇಕಡ 7 ರಷ್ಟು ಹೆಚ್ಚಾಗಿರುವುದರಿಂದ ಶೇಕಡ 5 ರಷ್ಟು ಟೆಂಡರ್ ಪ್ರೀಮಿಯಂನಲ್ಲಿ ಕಾಮಗಾರಿಯನ್ನು ನಿರ್ವಹಿಸುವುದು ಸಾಧ್ಯವಿಲ್ಲವೆಂದು ಗುತ್ತಿಗೆದಾರರು ತಿಳಿಸಿದ್ದು, ಈ ವಿಷಯ ಕುರಿತು ಟೆಂಡರ್ ಅಂಗೀಕಾರ ಸಮಿತಿಯ ಸಭೆಯಲ್ಲಿ ಚರ್ಚಿಸಿ ಒಂದು ವೇಳೆ ಏಕ ಬಿಡ್ ಕಾಮಗಾರಿಗಳನ್ನು ಮರು ಟೆಂಡರ್ ಆಹ್ವಾನಿಸಿದಲ್ಲಿ ಹೊಸ ದರಗಳಿಗೆ ಹೋಲಿಸಿ ಕಾಮಗಾರಿಯ ಕಾಯಾದೇಶವನ್ನು ನೀಡಬೇಕಾಗಿದ್ದು, ಗುತ್ತಿಗೆದಾರರಿಗೆ ಶೇಕಡ 21 ರಷ್ಟು ಹೆಚ್ಚುವರಿ ಮೊತ್ತವನ್ನು ನೀಡಬೇಕಾಗಬಹುದೆಂದು ಹಾಗೂ ಮರು ಟೆಂಡರ್ ಆಹ್ವಾನಿಸಿ ಕಾರ್ಯಾದೇಶ ನೀಡಲು ವಿಳಂಬವಾಗಬಹುದೆಂಬ ಅಂಶಗಳನ್ನು ಪರಿಗಣಿಸಿ ಏಕ ಟೆಂಡರನ್ನು ಅನುಮೋದನಾ ಸಭೆಯು ಅನುಮೋದಿಸಿರುವುದಾಗಿ ತಿಳಿಸಲಾಗಿದೆ.

ಇ-ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಿದಾಗ ಪ್ರಮುಖ ಘಟನೆಗಳನ್ನು (Calendar of events) ನ್ನು ನಿಗದಿಪಡಿಸಲಾಗುತ್ತಿದ್ದು, ಅದರಂತೆ ರೂ.1.00 ಕೋಟಿಗಿಂತ ಅಧಿಕ ಮೌಲ್ಯದ ಟೆಂಡರ್‌ಗಳಿಗೆ ಇ-ಪೋರ್ಟಲ್‌ನಲ್ಲಿ ಪೂರ್ವಭಾವಿ ಸಭೆ ನಿಗದಿಪಡಿಸಲಾಗಿದ್ದು, ನಿಗದಿಪಡಿಸಿದ ಪೂರ್ವಭಾವಿ ಸಭೆಗೆ ಹಾಜರಾದ ಗುತ್ತಿಗೆದಾರರ ಜೊತೆ ಚರ್ಚಿಸಿ, ನಡವಳಿಯನ್ನು ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆಯೆಂದು, ಕೆಲವು ಸಂದರ್ಭದಲ್ಲಿ ಭಾಗವಹಿಸುವ ಗುತ್ತಿಗೆದಾರರಿಗೆ ಟೆಂಡರ್‌ಗೆ ಸಂಬಂಧಿಸಿದಂತೆ ಯಾವುದೇ ವಿವರಣೆ ಅವಶ್ಯಕತೆಯಿಲ್ಲದಿರುವಾಗ ಯಾವುದೇ ಸಂಭಾವ್ಯ ಬಿಡ್‌ದಾರರು ಪೂರ್ವಭಾವಿ ಸಭೆಗೆ ಹಾಜರಾಗಿರುವುದಿಲ್ಲವೆಂದು ಅಂತಹ ಪ್ರಕರಣಗಳಲ್ಲಿ ಪೂರ್ವಭಾವಿ ಸಭೆ ಜರುಗಿರುವುದಿಲ್ಲವೆಂದು ತಿಳಿಸಲಾಗಿದೆ.

ಆದರೆ ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 1066 ವೆಚ್ಚ-12/2016, ದಿನಾಂಕ: 20.03.2017 ರಲ್ಲಿ ಏಕ ಬಿಡ್ ಟೆಂಡರ್‌ಗಳ ಬಗ್ಗೆ ನೀಡಿರುವ ಸ್ಪಷ್ಟೀಕರಣದಲ್ಲಿ ತಾಂತ್ರಿಕ ಬಿಡ್‌ಗೆ ಅರ್ಹತೆಗೊಳ್ಳುವ ಮೊದಲು ಹೆಚ್ಚಿನ ಟೆಂಡರ್ ಬಿಡ್‌ಗಳು ಸ್ವೀಕೃತವಾಗಿದ್ದು, ಆರ್ಥಿಕ ಬಿಡ್‌ಗೆ ಏಕ ಟೆಂಡರ್ ಬಿಡ್ ಮಾತ್ರ ಅರ್ಹವಾಗಿದ್ದರೂ ಅಂತಹ ಟೆಂಡರ್ ಬಿಡ್‌ಗಳನ್ನು ಏಕ ಟೆಂಡರ್ ಬಿಡ್ ಎಂದು ಪರಿಗಣಿಸುವಂತೆ ತಿಳಿಸಲಾಗಿದೆ ಹಾಗೂ ಟೆಂಡರ್ ಅಂಗೀಕಾರ ಸಮಿತಿಯ ಸಭೆಯಲ್ಲಿ ಏಕ ಬಿಡ್‌ದಾರರನ್ನು ಟೆಂಡರ್ ಪ್ರೀಮಿಯಂ ಶೇಕಡ 5 ಕ್ಕೆ ನಿಗದಿಪಡಿಸಲು ಕೋರಿದಾಗ, ಈಗಾಗಲೇ ಜಿ.ಎಸ್.ಟಿ. ಶೇಕಡ 12 ರಷ್ಟು ಮತ್ತು ಲೋಕೋಪಯೋಗಿ ದರಗಳು ಶೇಕಡ 7 ರಷ್ಟು ಹೆಚ್ಚಾಗಿರುವುದರಿಂದ ಶೇಕಡ 5 ರಷ್ಟು ಟೆಂಡರ್ ಪ್ರೀಮಿಯಂನಲ್ಲಿ ಕಾಮಗಾರಿಯನ್ನು ನಿರ್ವಹಿಸುವುದು ಸಾಧ್ಯವಿಲ್ಲವೆಂದು ಗುತ್ತಿಗೆದಾರರು ತಿಳಿಸಿರುತ್ತಾರೆಂದು ಮತ್ತು ಈ ವಿಷಯ ಕುರಿತು ಟೆಂಡರ್ ಅಂಗೀಕಾರ ಸಮಿತಿಯ ಸಭೆಯಲ್ಲಿ ಚರ್ಚಿಸಿ ಒಂದು ವೇಳೆ ಏಕ ಬಿಡ್ ಕಾಮಗಾರಿಗಳನ್ನು ಮರು ಟೆಂಡರ್ ಆಹ್ವಾನಿಸಿದಲ್ಲಿ ಹೊಸ ದರಗಳಿಗೆ ಹೋಲಿಸಿ ಕಾಮಗಾರಿಯ ಕಾಯಾದೇಶವನ್ನು ನೀಡಬೇಕಾಗಿದ್ದು, ಗುತ್ತಿಗೆದಾರರಿಗೆ ಶೇಕಡ 21 ರಷ್ಟು ಹೆಚ್ಚುವರಿ ಮೊತ್ತವನ್ನು ನೀಡಬೇಕಾಗಬಹುದೆಂದು ಹಾಗೂ ಮರು ಟೆಂಡರ್ ಆಹ್ವಾನಿಸಿ ಕಾರ್ಯಾದೇಶ ನೀಡಲು ವಿಳಂಬವಾಗಬಹುದೆಂಬ ಅಂಶಗಳನ್ನು ಪರಿಗಣಿಸಿ ಏಕ ಟೆಂಡರನ್ನು ಟೆಂಡರ್ ಅನುಮೋದನಾ ಸಭೆಯು ಅನುಮೋದಿಸಿರುವುದಾಗಿ ವಿವರಣೆಯನ್ನು ಸಲ್ಲಿಸಿರುತ್ತಾರೆಯೇ ಹೊರತು ಈ ಬಗ್ಗೆ ನಿರ್ಧಾರ ತೆಗೆದುಕೊಂಡ ಸಮಿತಿಯ ಸಭೆಯ ಯಾವುದೇ ದಾಖಲೆಗಳನ್ನು ವಿವರಣೆಯೊಂದಿಗೆ ಒದಗಿಸಿರುವುದಿಲ್ಲ.

ಆದ್ದರಿಂದ ಮೇಲ್ಕಂಡ ಸರ್ಕಾರದ ಸುತ್ತೋಲೆಯಲ್ಲಿನ ಸೂಚನೆಗಳನ್ನು ಉಲ್ಲಂಘಿಸಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿ ಏಕ ಬಿಡ್ ಟೆಂಡರ್‌ಗಳನ್ನು ಅನುಮೋದಿಸಿರುವ ಕ್ರಮವು ಸದರಿ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವುದಾಗಿ ಕಂಡು ಬರುತ್ತದೆ.

ಸ್ವೀಕೃತವಾದ ಏಕ ಟೆಂಡರ್ ಬಿಡ್ ಮತ್ತು ತಾಂತ್ರಿಕ ಬಿಡ್ ಅರ್ಹತೆಗೊಳ್ಳುವ ಮೊದಲು ಹೆಚ್ಚಿನ ಟಂಡರ್ ಬಿಡ್‌ಗಳು ಸ್ವೀಕೃತವಾಗಿದ್ದು, ಆರ್ಥಿಕ ಬಿಡ್‌ಗೆ ಏಕ ಟೆಂಡರ್ ಬಿಡ್ ಮಾತ್ರ ಅರ್ಹವಾಗಿದ್ದರೂ ಅಂತಹ ಟೆಂಡರ್ ಬಿಡ್‌ಗಳನ್ನು ಏಕ ಟೆಂಡರ್ ಬಿಡ್ ಎಂದು ಪರಿಗಣಿಸುವಂತೆ ತಿಳಿಸಲಾಗಿದೆ.

ಏಕ ಬಿಡ್ ಸ್ವೀಕೃತವಾದ ಸಂದರ್ಭಗಳಲ್ಲಿ, ಸದರಿ ಏಕ ಬಿಡ್ ಟೆಂಡರ್‌ಗಳನ್ನು ತಿರಸ್ಕರಿಸಿ ಮರು ಟೆಂಡರ್ ಕರೆಯುವುದು ಟೆಂಡರ್ ಆಹ್ವಾನಿಸುವ ಅಧಿಕಾರಿಯ ಪ್ರಥಮ ಆಯ್ಕೆಯಾಗಿರಬೇಕೆಂದು ಸರ್ಕಾರದ ಸುತ್ತೋಲೆ ಸಂಖ್ಯೆ: ಪಿ.ಡಬ್ಲ್ಯೂಡಿ. 1359 ಎಸ್‌ಓ/ಎಫ್‌ಸಿ 2001 (ಪಿ-2) ದಿನಾಂಕ: 03.12.2002 ರ ಪರಿಚ್ಛೇದ 3.1 ರಲ್ಲಿ ಸೂಚಿಸಲಾಗಿರುತ್ತದೆ. ಆದರೆ ಏಕ ಬಿಡ್ ಟೆಂಡರ್ ಪರಿಗಣಿಸಲೇಬೇಕಾದಂತಹ ಅಸಾಧಾರಣ ಸಂದರ್ಭಗಳಲ್ಲಿ ಮಾತ್ರ ಟೆಂಡರ್ ದರಗಳು ಅಂದಾಜು ಮೊತ್ತಕ್ಕೆ ಶೇಕಡ 5 ಕ್ಕಿಂತ ಹೆಚ್ಚುವರಿಯಾಗಿದ್ದಲ್ಲಿ ಅಥವಾ ಲಾಭಾಂಶವನ್ನು ಹೊಂದಿದ್ದಲ್ಲಿ, ಇ-ಸಂಗ್ರಹಣೆ ತಂತ್ರಾಂಶದಲ್ಲಿಯೇ ದರ ಸಂಧಾನ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ. ಆದರೆ ಬಹಳಷ್ಟು ಕಾಮಗಾರಿಗಳ ಏಕ ಬಿಡ್ ಟೆಂಡರ್‌ಗಳನ್ನು ಮರು ಟೆಂಡರ್ ಕರೆಯದೆ ಅನುಮೋದಿಸಲಾಗಿದ್ದು, ಇದರಿಂದಾಗಿ ಹೆಚ್ಚಿನ ಬಿಡ್ಡುದಾರರು ಭಾಗವಹಿಸಿ ಹೆಚ್ಚು ಸ್ಪರ್ಧಾತ್ಮಕ ದರಗಳು ಬಂದು ಸರ್ಕಾರಕ್ಕೆ ಹೆಚ್ಚು ಲಾಭದಾಯಕವಾಗುವುದು ತಪ್ಪಿದಂತಾಗಿದೆ. ಅಲ್ಲದೇ ರೂ.1.00 ಕೋಟಿಗಿಂತ ಹೆಚ್ಚಿನ ಮೌಲ್ಯದ ಟೆಂಡರ್‌ಗಳ ಪ್ರಕ್ರಿಯೆಯಲ್ಲಿ ಸಂಭಾವ್ಯ ಬಿಡ್ಡುದಾರರೊಂದಿಗೆ (Prospective Bidder) ಬಿಡ್ ಪೂರ್ವಭಾವಿ ಸಭೆಯನ್ನು (Pre Bid Meeting) ಕಡ್ಡಾಯವಾಗಿ ನಡೆಸತಕ್ಕದ್ದು ಮತ್ತು ಈ ಕುರಿತು ಟೆಂಡರ್ ದಾಖಲೆಗಳಲ್ಲಿ ಮುಂಚಿತವಾಗಿ ಸಭೆ ನಡೆಯುವ ಸ್ಥಳ ಮತ್ತು ದಿನಾಂಕವನ್ನು ನಿಗದಿಪಡಿಸುವುದು ಕಡ್ಡಾಯವಾಗಿರುತ್ತದೆ. ಆದರೆ ಈ ರೀತಿ ಸಂಭಾವ್ಯ ಬಿಡ್ಡುದಾರರೊಂದಿಗೆ (Prospective Bidder) ಬಿಡ್ ಪೂರ್ವಭಾವಿ ಸಭೆಯನ್ನು (Pre Bid Meeting) ನಡೆಸಿರುವ ಬಗ್ಗೆ ಕಡತಗಳಲ್ಲಿ ದಾಖಲೆಗಳು ಲಭ್ಯವಿರುವುದಿಲ್ಲ. ಮೇಲ್ಕಂಡ ಸರ್ಕಾರದ ಸುತ್ತೋಲೆಯಲ್ಲಿನ ಸೂಚನೆಗಳನ್ನು ಉಲ್ಲಂಘಿಸಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿ ಬಹಳಷ್ಟು ಕಾಮಗಾರಿಗಳ ಏಕ ಬಿಡ್ ಟೆಂಡರ್‌ಗಳನ್ನು ಮರು ಟೆಂಡರ್ ಕರೆಯದೆ ಅನುಮೋದಿಸಲಾಗಿರುವ ಬಗ್ಗೆ ಸೂಕ್ತ ಕಾರಣಗಳನ್ನು ಹಾಗೂ ಸಂಭಾವ್ಯ ಬಿಡ್ಡುದಾರರೊಂದಿಗೆ (Prospective Bidder) ಬಿಡ್ ಪೂರ್ವಭಾವಿ ಸಭೆಯನ್ನು (Pre Bid Meeting) ನಡೆಸಿರುವ ಕುರಿತ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 05/2019, ದಿನಾಂಕ: 03.09.2019 ರಲ್ಲಿ ಕೋರಲಾಗಿದ್ದು, ಸದರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರಕ್ಕೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಈ ಕೆಳಕಂಡಂತೆ ವಿವರಣೆಯನ್ನು ನೀಡಲಾಗಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಇ-ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಿದ್ದು, ಹಲವು ಕಾಮಗಾರಿಗಳ ತಾಂತ್ರಿಕ ಬಿಡ್‌ಗಳನ್ನ ತೆರೆದಾಗ ಒಂದಕ್ಕಿಂತ ಹೆಚ್ಚು ಬಿಡ್‌ದಾರರು ಭಾಗವಹಿಸಿದ್ದು, ಟೆಂಡರ್‌ನಲ್ಲಿ ನಿಗದಿಪಡಿಸಿದ ಕೆಲವು ನಿಬಂಧನೆಗಳನ್ನು ಪೂರೈಸುವಲ್ಲಿ ಹಲವು ಬಿಡ್‌ದಾರರು ವಿಫಲರಾದ ಕಾರಣ ಅಂತಹ ಬಿಡ್‌ದಾರರನ್ನು ತಾಂತ್ರಿಕವಾಗಿ ಅನರ್ಹಗೊಳಿಸಲಾಗಿರುವುದರಿಂದ ಕೆಲವು ಟೆಂಡರ್‌ಗಳಲ್ಲಿ ಹಲವು ಬಿಡ್‌ದಾರರು ಭಾಗವಹಿಸಿದ್ದರೂ ತಾಂತ್ರಿಕವಾಗಿ ಒಬ್ಬರೇ ಅರ್ಹರಾಗಿದ್ದು, ಇಂತಹ ಪ್ರಕರಣಗಳಲ್ಲಿ ಮರು ಟೆಂಡರ್ ಆಹ್ವಾನಿಸಬೇಕಾಗಿದ್ದು, ವಸತಿ ಶಾಲೆಗಳು/ವಿದ್ಯಾರ್ಥಿ ನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ವಿದ್ಯಾರ್ಥಿಗಳು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿದ್ದು, ಬಾಡಿಗೆ ವಸತಿ ಶಾಲೆಗಳು ಗ್ರಾಮೀಣ ಪ್ರದೇಶದಲ್ಲಿರುವುದರಿಂದ ಶೌಚಾಲಯದ ಕೊರತೆ ತೀವ್ರವಾಗಿರುವುದರಿಂದ ಇಂತಹ ಸನ್ನಿವೇಶದಲ್ಲಿ ಮರು ಟೆಂಡರ್ ಆಹ್ವಾನಿಸಬೇಕಾದಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಲ್ಲಿ ತುಂಬಾ ವಿಳಂಬವಾಗುವ ಸಾಧ್ಯತೆಯನ್ನು ಮನಗಂಡು ತಾಂತ್ರಿಕವಾಗಿ ಅರ್ಹರಾಗಿರುವ ಒಬ್ಬರೇ ಬಿಡ್‌ದಾರರ ಆರ್ಥಿಕ ಬಿಡ್ ತೆರೆಯಲಾಗಿದೆಯೆಂದು ತಿಳಿಸಲಾಗಿದೆ.

131

ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ನಿರ್ದಿಷ್ಟವಾಗಿ ಅಧಿಕೃತಗೊಳಿಸಿರುವ ದಾಖಲೆಗಳು ಕಡತಗಳಲ್ಲಿ ಕಂಡು ಬಂದಿರುವುದಿಲ್ಲ. ಇದರಿಂದಾಗಿ ಮೇಲ್ಕಂಡ ಸರ್ಕಾರದ ಸುತ್ತೋಲೆಯಲ್ಲಿನ ಸೂಚನೆಗಳನ್ನು ಉಲ್ಲಂಘಿಸಿದಂತಾಗಿರುವುದಲ್ಲದೆ, ಸರ್ಕಾರವು ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಸಮಯವನ್ನು ನೀಡದಿರುವುದರಿಂದ ಟೆಂಡರ್‌ನಲ್ಲಿ ಹೆಚ್ಚಿನ ಬಿಡ್ಡುದಾರರು ಭಾಗವಹಿಸಿ ಹೆಚ್ಚು ಸ್ಪರ್ಧಾತ್ಮಕ ದರಗಳು ಬಂದು ಸರ್ಕಾರಕ್ಕೆ ಲಾಭವಾಗುವುದು ತಪ್ಪಿದಂತಾಗಿದೆ.

ಆದ್ದರಿಂದ ಮೇಲ್ಕಂಡ ಸರ್ಕಾರದ ಆದೇಶ ಮತ್ತು ಸುತ್ತೋಲೆಯಲ್ಲಿನ ಸೂಚನೆಗಳನ್ನು ಉಲ್ಲಂಘಿಸಿ 2017-18ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಟೆಂಡರ್ ಪ್ರಕ್ರಿಯೆ ಕೈಗೊಂಡಿರುವ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ನಿಗದಿಪಡಿಸಲಾದ ಕನಿಷ್ಠ ಸಮಯವನ್ನು ಪಾಲಿಸದೆ ಅಲ್ಪಾವಧಿ ಟೆಂಡರ್ ಆಹ್ವಾನಿಸಿರುವ ಕುರಿತು ಸೂಕ್ತ ವಿವರಣೆಯನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 06/2019, ದಿನಾಂಕ: 11.09.2019 ರಲ್ಲಿ ಕೋರಲಾಗಿದ್ದು, ಸದರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರಕ್ಕೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಈ ಕೆಳಕಂಡಂತೆ ವಿವರಣೆಯನ್ನು ನೀಡಲಾಗಿದೆ.

"ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ಆಹ್ವಾನಿಸಿರುವ ಎಲ್ಲಾ ಟೆಂಡರ್‌ಗಳನ್ನು ಕೆ.ಟಿ.ಪಿ.ಪಿ. ಅಧಿನಿಯಮದಂತೆ ಕೈಗೊಳ್ಳಲಾಗಿದ್ದು, ಕೆ.ಟಿ.ಪಿ.ಪಿ. ಅಧಿನಿಯಮದ ನಿಯಮ 17(2) ರನ್ವಯ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದೊಂದಿಗೆ ಮೂಲಭೂತ ಸೌಕರ್ಯಗಳನ್ನು ತುರ್ತಾಗಿ ಒದಗಿಸಿ ಮತ್ತು ಬಾಡಿಗೆ ಕಟ್ಟಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಾಲೆಗಳನ್ನು ಶೀಘ್ರವಾಗಿ ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಲು ಹಾಗೂ ಸಂಘದಿಂದ ಪಾವತಿಸಲಾಗುತ್ತಿರುವ ಬಾಡಿಗೆಯನ್ನು ನಿಯಂತ್ರಿಸಲು ಮುಂಬರುವ ದಿನಗಳಲ್ಲಿ 2017-18ನೇ ಸಾಲಿನ ದರಪಟ್ಟಿಯು ಲೋಕೋಪಯೋಗಿ ಇಲಾಖೆಯಿಂದ ಜಾರಿ ಹೋಗುವ ಸಂಭವವಿದ್ದುದರಿಂದ ದರಗಳಲ್ಲಿ ಹೆಚ್ಚುವರಿಯಾಗುವ ಸಂಭವವಿದ್ದ ಕಾರಣ ಸದರಿ ಹೆಚ್ಚುವರಿ ದರಗಳನ್ನು ತಪ್ಪಿಸಲು ಮತ್ತು ಸಂಘಕ್ಕೆ ಒದಗಿಸಿದ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಅನುದಾನವನ್ನು ದಿನಾಂಕ: 31.03.2018 ರ ಅಂತ್ಯಕ್ಕೆ ಬಳಸಿಕೊಳ್ಳಲು ಅನುಕೂಲವಾಗಲು ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆಯೆಂದು ತಿಳಿಸಿ ಎರಡು ಕೋಟಿಗಿಂತ ಕಡಿಮೆ ಇರುವ ಟೆಂಡರ್ ಮೊತ್ತಕ್ಕೆ ಅಂತಿಮ ಬಿಡ್ ಸಲ್ಲಿಸಲು 30 ದಿನಗಳ ಕಾಲಾವಧಿಯನ್ನು ನೀಡಬೇಕಾಗಿದ್ದು, ಅದರಂತೆ ನಿಯಮಾನುಸಾರ ಪಾಲಿಸಲಾಗಿದೆ."

ಆದರೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ಟೆಂಡರ್ ಅಹ್ವಾನಿಸಿ ನಿರ್ಮಿಸುತ್ತಿರುವ ಕಟ್ಟಡ ಕಾಮಗಾರಿಗಳನ್ನು ಪೂರ್ಣಗೊಳಿಸಲು 12 ರಿಂದ 18 ತಿಂಗಳುಗಳ ಕಾಲಾವಧಿಯನ್ನು ನೀಡಲಾಗಿದೆ ಹಾಗೂ ಸದರಿ ಸಂಘಕ್ಕೆ ಬಿಡುಗಡೆಯಾಗುವ ಅನುದಾನವನ್ನು ಬ್ಯಾಂಕ್ ಖಾತೆಗಳಲ್ಲಿಟ್ಟು ನಿರ್ವಹಿಸಲಾಗುತ್ತಿರುವುದರಿಂದ ಅನುದಾನವು ವ್ಯಪಗತವಾಗುವುದಿಲ್ಲ. ಆದ್ದರಿಂದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದೊಂದಿಗೆ ಮೂಲಭೂತ ಸೌಕರ್ಯಗಳನ್ನು ತುರ್ತಾಗಿ ಒದಗಿಸಿ ಮತ್ತು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಾಲೆಗಳನ್ನು ಶೀಘ್ರವಾಗಿ ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಲು ಹಾಗೂ ಸಂಘದಿಂದ ಪಾವತಿಸಲಾಗುತ್ತಿರುವ ಬಾಡಿಗೆ ಹೊರೆಯನ್ನು ತಪ್ಪಿಸಲು ಮತ್ತು ಸಂಘಕ್ಕೆ ಒದಗಿಸಿದ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಅನುದಾನವನ್ನು ದಿನಾಂಕ: 31.03.2018 ರ ಅಂತ್ಯಕ್ಕೆ ಬಳಸಿಕೊಳ್ಳಲು ಅನುಕೂಲವಾಗಲು ಕಾಮಗಾರಿಗಳನ್ನು ಅಲ್ಪಾವಧಿ ಟೆಂಡರ್ ಆಹ್ವಾನಿಸಿ ನಿರ್ವಹಿಸುತ್ತಿರುವುದಾಗಿ ಸಂಘವು ನೀಡಿರುವ ವಿವರಣೆಯು ಸಮರ್ಥನೆಯಿಂದ ಕೂಡಿರುವುದಿಲ್ಲ. ಆದ್ದರಿಂದ ಮೇಲ್ಕಂಡ ಸರ್ಕಾರದ ಸುತ್ತೋಲೆಯಲ್ಲಿನ ಸೂಚನೆಗಳನ್ನು ಉಲ್ಲಂಘಿಸಿ ಸಂಘದಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸುವ ಮೂಲಕ ಕಾಮಗಾರಿಗಳನ್ನು ನಿರ್ವಹಿಸಿರುವುದನ್ನು ಗಮನಿಸಲಾಗಿದೆ.

3.3 ಟೆಂಡರ್ ಪ್ರಕ್ರಿಯೆ ಕೈಗೊಂಡಿರುವ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ನಿಗದಿಪಡಿಸಲಾದ ಕನಿಷ್ಠ ಸಮಯವನ್ನು ಪಾಲಿಸದಿರುವ ಬಗ್ಗೆ:

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ 2017-18ನೇ ಸಾಲಿನಲ್ಲಿ ಇ-ಸಂಗ್ರಹಣೆ ಮೂಲಕ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದೆ. ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಕಡತಗಳನ್ನು ಪರಿಶೀಲಿಸಿದಾಗ ವಿವಿಧಯೋಜನೆಯಡಿ ಟೆಂಡರ್ ಪ್ರಕ್ರಿಯೆ ಕೈಗೊಂಡಿರುವ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ನಿಗದಿಪಡಿಸಲಾದ ಕನಿಷ್ಠ ಸಮಯಕ್ಕಿಂತ ಕಡಿಮೆ ಕಾಲಾವಧಿಯನ್ನು ನೀಡಿರುವುದು ಕಂಡು ಬಂದಿದ್ದು ವಿವರಗಳನ್ನು ಅನುಬಂಧ-3 ರಲ್ಲಿ ವರದಿಗೆ ಲಗತ್ತಿಸಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000 ರ ನಿಯಮ 17 ರಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಸಮಯವನ್ನು ನಿಗದಿಪಡಿಸಲಾಗಿದೆ. ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 195 ವೆಚ್ಚ 12/11, ದಿನಾಂಕ: 30.03.2011 ರಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಸಮಯದ ಬಗ್ಗೆ ಸ್ಪಷ್ಟವಾದ ಸೂಚನೆಯನ್ನು ಈ ಮುಂದಿನಂತೆ ತಿಳಿಸಲಾಗಿದೆ.

"ಟೆಂಡರ್‌ಗಳನ್ನು ಸಲ್ಲಿಸಲು ಕನಿಷ್ಠ ಸಮಯ: (1) ಟೆಂಡರ್‌ಗಳನ್ನು ಸಲ್ಲಿಸಲು ಸಾಕಷ್ಟು ಸಮಯ ಒದಗಿಸಿರುವುದನ್ನು ಮತ್ತು ಸೂಕ್ತ ಟೆಂಡರ್ ಬುಲೆಟಿನಲ್ಲಿ ಟೆಂಡರುಗಳನ್ನು ಆಹ್ವಾನಿಸುವ ನೋಟಿಸಿನ ಪ್ರಕಟಣೆಯ ದಿನಾಂಕ ಮತ್ತು ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕದ ನಡುವೆ ಕನಿಷ್ಠ ಸಮಯ ನೀಡಿರುವುದನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿಯು ಖಚಿತಪಡಿಸಿಕೊಳ್ಳತಕ್ಕದ್ದು ಹಾಗೂ ಈ ಕನಿಷ್ಠ ಸಮಯವು ಈ ಮುಂದಿನಂತಿರತಕ್ಕದ್ದು.

ಎ) ಎರಡುಕೋಟಿ ರೂ.ಗಳ ವರೆಗಿನ ಮೌಲ್ಯದ ಟೆಂಡರುಗಳಿಗೆ ಮೂವತ್ತು ದಿನಗಳು

ಬಿ) ಎರಡುಕೋಟಿ ರೂ.ಗಳಿಗಿಂತ ಹೆಚ್ಚಿನ ಮೌಲ್ಯದ ಟೆಂಡರುಗಳಿಗೆ ಅರವತ್ತು ದಿನಗಳು.

2) (1) ನೇ ಉಪ ನಿಯಮದ ಮೇರೆಗೆ ಗೊತ್ತುಪಡಿಸಲಾದ ಸಮಯದಲ್ಲಿ ಯಾವುದೇ ಕಡಿತವನ್ನು ಮಾಡಬೇಕಾದರೆ ಟೆಂಡರು ಆಹ್ವಾನಿಸುವ ಪ್ರಾಧಿಕಾರಿಗಿಂತ ಹಿರಿಯ ಪ್ರಾಧಿಕಾರಿಯು, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ನಿರ್ದಿಷ್ಟವಾಗಿ ಅಧಿಕೃತಗೊಳಿಸಬೇಕು.

ಈ ಮೇಲಿನ ನಿಯಮಗಳಲ್ಲಿನ ಸೂಚನೆಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿಗಳು ಪಾಲಿಸದೆ ಅಸಹಜ ಎನಿಸುವಷ್ಟರ ಮಟ್ಟಿಗೆ ಕನಿಷ್ಠ ಸಮಯವನ್ನು ನಿಗದಿಪಡಿಸುತ್ತಿರುವುದು ಆರ್ಥಿಕ ಇಲಾಖೆಯ ಗಮನಕ್ಕೆ ಬಂದಿದ್ದು, ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿಗಳು ಮೇಲೆ ತಿಳಿಸಿದ ನಿಯಮದಲ್ಲಿನ ಸೂಚನೆಗಳನ್ನು ಚಾಚೂ ತಪ್ಪದೆ ಪಾಲಿಸುವಂತೆ ಸೂಚಿಸಲಾಗಿದೆ."

ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಕಡತಗಳನ್ನು ಪರಿಶೀಲಿಸಿದಾಗ ಕಾಮಗಾರಿಗಳ ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಕಡತವನ್ನು ಸಲ್ಲಿಸುವಾಗ ಪ್ರತಿ ಕಾಮಗಾರಿಗೂ KTPP ನಿಯಮಾನುಸಾರ ಅಲ್ಪಾವಧಿ ಟೆಂಡರನ್ನು e-Procurement ಮೂಲಕ ಆಹ್ವಾನಿಸಲು ಅನುಮೋದನೆಯನ್ನು ಕೋರಲಾಗಿರುವುದು ಕಂಡು ಬಂದಿದ್ದು, ಅದರಂತೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆಯೊಂದಿಗೆ ಅಲ್ಪಾವಧಿ ಟೆಂಡರ್ ಕರೆಯಲು ಅನುಮತಿಯನ್ನು ಪಡೆದು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಅತಿ ತುರ್ತಾಗಿ ಕೈಗೊಳ್ಳಬೇಕಾಗಿರುವ ಕಾಮಗಾರಿಗಳನ್ನು ಮೇಲಿನ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುವ ನಿಬಂಧನೆಗಳಂತೆ ಅಲ್ಪಾವಧಿ ಟೆಂಡರ್ ಆಹ್ವಾನಿಸಿ ನಿರ್ವಹಿಸಬೇಕಾಗಿರುತ್ತದೆ. ಆದರೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ 2017-18ನೇ ಸಾಲಿನಲ್ಲಿ ಇ-ಸಂಗ್ರಹಣೆ ಮೂಲಕ ಎಲ್ಲ ಕಾಮಗಾರಿಗಳನ್ನು ಅಲ್ಪಾವಧಿ ಟೆಂಡರ್ ಪ್ರಕ್ರಿಯೆ ಮೂಲಕ ಕೈಗೊಳ್ಳಲಾಗಿದೆ. ಅಲ್ಲದೇ ಸರ್ಕಾರವು ಸುತ್ತೋಲೆ ಸಂಖ್ಯೆ: ಆಇ 195 ವೆಚ್ಚ 12/11, ದಿನಾಂಕ: 30.03.2011 ರಲ್ಲಿ ಸೂಚಿಸಿರುವಂತೆ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಸಮಯವನ್ನು ಕಡಿತಗೊಳಿಸಿರುವ ಬಗ್ಗೆ ಟೆಂಡರು ಆಹ್ವಾನಿಸುವ ಪ್ರಾಧಿಕಾರಿಗಿಂತ ಹಿರಿಯ ಪ್ರಾಧಿಕಾರಿಯು

129

ದೃಢೀಕರಣ ಪತ್ರವನ್ನು ನೀಡಿರುವ ಹಾಗೂ ಕೆಲಸಗಳನ್ನು ನಿರ್ವಹಿಸಿರುವ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸಿರುವುದಿಲ್ಲವೆಂದು ಅನರ್ಹಗೊಳಿಸಿರುವುದು,

7. ನೀರು ಸರಬರಾಜು ಕಾಮಗಾರಿ ಹಾಗೂ ವಿದ್ಯುತ್ ಕಾಮಗಾರಿಗಳನ್ನು ನಿರ್ವಹಿಸಿರುವ ಬಗ್ಗೆ ದೃಢೀಕರಣ ಪತ್ರ ಹಾಗೂ ಗುತ್ತಿಗೆ ನೋಂದಣಿ ಪತ್ರವನ್ನು ಒದಗಿಸಿರುವುದಿಲ್ಲವೆಂದು ಕೆಲವು ಕಾಮಗಾರಿಗಳಲ್ಲಿ ಗುತ್ತಿಗೆದಾರರನ್ನು ಅನರ್ಹಗೊಳಿಸಲಾಗಿದೆ ಹಾಗೂ ಮತ್ತೆ ಕೆಲವು ಕಾಮಗಾರಿಗಳಲ್ಲಿ ಅರ್ಹಗೊಳಿಸಿದೆ.

ಮೇಲ್ಕಂಡಂತೆ ತಾಂತ್ರಿಕ ಬಿಡ್ ಮೌಲ್ಯಮಾಪನದಲ್ಲಿ ನ್ಯೂನ್ಯತೆಗಳಿದ್ದಾಗ್ಯೂ ಕಾಮಗಾರಿಗಳ ಟೆಂಡರ್‌ಗಳನ್ನು ಅರ್ಹಗೊಳಿಸಿ ಗುತ್ತಿಗೆದಾರರಿಗೆ ಕಾರ್ಯಾದೇಶಗಳನ್ನು ನೀಡಿ ಕಾಮಗಾರಿಗಳನ್ನು ವಹಿಸಿರುವ ಕ್ರಮದ ಕುರಿತು ಸೂಕ್ತ ವಿವರಣೆಯನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 09/2019, ದಿನಾಂಕ: 21.09.2019 ರಲ್ಲಿ ಕೋರಲಾಗಿತ್ತು.

ಆದರೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ನೀಡಿರುವ ವಿವರಣೆಗಳನ್ನು ಪರಿಶೀಲಿಸಿದಾಗ ಗುತ್ತಿಗೆದಾರರು ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿರುವ ದಾಖಲೆಗಳ ಆಧಾರದ ಮೇಲೆ ತಾಂತ್ರಿಕ ಬಿಡ್ ಮೌಲ್ಯಮಾಪನವನ್ನು ಕೈಗೊಳ್ಳದೆ ಗುತ್ತಿಗೆದಾರರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ನಿರ್ವಹಿಸುತ್ತಿರುವ ಎಲ್ಲಾ ಕಾಮಗಾರಿಗಳಿಗೆ ನೀಡಲಾಗಿರುವ ಕಾರ್ಯಾದೇಶಗಳು ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರಗಳನ್ನು ಪರಿಗಣನೆಗೆ ತೆಗೆದುಕೊಂಡು ತಾಂತ್ರಿಕ ಬಿಡ್ ಮೌಲ್ಯಮಾಪನದಲ್ಲಿ ಬಿಡ್ ಕೆಪಾಸಿಟಿಯನ್ನು ಲೆಕ್ಕ ಹಾಕಿರುವುದಾಗಿ ತಿಳಿಸಿರುವುದು, ತಾಂತ್ರಿಕ ಬಿಡ್ ಮೌಲ್ಯಮಾಪನದ ಕಡತಗಳಲ್ಲಿ ಗುತ್ತಿಗೆದಾರರು ತಮ್ಮಲ್ಲಿರುವ ತಾಂತ್ರಿಕ ಸಿಬ್ಬಂದಿಯವರ ವಿವರಗಳನ್ನು ಸಲ್ಲಿಸಿರುವುದಿಲ್ಲವೆಂದು ದಾಖಲಿಸಿದ್ದು ಪ್ರಸ್ತುತ ಗುತ್ತಿಗೆದಾರರು ಸದರಿ ದಾಖಲೆಗಳನ್ನು ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿರುವುದಾಗಿ ತಿಳಿಸಿರುವುದು, ಗುತ್ತಿಗೆದಾರರು BBM & Flooring ಕೆಲಸವನ್ನು ನಿರ್ವಹಿಸಿರುವ ಪರಿಮಾಣಗಳನ್ನು ನಮೂದಿಸದಿದ್ದರೂ ಸದರಿ ಗುತ್ತಿಗೆದಾರರು Telephone Exchange ಕಟ್ಟಡ ಕಾಮಗಾರಿಯನ್ನು ನಿರ್ವಹಿಸಿರುವುದರಿಂದ BBM & Flooring ಕೆಲಸವನ್ನು ಒಳಗೊಳ್ಳದೆ ಕಟ್ಟಡ ಪರಿಪೂರ್ಣವಾಗುವುದಿಲ್ಲವೆಂದು ಭಾವಿಸಿ ಗುತ್ತಿಗೆದಾರರನ್ನು ಟೆಂಡರ್‌ನಲ್ಲಿ ಅರ್ಹಗೊಳಿಸಿರುವುದು, ವಿದ್ಯುತ್ ಕಾಮಗಾರಿಗೆ ಸಂಬಂಧಿಸಿದಂತೆ ರೂ.54.00 ಲಕ್ಷ ಮೌಲ್ಯದ ಕೆಲಸವಿರುವುದರಿಂದ ವಿದ್ಯುತ್ ನೋಂದಣಿ ಪತ್ರಕ್ಕೆ ಆದ್ಯತೆ ನೀಡದೆ ಕಾಮಗಾರಿ ಹಿತದೃಷ್ಟಿಯಿಂದ ಬಿಡ್‌ದಾರರನ್ನು ಅರ್ಹಗೊಳಿಸಿರುವುದಾಗಿ ವಿವರಣೆಗಳನ್ನು ನೀಡಲಾಗಿದೆಯೆಂದು ತಿಳಿಸಿರುವ ಕಾರಣಗಳು ಹಾಗೂ ವಿವರಣೆಗಳು ತಾಂತ್ರಿಕ ಬಿಡ್ ಮೌಲ್ಯಮಾಪನದಲ್ಲಿ ನ್ಯೂನ್ಯತೆಗಳಿದ್ದಾಗ್ಯೂ ಅವುಗಳನ್ನು ಪರಿಗಣಿಸದೆಯೆ ಕಾಮಗಾರಿಗಳ ಟೆಂಡರ್‌ಗಳನ್ನು ಅರ್ಹಗೊಳಿಸಿ ಗುತ್ತಿಗೆದಾರರಿಗೆ ಕಾರ್ಯಾದೇಶಗಳನ್ನು ನೀಡಿರುವ ಕ್ರಮ ಸಮರ್ಥನೆಯಾಗುವುದಿಲ್ಲ.

ತಾಂತ್ರಿಕ ಬಿಡ್‌ನ ಮೌಲ್ಯಮಾಪನವನ್ನು ಸಮರ್ಪಕವಾಗಿ ನಿರ್ವಹಿಸದೆ ಮೇಲ್ಕಂಡ ನ್ಯೂನ್ಯತೆಗಳಿದ್ದಾಗ್ಯೂ ಕಾಮಗಾರಿಗಳ ಟೆಂಡರ್‌ಗಳನ್ನು ಅರ್ಹಗೊಳಿಸಿ ಗುತ್ತಿಗೆದಾರರಿಗೆ ಕಾರ್ಯಾದೇಶಗಳನ್ನು ನೀಡಿರುವ ಕ್ರಮವು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳು 2000 ರ ನಿಯಮಗಳಿಗೆ ವಿರುದ್ಧವಾಗಿರುತ್ತದೆ.

3.5 ಗುತ್ತಿಗೆದಾರರಿಗೆ ಕಾಮಗಾರಿಯ ಸ್ಥಳವನ್ನು ತಡವಾಗಿ ಹಸ್ತಾಂತರ ಮಾಡಿರುವ ಬಗ್ಗೆ:

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲಾ ಕಟ್ಟಡಗಳು, ಕಿತ್ತೂರು ರಾಣಿಚೆನ್ನಮ್ಮ ವಸತಿ ಶಾಲಾ ಕಟ್ಟಡಗಳು, ಇಂದಿರಾಗಾಂಧಿ ವಸತಿ ಶಾಲಾ ಕಟ್ಟಡಗಳು, ಡಾ॥ ಬಿ.ಆರ್. ಅಂಬೇಡ್ಕರ್ ವಸತಿ ಶಾಲಾ ಕಟ್ಟಡಗಳು ಸೇರಿದಂತೆ ವಿವಿಧ

3.4 ಇ-ಸಂಗ್ರಹಣೆ ಮೂಲಕ ಕೈಗೊಂಡಿರುವ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿ ತಾಂತ್ರಿಕ ಬಿಡ್‌ನ ಮೌಲ್ಯಮಾಪನದಲ್ಲಿ ಕಂಡು ಬಂದಿರುವ ನ್ಯೂನ್ಯತೆಗಳ ಬಗ್ಗೆ:

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ 2017-18ನೇ ಸಾಲಿನಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲಾ ಕಟ್ಟಡಗಳು, ಕಿತ್ತೂರು ರಾಣಿಚೆನ್ನಮ್ಮ ವಸತಿ ಶಾಲಾ ಕಟ್ಟಡಗಳು, ಇಂದಿರಾಗಾಂಧಿ ವಸತಿ ಶಾಲಾ ಕಟ್ಟಡಗಳು, ಡಾಃ ಬಿ.ಆರ್. ಅಂಬೇಡ್ಕರ್ ವಸತಿ ಶಾಲಾ ಕಟ್ಟಡಗಳು ಸೇರಿದಂತೆ ವಿವಿಧ ಕಟ್ಟಡಗಳನ್ನು ನಿರ್ಮಾಣ ಮಾಡಲು ಇ-ಸಂಗ್ರಹಣೆ ಮೂಲಕ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದೆ. ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ತಾಂತ್ರಿಕ ಬಿಡ್‌ನ ಮೌಲ್ಯಮಾಪನದ ಕಡತಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನ್ಯತೆಗಳು ಕಂಡು ಬಂದಿದ್ದು, ವಿವರಗಳನ್ನು ಅನುಬಂಧ-4 ರಲ್ಲಿ ವರದಿಗೆ ಲಗತ್ತಿಸಿದೆ.

1. ಟೆಂಡರ್‌ಗೆ ನಿಗದಿಪಡಿಸಿರುವ ಬಿಡ್ ಕೆಪಾಸಿಟಿ ಮೊತ್ತಕ್ಕಿಂತ ಹೆಚ್ಚಿನ ಬಿಡ್ ಕೆಪಾಸಿಟಿ ಮೊತ್ತವನ್ನು ಹೊಂದಿ ಅರ್ಹರಾಗಿರುವ ಗುತ್ತಿಗೆದಾರರನ್ನು ಕಾಮಗಾರಿಗೆ ಅಗತ್ಯವಿರುವ ಬಿಡ್ ಕೆಪಾಸಿಟಿ ಇರುವುದಿಲ್ಲವೆಂದು ಅನರ್ಹಗೊಳಿಸಲಾಗಿರುವುದು,
2. ಒಂದು ಕಾಮಗಾರಿಯಲ್ಲಿ ಗುತ್ತಿಗೆದಾರರಿಗೆ ಬಿಡ್ ಕೆಪಾಸಿಟಿ ಇರುವುದಿಲ್ಲವೆಂದು ಅನರ್ಹಗೊಳಿಸಿದ್ದು, ಅದೇ ಗುತ್ತಿಗೆದಾರರನ್ನು ಮತ್ತೊಂದು ಕಾಮಗಾರಿಯಲ್ಲಿ ಅದೇ ಬಿಡ್ ಕೆಪಾಸಿಟಿಯನ್ನು ಪರಿಗಣಿಸಿ ಅರ್ಹಗೊಳಿಸಿರುವುದು,
3. ಗುತ್ತಿಗೆದಾರರು ತಮ್ಮಲ್ಲಿರುವ ತಾಂತ್ರಿಕ ಸಿಬ್ಬಂದಿಯವರ ವಿದ್ಯಾರ್ಹತೆಯ ಪ್ರಮಾಣ ಪತ್ರಗಳನ್ನು ಸಲ್ಲಿಸದಿದ್ದರೂ ಟೆಂಡರ್‌ನಲ್ಲಿ ಅರ್ಹಗೊಳಿಸಿರುವುದು ಹಾಗೂ ಕೆಲವು ಕಾಮಗಾರಿಗಳಲ್ಲಿ ಗುತ್ತಿಗೆದಾರರು ತಮ್ಮಲ್ಲಿರುವ ತಾಂತ್ರಿಕ ಸಿಬ್ಬಂದಿಯವರ ವಿದ್ಯಾರ್ಹತೆಯ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವುದಿಲ್ಲವೆಂದು ಅನರ್ಹಗೊಳಿಸಿರುವುದು,
4. ಕಾಮಗಾರಿ ನಿರ್ವಹಣೆಗೆ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಸಲ್ಲಿಸದಿದ್ದರೂ ಟೆಂಡರ್‌ನಲ್ಲಿ ಅರ್ಹಗೊಳಿಸಿರುವುದು ಹಾಗೂ ಕೆಲವು ಕಾಮಗಾರಿಗಳಲ್ಲಿ ಗುತ್ತಿಗೆದಾರರು ಕಾಮಗಾರಿ ನಿರ್ವಹಣೆಗೆ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವುದಿಲ್ಲವೆಂದು ಅನರ್ಹಗೊಳಿಸಿರುವುದು,
5. ಟೆಂಡರ್‌ನಲ್ಲಿ ನಿಗದಿಪಡಿಸಿರುವ ವಾಹನಗಳು/ಯಂತ್ರಗಳು ಮತ್ತು ಸಾಧನ ಸಾಮಗ್ರಿಗಳು ತಮ್ಮಲ್ಲಿ ಲಭ್ಯವಿರುವ ಬಗ್ಗೆ ದಾಖಲಾತಿ/ಇನ್‌ವಾಯ್ಸ್‌ಗಳನ್ನು ಗುತ್ತಿಗೆದಾರರು ಸಲ್ಲಿಸದಿದ್ದರೂ ಟೆಂಡರ್‌ನಲ್ಲಿ ಅರ್ಹಗೊಳಿಸಿರುವುದು ಹಾಗೂ ಕೆಲವು ಕಾಮಗಾರಿಗಳಲ್ಲಿ ಗುತ್ತಿಗೆದಾರರು ಟೆಂಡರ್‌ನಲ್ಲಿ ನಿಗದಿಪಡಿಸಿರುವ ವಾಹನಗಳು/ಯಂತ್ರಗಳು ಮತ್ತು ಸಾಧನ ಸಾಮಗ್ರಿಗಳು ತಮ್ಮಲ್ಲಿ ಲಭ್ಯವಿರುವ ಬಗ್ಗೆ ದಾಖಲಾತಿ/ಇನ್‌ವಾಯ್ಸ್‌ಗಳನ್ನು ಸಲ್ಲಿಸಿರುವುದಿಲ್ಲವೆಂದು ಅನರ್ಹಗೊಳಿಸಿರುವುದು,
6. ಟೆಂಡರ್‌ನಲ್ಲಿ ನಿಗದಿಪಡಿಸಿರುವ ಕೆಲಸಗಳ ಪರಿಮಾಣಕ್ಕಿಂತಲೂ ಕಡಿಮೆ ನಿರ್ವಹಿಸಿರುವ ಬಗ್ಗೆ (ಮಣ್ಣು ಅಗೆತ, ಆರ್.ಸಿ.ಸಿ., ಕಲ್ಲು ಕಟ್ಟಡದ ಕೆಲಸ, ನೆಲಹಾಸು, ಇಟ್ಟಿಗೆ ಕೆಲಸ ಇತರೆ) ದೃಢೀಕರಣ ಪತ್ರವನ್ನು ನೀಡಿರುವ ಹಾಗೂ ಕೆಲಸಗಳನ್ನು ನಿರ್ವಹಿಸಿರುವ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸದಿದ್ದರೂ ಅಂತಹ ಗುತ್ತಿಗೆದಾರರನ್ನು ಟೆಂಡರ್‌ನಲ್ಲಿ ಅರ್ಹಗೊಳಿಸಿರುವುದು ಹಾಗೂ ಕೆಲವು ಕಾಮಗಾರಿಗಳಲ್ಲಿ ಗುತ್ತಿಗೆದಾರರು ಟೆಂಡರ್‌ನಲ್ಲಿ ನಿಗದಿಪಡಿಸಿರುವ ಕೆಲಸಗಳ ಪರಿಮಾಣಕ್ಕಿಂತಲೂ ಕಡಿಮೆ ನಿರ್ವಹಿಸಿರುವ ಬಗ್ಗೆ

127

ಎರಡು ಅಂತಸ್ತಿಗೆ ಬದಲಾಗಿ ಮೂರು ಅಥವಾ ನಾಲ್ಕು ಅಂತಸ್ತಿಗೆ ನಿರ್ಮಿಸಬೇಕಾಗಿರುತ್ತದೆಂದು ಹಾಗೂ ಅಡಿಪಾಯದ ವಿನ್ಯಾಸದಲ್ಲಿ ಬದಲಾವಣೆಯಾಗುತ್ತದೆಯೆಂದು ತಿಳಿಸಿರುತ್ತಾರೆ.

ಕೆಲವು ಕಾಮಗಾರಿಗಳ ಪ್ರಕರಣಗಳಲ್ಲಿ ವಿಧಾನ ಸಭಾ/ಲೋಕ ಸಭಾ ಚುನಾವಣೆ ನೀತಿ ಸಂಹಿತೆ ಜಾರಿಯಾಗಿದ್ದರಿಂದ ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಕಾಮಗಾರಿಯನ್ನು ಪ್ರಾರಂಭಿಸಲು ವಿಳಂಬವಾಗಿರುತ್ತದೆಂದು, ಕೆಲವು ಕಾಮಗಾರಿಗಳ ಪ್ರಕರಣಗಳಲ್ಲಿ ಕಾರ್ಯಾದೇಶ ನೀಡಿದ ನಂತರ ಚುನಾಯಿತ ಜನಪ್ರತಿನಿಧಿಗಳಿಂದ ಅಡಿಗಲ್ಲು ಸಮಾರಂಭ ಮಾಡಲು ಕೋರಿರುವುದರಿಂದ ಚುನಾಯಿತ ಜನ ಪ್ರತಿನಿಧಿಗಳ ಪೂರ್ವ ನಿಗಧಿತ ಕಾರ್ಯಕ್ರಮದಿಂದ ಅಡಿಗಲ್ಲು ಸಮಾರಂಭದ ದಿನಾಂಕ ನಿಗಧಿಪಡಿಸುವಲ್ಲಿ ವಿಳಂಬವಾಗಿರುತ್ತದೆಯೆಂದು, ಕೆಲವು ಸಂದರ್ಭಗಳಲ್ಲಿ ಜಿಲ್ಲಾಧಿಕಾರಿಗಳು ಮಂಜೂರು ಮಾಡಿದ ಜಮೀನಿನಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಅರಣ್ಯ ಇಲಾಖೆಯವರು ಸದರಿ ಪ್ರದೇಶವು ಅರಣ್ಯ ಇಲಾಖೆಯ ವ್ಯಾಪ್ತಿಗೆ ಒಳಪಡುವುದಾಗಿ ತಿಳಿಸಿ ಕಾಮಗಾರಿಯನ್ನು ಸ್ಥಗಿತಗೊಳಿಸಿ ಪುನಃ ಪ್ರಾರಂಭಿಸಲು ವಿಳಂಬವಾಗಿರುತ್ತದೆಂದು, ಹೊಸದಾಗಿ ಒದಗಿಸಿರುವ ನಿವೇಶನವು ಸಹ ಕೆಲವು ಸಂದರ್ಭಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಸೂಕ್ತವಾಗಿರುವುದಿಲ್ಲವಾದ್ದರಿಂದ ಇಂತಹ ಸಂದರ್ಭದಲ್ಲಿ ನಿವೇಶನವನ್ನು ಬದಲಾವಣೆ ಮಾಡುವುದು ಅನಿವಾರ್ಯವಾಗಿರುತ್ತದೆಯೆಂದು ತಿಳಿಸಿ ನಿವೇಶನಕ್ಕೆ ಅನುಗುಣವಾಗಿ ನಕ್ಷೆಗಳನ್ನು ತಯಾರಿಸಿ ಹಸ್ತಾಂತರಿಸುವಲ್ಲಿ ವಿಳಂಬವಾಗಿರುತ್ತದೆಯೆಂದು ವಿವರಣೆಯಲ್ಲಿ ತಿಳಿಸಲಾಗಿದೆ."

ಕಟ್ಟಡ ನಿರ್ಮಾಣ ಕಾಮಗಾರಿಯ ಸ್ಥಳವನ್ನು ಸಂಬಂಧಪಟ್ಟ ಇಲಾಖೆಯಿಂದ ಪೂರ್ಣವಾಗಿ ವಶಕ್ಕೆ ಪಡೆದುಕೊಳ್ಳದೆ ಊಹಾತ್ಮಕ ಅಂದಾಜು ಪಟ್ಟಿಗಳೊಂದಿಗೆ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಕೈಗೊಂಡು ಕಾರ್ಯಾದೇಶಗಳನ್ನು ನೀಡಿರುವ ಕಾರಣಗಳು ಸಮರ್ಥನೆಯಿಂದ ಕೂಡಿರುವುದಿಲ್ಲ. ಆದ್ದರಿಂದ ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯ ಪ್ಯಾರ 102 ಮತ್ತು 135 ರಲ್ಲಿ ನೀಡಿರುವ ಸೂಚನೆಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣ ಕಾಮಗಾರಿಯ ಸ್ಥಳವನ್ನು ಸಂಬಂಧಪಟ್ಟ ಇಲಾಖೆಯಿಂದ ಪೂರ್ಣವಾಗಿ ವಶಕ್ಕೆ ಪಡೆದುಕೊಳ್ಳದೆ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಕೈಗೊಂಡು ಕಾರ್ಯಾದೇಶಗಳನ್ನು ನೀಡಿರುವ ಕ್ರಮವು ಮೇಲಿನ ಸಂಹಿತೆಗೆ ವಿರುದ್ಧವಾಗಿರುತ್ತದೆ.

3.6 ದೋಷಪೂರಿತ ಅಂದಾಜು ಪಟ್ಟಿ ತಯಾರಿಕೆಯಿಂದ ಕಾಮಗಾರಿಗಳಲ್ಲಿ ವರ್ಕ್‌ಸ್ಲಿಪ್ ಮತ್ತು ಇ.ಐ.ಆರ್.ಎಲ್. ಉಂಟಾಗಿರುವ ಬಗ್ಗೆ:

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲಾ ಕಟ್ಟಡಗಳು, ಕಿತ್ತೂರು ರಾಣಿಚೆನ್ನಮ್ಮ ವಸತಿ ಶಾಲಾ ಕಟ್ಟಡಗಳು, ಇಂದಿರಾಗಾಂಧಿ ವಸತಿ ಶಾಲಾ ಕಟ್ಟಡಗಳು, ಡಾಃ ಬಿ.ಆರ್. ಅಂಬೇಡ್ಕರ್ ವಸತಿ ಶಾಲಾ ಕಟ್ಟಡಗಳು ಸೇರಿದಂತೆ ವಿವಿಧ ಕಟ್ಟಡಗಳ ಅಂದಾಜು ಪಟ್ಟಿಗಳನ್ನು ತಯಾರಿಸಿ ಟೆಂಡರ್ ಮೂಲಕ ಸದರಿ ಕಟ್ಟಡ ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ವಹಿಸಿ ನಿರ್ಮಾಣ ಮಾಡಲಾಗುತ್ತಿದೆ.. ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯಲ್ಲಿ ಅಂದಾಜು ಪಟ್ಟಿ ತಯಾರಿಕೆಯಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ನೀಡಲಾಗಿದೆ.

1. ಕಟ್ಟಡ ನಿರ್ಮಾಣ ಕಾಮಗಾರಿಯಾಗಿದ್ದ ಪಕ್ಷದಲ್ಲಿ ಆ ಕಟ್ಟಡವನ್ನು ಉಪಯೋಗಿಸುವ ಇಲಾಖೆಯ ಸಕ್ಷಮ ಅಧಿಕಾರಿಯೊಂದಿಗೆ ಸಮಾಲೋಚಿಸಿ ಅಗತ್ಯ ಸೌಲಭ್ಯಗಳ ವಿವರಗಳನ್ನು ಪಡೆದ ನಂತರ ಪೂರ್ವಭಾವಿ ಪರಿಶೀಲನೆಯನ್ನು ಅಗತ್ಯವಾದ ಮಣ್ಣಿನ ಒಳಪದರಗಳ ನಿರ್ಮಾಣ ಇವುಗಳ ಬಗ್ಗೆ ವಿವರವಾದ ಪರೀಕ್ಷೆಗಳನ್ನು ನಡೆಸಿ ಅಡಿಪಾಯಗಳ ಆಳವನ್ನು (Depth) ಹಾಗೂ ಅಡಿಪಾಯಕ್ಕೆ ನೀಡಬೇಕಾದ ವಿನ್ಯಾಸಗಳನ್ನು ಪುಷ್ಟೀಕರಿಸಿ ವಾಸ್ತವಿಕವಾಗಿರುವಂತೆ ಅಂದಾಜನ್ನು ತಯಾರಿಸಬೇಕು. (ಪ್ಯಾರ 115 KPWD code)

ಕಟ್ಟಡಗಳನ್ನು ನಿರ್ಮಾಣ ಮಾಡಲು ಟೆಂಡರ್ ಪ್ರಕ್ರಿಯೆ ಮೂಲಕ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಕಡತಗಳನ್ನು ಪರಿಶೀಲಿಸಿದಾಗ ಗುತ್ತಿಗೆದಾರರಿಗೆ ಕಾಮಗಾರಿಯ ಸ್ಥಳವನ್ನು ತಡವಾಗಿ ಹಸ್ತಾಂತರ ಮಾಡಿರುವ ಹಾಗೂ ಇದುವರೆವಿಗೂ ಹಸ್ತಾಂತರಿಸದಿರುವ ವಿವರಗಳನ್ನು **ಅನುಬಂಧ-5** ರಲ್ಲಿ ವರದಿಗೆ ಲಗತ್ತಿಸಿದೆ. ಈ ಕಾಮಗಾರಿಗಳಿಗೆ ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಕಾರ್ಯಾದೇಶಗಳನ್ನು ಸಹ ನೀಡಲಾಗಿದೆ.

ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯ ಪ್ಯಾರ 102 ಮತ್ತು 135 ರ ಪ್ರಕಾರ ಕಟ್ಟಡ ನಿರ್ಮಾಣ ಕಾಮಗಾರಿಯ ಸ್ಥಳವನ್ನು ಸಂಬಂಧಪಟ್ಟ ಇಲಾಖೆಯಿಂದ ಪೂರ್ಣವಾಗಿ ವಶಕ್ಕೆ ಪಡೆದುಕೊಳ್ಳದೆ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಕೈಗೊಳ್ಳಬಾರದೆಂದು ತಿಳಿಸಲಾಗಿದೆ. ಆದಾಗ್ಯೂ ಬಹಳಷ್ಟು ಕಟ್ಟಡ ಕಾಮಗಾರಿಗಳ ನಿರ್ಮಾಣಕ್ಕೆಅಗತ್ಯವಿರುವ ಸ್ಥಳವನ್ನು ಸಂಬಂಧಪಟ್ಟ ಇಲಾಖೆಯಿಂದ ಪೂರ್ಣವಾಗಿ ವಶಕ್ಕೆ ಪಡೆದುಕೊಳ್ಳದೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಕಾರ್ಯಾದೇಶಗಳನ್ನು ಸಹ ನೀಡಲಾಗಿದೆ. ಇದರಿಂದಾಗಿ ಕಟ್ಟಡ ಕಾಮಗಾರಿಗಳು ಸಕಾಲದಲ್ಲಿ ಪೂರ್ಣಗೊಂಡು ಬಳಕೆ ಮಾಡಲು ಸಾದ್ಯವಾಗುವುದಿಲ್ಲ. ಕಟ್ಟಡ ಕಾಮಗಾರಿಗಳು ನಿಗದಿತ ಕಾಲಾವಧಿಯೊಳಗೆ ನಿರ್ಮಾಣವಾಗದೆ ವಿಳಂಬವಾದಲ್ಲಿ ಕಟ್ಟಡ ನಿರ್ಮಾಣದ ವೆಚ್ಚದಲ್ಲಿ ಹೆಚ್ಚಳವಾಗುವ ಸಾದ್ಯತೆ ಇರುತ್ತದೆ ಹಾಗೂ ಕಟ್ಟಡ ನಿರ್ಮಾಣಕ್ಕೆ ಅಗತ್ಯವಿರುವ ಸ್ಥಳವನ್ನು ಗುತ್ತಿಗೆದಾರರಿಗೆ ಹಸ್ತಾಂತರಿಸುವಲ್ಲಿ ಹೆಚ್ಚು ವಿಳಂಬವಾದಲ್ಲಿ ಗುತ್ತಿಗೆದಾರರು ಹೊಸ ದರಗಳನ್ನು ನೀಡಲು ಒತ್ತಾಯಿಸುವ ಅಥವಾ ಕಾಮಗಾರಿಯನ್ನು ಮುಂದುವರೆಸಲು ನಿರಾಕರಿಸುವ ಸಾದ್ಯತೆ ಇದ್ದು, ಇದರಿಂದಾಗಿ ಮತ್ತೆ ಹೊಸದಾಗಿ ಟೆಂಡರ್ ಪ್ರಕ್ರಿಯೆ ಕೈಗೊಂಡು ಕಾಮಗಾರಿಯನ್ನು ನಿರ್ವಹಿಸಬೇಕಾದಲ್ಲಿ ಕಾಮಗಾರಿಯ ನಿರ್ಮಾಣದ ವೆಚ್ಚವು ಹೆಚ್ಚಳವಾಗುವ ಸಾದ್ಯತೆ ಇರುತ್ತದೆ. ಅಲ್ಲದೇ ಹಾಲಿ ಬಹಳಷ್ಟು ವಸತಿ ಶಾಲಾ ಕಟ್ಟಡಗಳನ್ನು ಬಾಡಿಗೆ ಕಟ್ಟಡಗಳಲ್ಲಿ ನಡೆಸಲಾಗುತ್ತಿದ್ದು, ವಸತಿ ಶಾಲಾ ಕಟ್ಟಡಗಳ ನಿರ್ಮಾಣದ ವಿಳಂಬದಿಂದಾಗಿ ಹೊಸ ಕಟ್ಟಡ ನಿರ್ಮಾಣವಾಗುವವರೆಗೆ ವಸತಿ ಶಾಲಾ ಕಟ್ಟಡಗಳ ಬಾಡಿಗೆ ಮೊತ್ತವನ್ನು ಪಾವತಿಸಬೇಕಾಗುವುದರಿಂದ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆಯಾಗುತ್ತದೆ. ಉದ್ದೇಶಿತ ಕಟ್ಟಡ ನಿರ್ಮಾಣ ಕಾಮಗಾರಿಯ ಸ್ಥಳವನ್ನು ಸಂಬಂಧಪಟ್ಟ ಇಲಾಖೆಯಿಂದ ಪೂರ್ಣವಾಗಿ ವಶಕ್ಕೆ ಪಡೆದುಕೊಳ್ಳದೆ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಕೈಗೊಂಡು ಕಾರ್ಯಾದೇಶಗಳನ್ನು ನೀಡಿ ಕಾಮಗಾರಿಗಳ ಸ್ಥಳವನ್ನು ಗುತ್ತಿಗೆದಾರರಿಗೆ ನಿಗದಿತ ಅವಧಿಯಲ್ಲಿ ಹಸ್ತಾಂತರಿಸದೆ ಕಾಮಗಾರಿಗಳ ನಿರ್ಮಾಣದಲ್ಲಿ ವಿಳಂಬವಾಗಿರುವ ಕ್ರಮವನ್ನು ಕುರಿತು ಸೂಕ್ತ ವಿವರಣೆಯನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 08/2019, ದಿನಾಂಕ: 11.09.2019 ರಲ್ಲಿ ಕೋರಲಾಗಿದ್ದು, ಸದರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರಕ್ಕೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಈ ಕೆಳಕಂಡಂತೆ ವಿವರಣೆಯನ್ನು ನೀಡಲಾಗಿದೆ.

"ಟೆಂಡರ್‌ನಲ್ಲಿ ಆಯ್ಕೆಯಾದ ಗುತ್ತಿಗೆದಾರರು ಕಾರ್ಯಾದೇಶ ಪಡೆದು ಕಾಮಗಾರಿಯನ್ನು ಪ್ರಾರಂಭಿಸಲು ಹೋದಾಗ ಸರ್ಕಾರದಿಂದ ಮಂಜೂರು ಮಾಡಿದ ನಿವೇಶನಗಳು, ಗುಡ್ಡಗಾಡು ಪ್ರದೇಶಗಳು/ಅರಣ್ಯ ಭೂಮಿಗಳು/ಆಶ್ರಯ ಮನೆಗಳಿಗೆ ಮಂಜೂರು ಮಾಡಿದ ಜಮೀನು/ಗೋಮಾಳ/ ಕೆರೆಯಂಗಳ/ಕಲ್ಲು ಕ್ವಾರಿಗಳು ಮತ್ತು ಮಣ್ಣು ಕ್ವಾರಿಗಳಿಂದ ಕೂಡಿದ ಪ್ರದೇಶಗಳನ್ನು ಶಾಲಾ ಕಟ್ಟಡ/ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕಾಗಿ ಮಂಜೂರು ಮಾಡಿರುತ್ತಾರೆಂದು, ಈ ಜಮೀನುಗಳನ್ನು ಸ್ಥಳೀಯ ಜನರು ಉಪಯೋಗಿಸುತ್ತಿರುತ್ತಾರೆಂದು, ಈ ಸಂದರ್ಭದಲ್ಲಿ ಸ್ಥಳೀಯ ಜನ ಪ್ರತಿನಿಧಿಗಳು ಮಧ್ಯ ಪ್ರವೇಶಿಸಿ ಜಿಲ್ಲಾಧಿಕಾರಿಗಳ ಮುಖಾಂತರ ಬದಲಿ ನಿವೇಶನವನ್ನು ಒದಗಿಸಿರುವ ಕಾರಣ ಇಂತಹ ಸಂದರ್ಭದಲ್ಲಿ ಗುತ್ತಿಗೆದಾರರಿಗೆ ಬದಲಿ ನಿವೇಶನ ಒದಗಿಸಿ ಕಾಮಗಾರಿ ಕೈಗೊಳ್ಳಲು ವಿಳಂಬವಾಗುವುದೆಂದು ತಿಳಿಸಿರುತ್ತಾರೆ ಹಾಗೂ ಕೆಲವು ಸಂದರ್ಭದಲ್ಲಿ ಬದಲಾವಣೆಯಾದ ನಿವೇಶನವು ಕಿರಿದಾಗಿರುವುದರಿಂದ ಲೇಔಟ್ ನಕ್ಷೆಗಳನ್ನು ಮಾರ್ಪಾಡಿಸಿ ಹಾಗೂ ನಿವೇಶನದ ಅಳತೆಯು ಬೇಕಾದ ವಿಸ್ತೀರ್ಣಕ್ಕಿಂತ ಕಡಿಮೆ ಇದ್ದಲ್ಲಿ ಕಟ್ಟಡಗಳನ್ನು

125

ಮತ್ತು ಇ.ಐ.ಆರ್.ಎಲ್. ಗಳಲ್ಲಿ ಅನುಮೋದನೆಯಾಗಿರುವ ಪ್ರಸ್ತಾವನೆಗಳ ವಿವರಗಳನ್ನು ಅನುಬಂಧ-6 ರಲ್ಲಿ ವರದಿಗೆ ಲಗತ್ತಿಸಿದೆ. ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯಲ್ಲಿ ಅಂದಾಜು ಪಟ್ಟಿ ತಯಾರಿಕೆಯಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ನೀಡಿರುವ ಮಾರ್ಗಸೂಚಿಗಳಂತೆ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ತಯಾರಿಸದಿರುವುದು ಕಂಡು ಬರುತ್ತದೆ. ದೋಷಪೂರಿತ ಅಂದಾಜು ಪಟ್ಟಿ ತಯಾರಿಕೆಯಿಂದ ವರ್ಕ್‌ಸ್ಲಿಪ್ ಮತ್ತು ಇ.ಐ.ಆರ್.ಎಲ್. ಉಂಟಾಗಿದ್ದು, ಇದರಿಂದಾಗಿ ಕಾಮಗಾರಿಗಳ ವೆಚ್ಚದಲ್ಲಿ ಹೆಚ್ಚಳವಾಗಲಿದೆ ಹಾಗೂ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆಯಾಗಲಿದೆ. ಆದ್ದರಿಂದ ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯಲ್ಲಿ ಅಂದಾಜು ಪಟ್ಟಿ ತಯಾರಿಕೆಯಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ನೀಡಿರುವ ಮಾರ್ಗಸೂಚಿಗಳಂತೆ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ತಯಾರಿಸದೆ, ದೋಷಪೂರಿತ ಅಂದಾಜು ಪಟ್ಟಿ ತಯಾರಿಕೆಯಿಂದಾಗಿ ವರ್ಕ್‌ಸ್ಲಿಪ್ ಮತ್ತು ಇ.ಐ.ಆರ್.ಎಲ್. ಉಂಟಾಗಿದ್ದು, ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆಯಾಗಲು ಕಾರಣವಾಗಿರುವ ತಾಂತ್ರಿಕ ಸಮಾಲೋಚಕರುಗಳ (ಪಿ.ಎಂ.ಸಿ.) ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವ ಕುರಿತು ಸೂಕ್ತ ವಿವರಣೆಯನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 10/2019, ದಿನಾಂಕ: 23.09.2019 ರಲ್ಲಿ ಕೋರಲಾಗಿತ್ತು.

ಆದರೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ನೀಡಿರುವ ವಿವರಣೆಗಳನ್ನು ಪರಿಶೀಲಿಸಿದಾಗ, ಕಾಮಗಾರಿಗಳ ನಿರ್ವಹಣೆಯ ಸಮಯದಲ್ಲಿ ಉದ್ಭವಿಸಬಹುದಾದ ಹಾಗೂ ಮುಂಭಾವಿಸಲಾದ ವಿವಿಧ ಅಡೆತಡೆಗಳು, ಸಮಸ್ಯೆಗಳು ಹಾಗೂ ಕಾರಣಗಳನ್ನು ನೀಡಿದ್ದು, ಇವು ದೋಷಪೂರಿತ ಅಂದಾಜು ಪಟ್ಟಿಗಳ ತಯಾರಿಕೆಗೆ ಸಮರ್ಥನೆಯನ್ನು ನೀಡುವುದಿಲ್ಲ. ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯಲ್ಲಿ ಅಂದಾಜು ಪಟ್ಟಿ ತಯಾರಿಕೆಯಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ನೀಡಿರುವ ಮಾರ್ಗಸೂಚಿಗಳಂತೆ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ತಯಾರಿಸದೆ, ದೋಷಪೂರಿತ ಅಂದಾಜು ಪಟ್ಟಿ ತಯಾರಿಕೆಯಿಂದಾಗಿ ವರ್ಕ್‌ಸ್ಲಿಪ್ ಮತ್ತು ಇ.ಐ.ಆರ್.ಎಲ್. ಉಂಟಾಗಿರುವುದನ್ನು ಗಮನಿಸಲಾಗಿದ್ದು, ಇದರಿಂದಾಗಿ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆಯಾಗಲು ಕಾರಣವಾಗಿರುವ ತಾಂತ್ರಿಕ ಸಮಾಲೋಚಕರುಗಳ (ಪಿ.ಎಂ.ಸಿ.) ವಿರುದ್ಧ ಕ್ರಮ ಜರುಗಿಸಿ ಅವರಿಂದ ನಷ್ಟವನ್ನು ಸರಿದೂಗಿಸಿಕೊಳ್ಳುವಂತೆ ನಿರ್ದೇಶನ ನೀಡುವ ಅಗತ್ಯವಿದೆ.

3.7 ಹುಣಸೂರು ತಾಲ್ಲೂಕು ಧರ್ಮಪುರ ಗ್ರಾಮದಲ್ಲಿ ಪರಿಶಿಷ್ಟ ವರ್ಗದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ದುರಸ್ತಿ ಹಾಗೂ ಮೂಲ ಸೌಕರ್ಯ ಒದಗಿಸುವ ಪೂರಕ ಕಾಮಗಾರಿಯಲ್ಲಿನ ನ್ಯೂನ್ಯತೆಗಳ ಬಗ್ಗೆ:

ಕಾಮಗಾರಿಯ ಅಂದಾಜುಪಟ್ಟಿ ಮೊತ್ತ ರೂ.317.84 ಲಕ್ಷ (2015-16ನೇ ಸಾಲಿನ ದರಪಟ್ಟಿ ಪ್ರಕಾರ)
ಟೆಂಡರ್ ಅನುಮೋದನೆ ದಿನಾಂಕ: 17-01-2017
ಅನುಮೋದಿತ ಟೆಂಡರ್ ಮೊತ್ತ ರೂ.301.95 ಲಕ್ಷ
ಕರಾರು ಪತ್ರ ದಿನಾಂಕ: 07.04.2017
ಕಾರ್ಯಾದೇಶದ ದಿನಾಂಕ: 07.04.2017

ಯೋಜನಾ ಸಮಾಲೋಚಕರು – ಮೆ: ಸೊಮ್ಯಾಟ್ ಇನ್‌ಫ್ರಾಸ್ಟ್ರಕ್ಚರ್ ಪ್ರೈ. (ಲಿ)
ಗುತ್ತಿಗೆದಾರರ ಹೆಸರು – ಶ್ರೀ ಸೈಯದ್ ಸಾದಿಕ್
ಕಾಮಗಾರಿಗೆ ನೀಡಿದ ಕಾಲಾವಧಿ ದಿನಾಂಕ:01-05-2018 ವರೆಗೆ ನಂತರ ದಿನಾಂಕ: 31.01.2019 ರವರೆಗೆ ವಿಸ್ತರಿಸಿದೆ.
ಬಿಲ್ಲು ಪಾವತಿ ವಿವರ: ಮೊದಲ ಬಿಲ್ಲು ರೂ.6485708.00
ಎರಡನೆಯ ಬಿಲ್ಲು ರೂ. 10650729.00
ಮೂರನೆಯ ಬಿಲ್ಲು ರೂ. 4894128.00

2. ಅಂದಾಜನ್ನು ಕಾಮಗಾರಿ ಸ್ಥಳಕ್ಕೆ ಅನ್ವಯವಾಗುವ ಪ್ರಸಕ್ತ ಸಾಲಿನ ಲೋಕೋಪಯೋಗಿ ವೃತ್ತದ ದರಪಟ್ಟಿಯ ಆಧಾರದ ಮೇಲೆ ತಯಾರಿಸಬೇಕು.
3. ಹಳೆಯ ದರದಪಟ್ಟಿಯ ಆಧಾರದಿಂದ ತಯಾರಿಸಿದ ಅಂದಾಜುಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮೊದಲು ಪ್ರಸಕ್ತ ಸಾಲಿನ ದರಪಟ್ಟಿಗೆ ಮರು ಮೌಲ್ಯ (recasting of Estimates to CSR) ಕಡ್ಡಾಯವಾಗಿ ಮಾಡತಕ್ಕದು ಹಾಗೂ ಮೂಲ ವಿನ್ಯಾಸವನ್ನು ಸಹ. ಅಗತ್ಯವಿದ್ದಲ್ಲಿ ಅಗತ್ಯತೆಗೆ ಅನುಗುಣವಾಗಿ ಮಾರ್ಪಡಿಸತಕ್ಕದ್ದು.
4. ಅಂದಾಜು ಪಟ್ಟಿ ತಯಾರಿಕೆಗೆ ಮೊದಲು ಅಗತ್ಯವಾದ ಪೂರ್ವಭಾವಿ ಪರೀಕ್ಷೆಗಳನ್ನು ಹಾಗೂ ಸಮೀಕ್ಷೆಗಳನ್ನು ನಡೆಸಿ ಅಂತಹ ವರದಿಯನ್ನು, ಫಲಿತಾಂಶಗಳನ್ನು ಅಂದಾಜು ಪಟ್ಟಿಯಲ್ಲಿ ಅಳವಡಿಸತಕ್ಕದು
5. ಅಂದಾಜಿನಲ್ಲಿ ಅಂದಾಜು ವೆಚ್ಚವನ್ನು ಯಾವ ಮೂಲದಿಂದ ಭರಿಸಲಾಗುತ್ತದೆ ಹಾಗೂ ಕಾಮಗಾರಿಯನ್ನು ತೆಗೆದುಕೊಳ್ಳಲು ಪ್ರಸಕ್ತ ವರ್ಷದ ಆಯವ್ಯಯದಲ್ಲಿ ಮಾಡಿಕೊಳ್ಳಲಾದ ಅನುವುಗಳ ಬಗ್ಗೆ ಸ್ಪಷ್ಟ ನಿಲುವುಗಳನ್ನು ನಮೂದಿಸಬೇಕು. (ಪ್ಯಾರ 119 KPWD code)
6. ಅಂದಾಜು ತಯಾರಿಕೆಯಲ್ಲಿ ಪ್ರಸಕ್ತ ಸಾಲಿನ ದರಗಳ ಜೊತೆಗೆ ಕಾಮಗಾರಿ ನಿರ್ವಹಿಸಬೇಕಾದ ಸಾಮಗ್ರಿಗಳ ಹೆಚ್ಚುವರಿ ಸಾಗಾಣೆ ದರಕ್ಕೆ (lead charges) ಮತ್ತು ಏರಿಸುವ/ಇಳಿಸುವ (lift charge) ದರಗಳನ್ನು ಅಧಿಕವಾಗಿ ಅವಶ್ಯಕವಿದ್ದಲ್ಲಿ ಹಾಗೂ ಅವಕಾಶ ಇದ್ದಲ್ಲಿ ಸೇರಿಸಿ ಅಂದಾಜನ್ನು ವಾಸ್ತವಿಕತೆ ಆಧಾರದ ಮೇಲೆ ತಯಾರಿಸಬೇಕು. (ಪ್ಯಾರ 118 KPWD code)
7. ಅಂದಾಜು ಜೊತೆಗೆ ಸಲ್ಲಿಸುವ ವರದಿಯಲ್ಲಿ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು

ಎ) ಕಾಮಗಾರಿಯ ಅವಶ್ಯಕತೆ,
ಬಿ) ಅಂದಾಜನ್ನು ಮಿತವ್ಯಯಕಾರಿಯಾಗಿ ತಯಾರಿಸುವ ಬಗ್ಗೆ ವರದಿ,
ಸಿ) ಕಾಮಗಾರಿಯ ಉಪಯೋಗ/ಬರಬಹುದಾದಆದಾಯ/ ಒದಗಿಸಲಾದ ಸಾರ್ವಜನಿಕ ಸೌಲಭ್ಯದ ಬಗ್ಗೆ ವಿವರಗಳು,
ಡಿ) ಕಾಮಗಾರಿಯ ಪರಿಮಿತಿ (scope of work),
ಇ) ಅಳವಡಿಸಿಕೊಳ್ಳಲಾದ ವಿಶಿಷ್ಟ ವಿವರಣೆ ಮತ್ತು ವಿನ್ಯಾಸಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ,
ಎಫ್) ಯೋಜನೆ/ಕಾಮಗಾರಿ ವೆಚ್ಚ,
ಜಿ) ಹಣಕಾಸಿನ ಲಭ್ಯತೆ, ಆಯವ್ಯಯದ ಅವಕಾಶ ಹಾಗೂ ವೆಚ್ಚದ ಲೆಕ್ಕ ಶೀರ್ಷಿಕೆ,
ಹೆಚ್) ದರಪಟ್ಟಿಯಲ್ಲಿ ದರಗಳು ಇಲ್ಲದ ಬಾಬ್ತುಗಳಿಗೆ ಅಳವಡಿಸಿಕೊಳ್ಳಲಾದ ದರಗಳ ಲೆಕ್ಕಚಾರ ಪಟ್ಟಿ ಅವುಗಳಿಗೆ ಆಧಾರ ಇವುಗಳ ಬಗ್ಗೆ ಸಂಕ್ಷಿಪ್ತ ವರದಿ,
ಐ) ಕಾಮಗಾರಿ ನಿರ್ವಹಣೆಗೆ ಅವಶ್ಯಕವಾದ ಸ್ಥಳ ಲಭ್ಯತೆ, ಭೂಸ್ವಾಧೀನದ ವಿವರ,
ಜೆ) ಕಾಮಗಾರಿ ನಿರ್ವಹಿಸಲು ಬೇಕಾದ ಅವಧಿ,
ಕೆ) ಕಟ್ಟಡ ಉಪಯೋಗಿಸುವ ಇಲಾಖೆಯ ಸಕ್ಷಮ ಅಧಿಕಾರಿಯು ಅಂದಾಜಿನ ಅವಕಾಶಗಳನ್ನು ಒಪ್ಪಿಕೊಂಡಿರುವ ಬಗ್ಗೆ ಮಾಹಿತಿ ಮತ್ತು ವರದಿ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಕೈಗೊಂಡಿರುವ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ತಾಂತ್ರಿಕ ಸಮಾಲೋಚಕರುಗಳ (ಪಿ.ಎಂ.ಸಿ.) ಮೂಲಕ ತಯಾರಿಸಲಾಗಿದೆ. ಅಂದಾಜು ಪಟ್ಟಿಯೊಂದಿಗೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಈ ಕಾಮಗಾರಿಯ ನಿರ್ವಹಣೆ ಸಮಯದಲ್ಲಿ ಯಾವುದೇ variation ಉದ್ಭವಿಸುವುದಿಲ್ಲವೆಂದು ತಾಂತ್ರಿಕ ಸಮಾಲೋಚಕರು (ಪಿ.ಎಂ.ಸಿ.) ದೃಢೀಕರಿಸಿರುವುದು ವ್ಯಕ್ತವಾಗಿದೆ. ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಕಡತಗಳನ್ನು ಪರಿಶೀಲಿಸಿದಾಗ ಬಹುತೇಕ ಹೆಚ್ಚಿನ ಕಾಮಗಾರಿಗಳಲ್ಲಿ ವರ್ಕ್‌ಸ್ಲಿಪ್ ಮತ್ತು ಇ.ಐ.ಆರ್.ಎಲ್. ಉಂಟಾಗಿದ್ದು, ತಾಂತ್ರಿಕ ಸಮಾಲೋಚಕರೇ ಈ ಪ್ರಸ್ತಾವನೆಗಳನ್ನು ಅನುಮೋದನೆಗಾಗಿ ಸಲ್ಲಿಸಿರುವುದು ಕಂಡು ಬಂದಿದೆ. ವರ್ಕ್‌ಸ್ಲಿಪ್

123

ಕಂಡು ಬಂದಿದೆ. ಸದರಿ ಇಲಾಖೆಯ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಿಗೆ ನಿವೇಶನ ಒದಗಿಸಲು ಪತ್ರ ವ್ಯವಹರಿಸಿರುವುದು ವ್ಯಕ್ತವಾಗಿದೆ.

ಮೇಲ್ಕಂಡ ಪ್ರಕರಣದಲ್ಲಿ ಕಟ್ಟಡ ಕಟ್ಟಬೇಕಾದ ಸ್ಥಳದ ಲಭ್ಯತೆ ಇಲ್ಲದೇ ಇದ್ದರೂ ಅಂದಾಜು ಪಟ್ಟಿ ತಯಾರಿಸಿರುವ ಯೋಜನಾ ಸಮಾಲೋಚಕರ ವಿರುದ್ಧ ಹಾಗೂ ಟೆಂಡರ್ ಆಹ್ವಾನಿಸಿ ಕಾಮಗಾರಿಗೆ ಕಾರ್ಯಾದೇಶ ನೀಡಿ 1 ½ ವರ್ಷ ಕಳೆದರೂ ಗುತ್ತಿಗೆದಾರರಿಗೆ ನಿವೇಶನ ಹಸ್ತಾಂತರಿಸದಿರುವುದರಿಂದ ಆಡಳಿತ ವೈಫಲ್ಯ ಕಂಡು ಬಂದಿದೆ. ಕಾಮಗಾರಿ ವಿಳಂಬದಿಂದಾಗಿ ದರ ವ್ಯತ್ಯಾಸಗಳಿಂದ ಗುತ್ತಿಗೆದಾರರು ಹೆಚ್ಚುವರಿ ದರ (Price Escalation) ಕ್ಲೇಮು ಮಾಡಿದಲ್ಲಿ ಸಂಘದ ಅಧಿಕಾರಿಗಳಿಗೆ ಜವಾಬ್ದಾರಿ ನಿಗದಿಪಡಿಸುವುದು ಸೂಕ್ತವೆಂದು ಅಭಿಪ್ರಾಯಿಸಲಾಗಿದೆ.

3.9 <u>ಬೆಂಗಳೂರು ನಗರ ಜಿಲ್ಲೆ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಕಟ್ಟಡ ಆವಲಹಳ್ಳಿ [ಜಿ+1] ನಿರ್ಮಾಣ ಕಾಮಗಾರಿಯಲ್ಲಿನ ನ್ಯೂನ್ಯತೆ ಬಗ್ಗೆ:</u>

ಮೇಲ್ಕಂಡ ಕಾಮಗಾರಿಗೆ ಹಿಂದುಳಿದ ವರ್ಗಗಳ ಇಲಾಖೆಯು ತನ್ನ ಆದೇಶದ ಸಂಖ್ಯೆ: ಬಿಸಿಡಬ್ಲ್ಯೂ 1339 ಬಿಎಂಎಸ್ 2017, ದಿನಾಂಕ: 06-12-2017 ರಲ್ಲಿ ರೂ.3.25 ಕೋಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿ ಅಲ್ಪಾವಧಿ ಟೆಂಡರ್ ಮೂಲಕ ನಿರ್ವಹಿಸಲು ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ಸೂಚಿಸಿರುತ್ತದೆ. ಕಾಮಗಾರಿಯನ್ನು ಆಯವ್ಯಯ ಲೆಕ್ಕ ಶೀರ್ಷಿಕೆ 4225-03-277-02-06 ಆಬ್ಜಕ್ಟಿವ್ ಕೋಡ್ 386-422-423 ಗಳಡಿ ಕಾಮಗಾರಿ ಮಂಜೂರಾಗಿದೆ.

ಸದರಿ ಕಾಮಗಾರಿಗೆ ಮೆ: ಚೇತನ್ ಕನ್ಸೋರ್ಟಿಯಮ್ ರವರು ಯೋಜನಾ ಸಮಾಲೋಚಕರರಾಗಿರುತ್ತಾರೆ. ಅಂದಾಜು ಪಟ್ಟಿ ತಯಾರಿಸುವ ಮೊದಲು ಕಾಮಗಾರಿ ಸ್ಥಳ ಪರಿಶೀಲಿಸಿರುವುದಾಗಿ ಸಂಘದ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಯೋಜನಾ ಸಮಾಲೋಚಕರು ದೃಢೀಕರಿಸಿದ್ದರೂ, ಯಾವ ದಿನಾಂಕದಂದು ಸ್ಥಳ ಪರಿಶೀಲಿಸಿದೆ ಎಂದು ಅದರಲ್ಲಿ ನಮೂದಿಸಿಲ್ಲ. ಕಾಮಗಾರಿಗೆ ಇ-ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಿ ರೂ.31481000.00 ಗಳಿಗೆ ಟೆಂಡರ್ ಅನುಮೋದಿಸಿ ದಿನಾಂಕ 08.03.2018 ರಂದು ಕರಾರು ಮಾಡಿಕೊಂಡು ಶ್ರೀ ಕೆ. ಶ್ರೀಧರಬಾಬು ಎಂಬ ಗುತ್ತಿಗೆದಾರರಿಗೆ ದಿನಾಂಕ: 08.03.2018 ರಂದು ಕಾರ್ಯಾದೇಶ ನೀಡಲಾಗಿದೆ. ಕಾಮಗಾರಿ ನಿರ್ವಹಿಸಲು 9 ತಿಂಗಳ ಕಾಲಾವಧಿ ನೀಡಲಾಗಿದೆ.

ಕಾಮಗಾರಿ ನಡೆಯಬೇಕಾದ ಸ್ಥಳದ ಅಲಭ್ಯತೆಯಿಂದ ಕಾಮಗಾರಿ ಈವರೆಗೆ ಪ್ರಾರಂಭವಾಗಿರುವುದಿಲ್ಲ. ಗುತ್ತಿಗೆದಾರರಾದ ಶ್ರೀ ಕೆ. ಶ್ರೀಧರಬಾಬು ರವರು ಪದೇ ಪದೇ ಅಂದರೆ ದಿನಾಂಕ: 20.08.2018, 12.10.2018 ಹಾಗೂ 08.07.2019 ರಲ್ಲಿ ಪತ್ರ ಬರೆದು ಕಟ್ಟಡ ಕಟ್ಟಲು ನಿವೇಶನ ಹಸ್ತಾಂತರಿಸುವಂತೆ ಕೋರಿರುವುದನ್ನು ಗಮನಿಸಲಾಗಿದೆ.

ಸಂಘದ ಸಹಾಯಕ ಕಾರ್ಯಪಾಲಕ ಅಭಿಯಂತರರು ದಿನಾಂಕ: 30.04.2018 ರಂದು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಇಲಾಖೆ ರವರಿಗೆ ಪತ್ರ ಬರೆದು ಕಟ್ಟಡ ನಿರ್ಮಾಣಕ್ಕೆ ನಿವೇಶನ ಒದಗಿಸಲು ಹಾಗೂ ನಿವೇಶನಕ್ಕೆ ಹದ್ದು ಬಸ್ತು ಮಾಡಿ ವಹಿಸಿ ಕೊಡಲು ಕೋರಿರುತ್ತಾರೆ. ಕಾರ್ಯನಿರ್ವಾಹಕ ನಿರ್ದೇಶಕರ ದಿನಾಂಕ: 09-08-2018 ರಂದು ಹಿಂದುಳಿದ ವರ್ಗಗಳ ಇಲಾಖೆಯ ಆಯುಕ್ತರಿಗೆ ಪತ್ರ ಬರೆದು ಸದರಿ ಪ್ರಕರಣವು ಸೇರಿದಂತೆ ಒಟ್ಟು 10 ಪ್ರಕರಣಗಳಲ್ಲಿ ನಿವೇಶನ ಒದಗಿಸದಿರುವುದರಿಂದ ಕಾಮಗಾರಿ ಪ್ರಾರಂಭಿಸಲು ಸಾಧ್ಯವಾಗಿಲ್ಲ ಎಂದು ತಿಳಿಸಿರುತ್ತಾರೆ.

ಸಂಘದ ಅಧೀಕ್ಷಕ ಅಭಿಯಂತರರು ಹಿಂದುಳಿದ ವರ್ಗಗಳ ಇಲಾಖೆಯ ಆಯುಕ್ತರಿಗೆ ಪತ್ರ ಬರೆದು ಕಟ್ಟಡ ನಿರ್ಮಾಣಕ್ಕೆ ಮೊದಲು ನೀಡಿದ್ದ ಬಿದರಹಳ್ಳಿ ಹೋಬಳಿಯ ಜ್ಯೋತಿಪುರದ ಸರ್ವೆ ನಂ.101 ರ 0-20 ಗುಂಟೆ ನಿವೇಶನ ತಕರಾರಿನಿಂದ ಕೂಡಿದ್ದು ನಂತರ ಸರ್ವೆ ನಂ. 193 ರಲ್ಲಿ ನೀಡಲಾದ ಸರ್ಕಾರಿ ಗೋಮಾಳದ 0-10 ಗಂಟೆ ಪ್ರದೇಶ ಹಳ್ಳದಿಂದ ಕೂಡಿದ್ದು ಮಳೆಗಾಲದಲ್ಲಿ ಜಲಾವೃತವಾಗುತ್ತದೆ ಹಾಗೂ ಅಂದಾಜು ಪಟ್ಟಿ ಬದಲಾಯಿಸಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ನಾಲ್ಕನೆಯ ಬಿಲ್ಲು ರೂ. 7140899.00

ಐದನೆಯ ಬಿಲ್ಲು ರೂ. 910950.00

ಒಟ್ಟು ರೂ. 3,00,82,414.00

ಕಾಮಗಾರಿಯಲ್ಲಿ ನಿರ್ವಹಿಸಿದ: ವರ್ಕ್‌ಸ್ಲಿಪ್ ಮೊತ್ತ ರೂ. 22.70 ಲಕ್ಷ

ಇ.ಐ.ಆರ್.ಎಲ್. ಮೊತ್ತ ರೂ. 55.47 ಲಕ್ಷ

ಒಟ್ಟು ರೂ. 75.17 ಲಕ್ಷ

ಮೇಲ್ಕಂಡ ಕಾಮಗಾರಿಗೆ ದಿನಾಂಕ: 07.04.2017 ರಂದು ಕಾರ್ಯಾದೇಶ ನೀಡಿದ್ದು ಕಾಮಗಾರಿ ನಿರ್ವಹಣೆ ಸಂದರ್ಭದಲ್ಲಿ ಹಲವಾರು ತಾಂತ್ರಿಕ ವಿಚಲನೆಗಳಿಂದಾಗಿ ವರ್ಕ್‌ಸ್ಲಿಪ್ ಹಾಗೂ ಇ.ಐ.ಆರ್.ಎಲ್. ನಿರ್ವಹಿಸಲಾಗಿದೆ. ಅವುಗಳನ್ನು ಸೇರಿಸಿ ಪರಿಷ್ಕೃತ ಅಂದಾಜು ತಯಾರಿಸಿದೆ. ಕಾರ್ಯನಿರ್ವಾಹಕ ನಿರ್ದೇಶಕರಿಂದ ಅನುಮೋದನೆ ಪಡೆಯಲಾಗಿದೆ.

ಕಡತದಲ್ಲಿ ಕಂಡು ಬಂದ ದಾಖಲೆಯಂತೆ ದಿನಾಂಕ: 06-08-2018 ರಂದು ಶಾಲೆಯ ಪ್ರಾಂಶುಪಾಲರು, ಕಾರ್ಯನಿರ್ವಾಹಕ ನಿರ್ದೇಶಕರಿಗೆ ಪತ್ರ ಬರೆದು ಹಲವು ನ್ಯೂನ್ಯತೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದು, ಅದರಲ್ಲಿ ಶೌಚಾಲಯದ ದುರಸ್ತಿ ಬಗ್ಗೆ, ಸೋಲಾರ್ ಹಾಳಾಗಿರುವ ಬಗ್ಗೆ, 6 ವರ್ಷದಿಂದ ಕಟ್ಟಡಕ್ಕೆ ಸುಣ್ಣ-ಬಣ್ಣ ಬಳಿಯದಿರುವ ಬಗ್ಗೆ, ವಿದ್ಯುತ್ ವೈರಿಂಗ್ ದುರಸ್ತಿ ಬಗ್ಗೆ ಹಾಗೂ ಗಾರೆ ಹಾಳಾಗಿರುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ. ಈ ಅಂಶವನ್ನು ಗಮನಿಸಿದಾಗ ಕಾಮಗಾರಿ ಸಮರ್ಪಕವಾಗಿ ನಡೆದಿರುವ ಬಗ್ಗೆ ಸಂಶಯ ವ್ಯಕ್ತವಾಗುತ್ತದೆ.

ಮೂರನೆಯ ಪಾರ್ಟಿ ಗುಣಮಟ್ಟ ಪರಿಶೀಲನೆಯ ಗೈರುಹಾಜರಿಯಲ್ಲಿ ಗುತ್ತಿಗೆದಾರರು ಪರಿಷ್ಕೃತ ಅಂದಾಜು ಪಟ್ಟಿಯಲ್ಲಿ ನಮೂದಿಸಿರುವ ಐಟಂಗಳನ್ನು ವಾಸ್ತವಿಕವಾಗಿ ನಿರ್ವಹಿಸಿರುವ ಬಗ್ಗೆ ಕೂಲಂಕಷ ತಾಂತ್ರಿಕ ತನಿಖೆ ನಡೆಸುವಂತೆ ವಿಶೇಷ ತನಿಖೆಯಲ್ಲಿ ಶಿಫಾರಸ್ಸು ಮಾಡಲಾಗಿದೆ.

3.8 <u>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಆಶ್ರಮ ಶಾಲೆ ನಿರ್ಮಾಣ ಕಾಮಗಾರಿಯಲ್ಲಿನ ನ್ಯೂನ್ಯತೆ ಬಗ್ಗೆ:</u>

ಆಶ್ರಮ ಶಾಲೆ ಕಟ್ಟಡ ಕಟ್ಟಬೇಕಾದ ಸ್ಥಳ – ಜೋಡಿಘಟ್ಟ ಮಾಗಡಿ (ತಾ)
ಆಯವ್ಯಯ ಲೆಕ್ಕ ಶೀರ್ಷಿಕೆ: 2225-02-794-0-04
ಅಂದಾಜು ಪಟ್ಟಿ ಮೊತ್ತ 2.95 ಕೋಟಿ
ಆಡಳಿತಾತ್ಮಕ ಮಂಜೂರಾತಿ ಆದೇಶ ಸಂಖ್ಯೆ: ಸಕಇ 597 ಮೋದೇಶಾ 2017, ದಿ:30.11.2017
ಯೋಜನಾ ಸಮಾಲೋಚಕರು – ಮೆ: ಪ್ರೀಮಿಯರ್ ಟೆಕ್ನಿಕಲ್ ಕನ್ಸಲ್‌ಟೆಂಟ್
ಗುತ್ತಿಗೆದಾರರ ಹೆಸರು – ಮೆ: ಟೆಕ್ನೋ ವೆಂಚರ್
ಅನುಮೋದಿತ ಟೆಂಡರ್ ಮೊತ್ತ – ರೂ.29127000.00
ಕಾಮಗಾರಿಗೆ ಕಾರ್ಯಾದೇಶ ನೀಡಿದ ದಿನಾಂಕ: 20.03.2018
ಕಾಮಗಾರಿಗೆ ನೀಡಿದ ಕಾಲಾವಧಿ 9 ತಿಂಗಳು

ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಪರವಾಗಿ ಮೇಲ್ಕಂಡ ಆಶ್ರಮ ಶಾಲೆ ಕಟ್ಟಲು ಅಲ್ಪಾವಧಿ ಟೆಂಡರ್ ಕರೆದು ದಿನಾಂಕ: 20.03.2018 ರಂದು ಕಾರ್ಯಾದೇಶ ನೀಡಿದ್ದರೂ, ಆಶ್ರಮ ಶಾಲೆ ಕಟ್ಟಬೇಕಾದ ಸ್ಥಳ ಹಸ್ತಾಂತರಿಸಿಲ್ಲ ಅಥವಾ ಸ್ಥಳ ಗುರುತಿಸಿಲ್ಲ. ಗುತ್ತಿಗೆದಾರರು ದಿನಾಂಕ: 16-04-2018, 14-06-2018 ಹಾಗೂ 25-06-2019 ರಲ್ಲಿ ನಿವೇಶನ ಹಸ್ತಾಂತರಿಸುವಂತೆ ಸಂಘಕ್ಕೆ ಪತ್ರ ಬರೆದಿರುವ ಮೇರೆಗೆ ಕಾರ್ಯನಿರ್ವಾಹಕ ನಿರ್ದೇಶಕರು ದಿನಾಂಕ: 13-03-2019 ರಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ನಿರ್ದೇಶಕರಿಗೆ ಪತ್ರ ಬರೆದು ನಿವೇಶನ ಒದಗಿಸಲು ಕೋರಿರುವುದು

(2)

ಈವರೆಗೆ ಪೂರ್ಣಗೊಳಿಸಿಲ್ಲವೆಂದು, ಶೌಚಾಲಯ ಸಮಸ್ಯೆ ಇದ್ದು, ಮಕ್ಕಳಿಗೆ ಸುರಕ್ಷತೆ ಇಲ್ಲವಾಗಿದ್ದು, ಇದರಿಂದಾಗಿ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿರುತ್ತಾರೆ. ವಸತಿ ಶಿಕ್ಷಣ ಸಂಘದ ಸಹಾಯಕ ಕಾರ್ಯಪಾಲಕ ಅಭಿಯಂತರರು ದಿನಾಂಕ: 25-01-2019 ರಂದು ಅಧೀಕ್ಷಕ ಅಭಿಯಂತರರಿಗೆ ಪತ್ರ ಬರೆದು ದುರಸ್ತಿ ಕೆಲಸ ಸಮರ್ಪಕವಾಗಿ ಆಗುತ್ತಿಲ್ಲ ಎಂದು ತಿಳಿಸಿರುತ್ತಾರೆ.

ದಿನಾಂಕ: 29-09-2018 ರಂದು ಶಾಲೆಯ ಪ್ರಾಂಶುಪಾಲರು ಶಿಕ್ಷಣ ಇಲಾಖೆಗೆ ಪತ್ರ ಬರೆದು ದಿನಾಂಕ: 20-05-2018 ರಂದು ರಾತ್ರಿ ಆನೆಯು ಕಾಪೌಂಡ್ ಒಳಗೆ ಬಂದು ಹೊರ ಹೋಗಲು ದಿಕ್ಕು ತೋಚದೆ ಕಾಂಪೌಂಡ್ ಹಾಳು ಮಾಡಿದ್ದು, ಅದನ್ನು ದುರಸ್ತಿ ಮಾಡಿಸುವಂತೆ ಕೋರಿರುತ್ತಾರೆ. ದಿನಾಂಕ: 16-07-2019 ರಲ್ಲಿ ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖ್ಯ ಅಭಿಯಂತರರು ಸಂಘದ ಕಾರ್ಯಪಾಲಕ ಅಭಿಯಂತರರಿಗೆ ಪತ್ರ ಬರೆದು ಶಾಲೆಯ ದುರಸ್ತಿಗಾಗಿ ಪಡೆದಿರುವ ರೂ.156.90 ಲಕ್ಷಗಳ ಪೈಕಿ ರೂ.33.80 ಲಕ್ಷ ಉಳಿದಿರುವುದಾಗಿಯೂ, ಸದರಿ ಮೊತ್ತಕ್ಕೆ ಕಾಂಪೌಡ್ ಹಾಗೂ ಸಿ.ಸಿ. ರಸ್ತೆ ನಿರ್ಮಾಣಕ್ಕೆ ರೂ.33.80 ಲಕ್ಷಗಳ 2 ಅಂದಾಜು ಪಟ್ಟಿಗಳನ್ನು ತಯಾರಿಸಿದ್ದು, ಅದಕ್ಕೆ ಮಂಜೂರಾತಿ ನೀಡಲು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಗಮನಿಸಿದಾಗ ಕೆ.ಆರ್.ಐ.ಡಿ.ಎಲ್. ಸಂಸ್ಥೆಯು ಡಿಸೆಂಬರ್-2016 ರಲ್ಲಿ ಕಾಮಗಾರಿ ನಿರ್ವಹಿಸಲು ಅನುಮತಿ ಪಡೆದಿದ್ದರೂ ಹಾಗೂ ಹಣ ಪಡೆದಿದ್ದರೂ ಕೆಲಸ ಸಮರ್ಪಕವಾಗಿ ನಿರ್ವಹಿಸಿಲ್ಲ ಎಂದು ಮೇಲ್ನೋಟಕ್ಕೆ ಕಂಡು ಬರುತ್ತದೆ. ವಸತಿ ಶಿಕ್ಷಣ ಸಂಘದ ಅಧಿಕಾರಿಗಳು ಮೇಲ್ವಿಚಾರಣೆ ಮಾಡುವಲ್ಲಿ ವಿಫಲರಾಗಿರುತ್ತಾರೆ. ಪ್ರಾರಂಭಿಕ ಹಂತದಲ್ಲಿ ಅವಶ್ಯಕತೆಗೆ ಎದುರಾಗಿ ಅಂದಾಜು ಪಟ್ಟಿ (Need based estimate) ತಯಾರಿಸಿದ್ದಲ್ಲಿ ರೂ.33.80 ಲಕ್ಷ ಉಳಿತಾಯ ಆಗುತ್ತಿತ್ತು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಪಾವತಿಸಲಾದ ಮೊತ್ತಕ್ಕೆ ಈವರೆಗೆ ಉಪಯುಕ್ತತಾ ಪತ್ರ ಹಾಗೂ ದಾಖಲೆಗಳನ್ನು ಪಡೆದುಕೊಳ್ಳದಿರುವುದು ಸಂಘದ ಅಧಿಕಾರಿಗಳ ಉದಾಸೀನತೆಯನ್ನು ತೋರಿಸುತ್ತದೆ.

ಬೈರಮಂಗಲದ ಹಿಂದುಳಿದ ವರ್ಗದ ಮೊರಾರ್ಜಿ ವಸತಿ ಶಾಲೆಯ ದುರಸ್ತಿಗಾಗಿ ಕೆ.ಆರ್.ಐ.ಡಿ.ಎಲ್. ಸಂಸ್ಥೆ ಪಡೆದಿರುವ ರೂ.156.90 ಲಕ್ಷಗಳನ್ನು ಖರ್ಚು ಮಾಡಿರುವ ಬಗ್ಗೆ ಕೂಲಂಕಷ ತನಿಖೆ ನಡೆಸಿ ಲೋಪ ಕಂಡು ಬಂದಲ್ಲಿ ಕಾನೂನು ಕ್ರಮ ಜರುಗಿಸಬೇಕೆಂದು ವಿಶೇಷ ಲೆಕ್ಕ ತನಿಖೆಯಲ್ಲಿ ಶಿಫಾರಸ್ಸು ಮಾಡಲಾಗಿದೆ.

3.12 ನಿರ್ಮಿತಿ ಕೇಂದ್ರಕ್ಕೆ ಪಾವತಿಸಲಾದ ಮೊತ್ತಕ್ಕೆ ಹಣ ಬಳಕೆ ಪ್ರಮಾಣ ಪತ್ರ ಪಡೆಯದಿರುವ ಬಗ್ಗೆ:

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಆಡಳಿತಕ್ಕೆ ಒಳಪಟ್ಟ ವಸತಿ ಶಾಲೆಗಳಲ್ಲಿ ರಾಷ್ಟ್ರ ಧ್ವಜಸ್ತಂಭ ನಿರ್ಮಾಣ ಮಾಡಲು ಪ್ರತಿ ಧ್ವಜಸ್ತಂಭ ನಿರ್ಮಾಣಕ್ಕೆ ರೂ.2.20 ಲಕ್ಷದಂತೆ ಒಟ್ಟು ರೂ.2,70,82,000.00 ಗಳನ್ನು ನಿರ್ಮಿತಿ ಕೇಂದ್ರ, ಬೆಂಗಳೂರು ಗ್ರಾಮಾಂತರ ಇವರಿಗೆ ಕೆಳಕಂಡಂತೆ ಪಾವತಿಸಲಾಗಿದೆ.

ಲೋಕೋಪಯೋಗಿ ಇಲಾಖೆಯ ಮೈಸೂರು ವಿಶೇಷ ವಿಭಾಗದವರು ಪ್ರತಿ ಧ್ವಜ ಸ್ತಂಭ ನಿರ್ಮಾಣಕ್ಕೆ ರೂ.2.20 ಲಕ್ಷಗಳ ಅಂದಾಜು ಪಟ್ಟಿ ಅನುಮೋದಿಸಿದ್ದು, ಅದರ ಆಧಾರದ ಮೇಲೆ ಆದೇಶದ ಸಂಖ್ಯೆ ಸಕಇ 23 ಮೊದೇಶಾ 2018 ದಿನಾಂಕ: 10.01.2018 ರಲ್ಲಿ ನಿರ್ಮಿತಿ ಕೇಂದ್ರದ ಮೂಲಕ ನಿರ್ವಹಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಶಾಲೆಗಳಲ್ಲಿ ರಾಷ್ಟ್ರ ಧ್ವಜಸ್ತಂಭ ನಿರ್ಮಿಸಲಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದು ಕಡತಗಳಲ್ಲಿ ಕಂಡು ಬಂದಿರುವುದಿಲ್ಲ. ಕರ್ನಾಟಕ ಆರ್ಥಿಕ ಸಂಹಿತೆ 1958 ರ ಅನುಚ್ಛೇದ 161 ರಂತೆ ನಿರ್ಮಿತಿ ಕೇಂದ್ರದಿಂದ ಹಣ ಬಳಕೆ ಪ್ರಮಾಣ ಪತ್ರ [Utilization Certificate] ಪಡೆದಿರುವುದಿಲ್ಲ. ಕಾಮಗಾರಿ ನಿರ್ವಹಣೆಗಾಗಿ ಹಣ ಪಾವತಿಸಿದ ನಂತರ ಈ ಹಣಕ್ಕೆದುರಾಗಿ ಭರಿಸಲಾದ ವೆಚ್ಚಕ್ಕೆ ಉಪಯುಕ್ತತಾ ಪತ್ರ ಪಡೆದುಕೊಳ್ಳುವುದು ಸಂಬಂಧಿಸಿದ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

ಮೇಲ್ಕಂಡ ಪ್ರಕರಣದಲ್ಲಿ ನಿವೇಶನದ ಲಭ್ಯತೆ ಬಗ್ಗೆ ನಿಖರತೆ ಇಲ್ಲದೇ ಅಥವಾ ನಿವೇಶನದ ಮಾಲಿಕತ್ವದ ಬಗ್ಗೆ ದೃಢಪಡಿಸಿಕೊಳ್ಳದೇ ರೂ.3.25 ಕೋಟಿಗಳಿಗೆ ಅಂದಾಜು ಪಟ್ಟಿ ತಯಾರಿಸಿರುವ ಯೋಜನಾ ಸಮಲೋಚಕರ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳದಿರುವುದನ್ನು ಹಾಗೂ ನಿವೇಶನ ಲಭ್ಯವಿಲ್ಲದಿದ್ದರೂ ಟೆಂಡರ್ ಕರೆದು ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬಹುದಾಗಿದೆ. ನಿವೇಶನ ಹಸ್ತಾಂತರ ವಿಳಂಬದಿಂದಾಗಿ ಗುತ್ತಿಗೆದಾರರು ದರಪಟ್ಟಿ ದರ ವ್ಯತ್ಯಾಸಗಳನ್ನು (Price Escalations) ಕ್ಲೇಮು ಮಾಡಿ ಕಾಮಗಾರಿಯ ಒಟ್ಟು ವೆಚ್ಚ ಹೆಚ್ಚಳವಾದಲ್ಲಿ ಸಂಘದ ಅಧಿಕಾರಿಗಳನ್ನೇ ಜವಾಬ್ದಾರರನ್ನಾಗಿಸುವಂತೆ ಅಭಿಪ್ರಾಯಿಸಿದೆ.

3.10 ಕಾಮಗಾರಿಗಳಲ್ಲಿ ಮೂರನೆಯ ಪಾರ್ಟಿಯಿಂದ ಗುಣಮಟ್ಟ ವರದಿಗಳನ್ನು ಪಡೆಯದಿರುವ ಬಗ್ಗೆ:

ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 55 ಪಿಡಬ್ಲ್ಯುಡಿ ಸೆಲ್ 2004, ಬೆಂಗಳೂರು ದಿನಾಂಕ: 17.02.2005 ರಂತೆ ರೂ.2.00 ಕೋಟಿ ಹಾಗೂ ಅದಕ್ಕೂ ಹೆಚ್ಚಿನ ಮೌಲ್ಯದ ಅಂದಾಜಿನ ಕಾಮಗಾರಿಗಳಲ್ಲಿ ಗುಣಮಟ್ಟದ ಪರಿಶೀಲನೆಯನ್ನು ಮೂರನೆಯ ಪಾರ್ಟಿಯಿಂದ ಕಡ್ಡಾಯವಾಗಿ ಮಾಡಿಸಬೇಕಾಗಿರುತ್ತದೆ. ಆದರೆ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ 2017-18 ರ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳಲ್ಲಿ ಗುಣಮಟ್ಟ ಪರಿಶೀಲನೆಗಾಗಿ ಮೂರನೆಯ ಪಾರ್ಟಿಯನ್ನು ನೇಮಿಸಿಕೊಂಡಿರುವುದಿಲ್ಲ. ಕಾಮಗಾರಿಗಳ ಅಂದಾಜು ಪಟ್ಟಿ ತಯಾರಿಕೆಯಿಂದ ಕಾಮಗಾರಿ ಪೂರ್ಣಗೊಳ್ಳುವವರೆಗಿನ ಪ್ರಕ್ರಿಯೆಗಾಗಿ ಯೋಜನಾ ತಾಂತ್ರಿಕ ಸಮಾಲೋಚಕರನ್ನು (Project Monitoring Consultants) ನೇಮಿಸಿಕೊಂಡಿದ್ದು ಕಾಮಗಾರಿಗಳ ಅಂದಾಜು ಪಟ್ಟಿಯಲ್ಲಿ ಶೇಕಡಾ 3 ರಷ್ಟು ಮೊತ್ತವನ್ನು ಪಿ.ಎಂ.ಸಿ ಶುಲ್ಕ ಪಾವತಿಸಲು ಅವಕಾಶ ಕಲ್ಪಿಸಿಕೊಂಡು ಅದರಂತೆ ಪಾವತಿಸಲಾಗುತ್ತಿದೆ. ಆದರೆ ಯೋಜನಾ ತಾಂತ್ರಿಕ ಸಮಾಲೋಚಕರೇ ಸಂಘದ ಪರವಾಗಿ ಅಂದಾಜು ಪಟ್ಟಿ ತಯಾರಿಕೆ ಟೆಂಡರ್ ಮೌಲ್ಯ ಮಾಪನ ಹಾಗೂ ಕಾಮಗಾರಿ ನಿರ್ವಹಣೆಯ ಮೇಲ್ವಿಚಾರಣೆ ಮಾಡುವುದರಿಂದ ಅವರು ನೀಡುವ ಸಾಮಗ್ರಿಗಳ ಗುಣಮಟ್ಟ ವರದಿ ಅಥವಾ ಪ್ರಯೋಗ ಶಾಲೆ ವರದಿಗಳನ್ನು ವಿಶ್ವಾಸಾರ್ಹ ಎಂದು ದೃಢೀಕರಿಸಲು ಸಾಧ್ಯವಾಗುವುದಿಲ್ಲ.

ವಿಶೇಷ ಲೆಕ್ಕ ಪರಿಶೋಧನೆ ಸಂದರ್ಭದಲ್ಲಿ ಗಮನಿಸಿದಂತೆ 2018-19 ರ ಸಾಲಿನಿಂದ ಮಾತ್ರ ಕಾಮಗಾರಿಗಳ ಗುಣಮಟ್ಟ ಪರಿಶೀಲಿನೆಗಾಗಿ ಮೂರನೆ ಪಾರ್ಟಿ ಏಜೆನ್ಸಿಯನ್ನು ನೇಮಿಸಿಕೊಳ್ಳಲಾಗಿರುವುದನ್ನು ಗಮನಿಸಲಾಗಿದೆ.

3.11 ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ಕಾಮಗಾರಿಗಾಗಿ ನೀಡಿದ ಹಣಕ್ಕೆ ಉಪಯುಕ್ತತಾ ಪತ್ರ ಪಡೆಯದಿರುವುದು ಹಾಗೂ ಕಾಮಗಾರಿ ನಿರ್ವಹಣೆ ಅವಧಿ ಅಗಾಧ ವಿಳಂಬವಾಗಿರುವ ಬಗ್ಗೆ:

ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬೈರಮಂಗಲದಲ್ಲಿ ಹಿಂದುಳಿದ ವರ್ಗದ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಸಂಪರ್ಕ ರಸ್ತೆ ಹಾಗೂ ಆವರಣ ಗೋಡೆ ನಿರ್ಮಾಣ ಕಾಮಗಾರಿಗಾಗಿ ರೂ.156.90 ಲಕ್ಷಗಳಿಗೆ ಅಂದಾಜು ಪಟ್ಟಿ ತಯಾರಿಸಿದ್ದು, ಸರ್ಕಾರದ ಆದೇಶ ಸಂಖ್ಯೆ: ಇಡಿ ಯೋ (1) ಸಿಆರ್ 3-49/16-17, ದಿನಾಂಕ: 15-12-2016 ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ರವರು ಕಡತದ ಕಚೇರಿ ಟಿಪ್ಪಣಿ ಸಂಖ್ಯೆ: 28 ರಲ್ಲಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಲು ಸೂಚಿಸಿದ್ದು ಅದರಂತೆ ಕಾಮಗಾರಿಯನ್ನು ವಹಿಸಿ ರೂ.156.90 ಲಕ್ಷಗಳನ್ನು ದಿನಾಂಕ: 20.03.2017 ರಂದು ಸದರಿ ಸಂಸ್ಥೆಗೆ RTGS ಮೂಲಕ ಠೇವಣಿ ನೀಡಲಾಗಿದೆ. ಆದರೆ ಈವರೆಗೆ ಸದರಿ ಸಂಸ್ಥೆಯಿಂದ ಕರ್ನಾಟಕ ಆರ್ಥಿಕ ಸಂಹಿತೆ 1958 ರ ಅನುಚ್ಛೇದ 161 ರಂತೆ ಉಪಯುಕ್ತತಾ ಪತ್ರವನ್ನು (Utilization Certificate) ಪಡೆದಿರುವುದಿಲ್ಲ.

ಬೈರಮಂಗಲ ಮೊರಾರ್ಜಿ ವಸತಿ ಶಾಲೆಯ ಪ್ರಾಂಶುಪಾಲರು ದಿನಾಂಕ: 04-01-2018 ರಂದು ಶಿಕ್ಷಣ ಇಲಾಖೆಗೆ ಪತ್ರ ಬರೆದು ಕೆ.ಆರ್.ಐ.ಡಿ.ಎಲ್. ಸಂಸ್ಥೆಯು ಏಪ್ರಿಲ್-2017 ರಲ್ಲಿ ದುರಸ್ತಿ ಪ್ರಾರಂಭಿಸಿ

ಕ್ರಮ ಸಂಖ್ಯೆ (1) ರ 45 ಕಾಮಗಾರಿಗಳನ್ನು ಮೊದಲು ದಿನಾಂಕ: 08-06-2018 ರ ಟೆಂಡರ್ ಅನುಮೋದನೆ ಸಮಿತಿಯಲ್ಲಿ ಮಂಡಿಸಲಾಗಿತ್ತು ನಂತರ ದಿನಾಂಕ: 27-08-2018 ರ ಟೆಂಡರ್ ಅನುಮೋದನಾ ಸಭೆಯಲ್ಲಿ ರದ್ದುಪಡಿಸುವ ತೀರ್ಮಾನ ಕೈಗೊಳ್ಳಲಾಗಿದೆ. ಕ್ರಮ ಸಂಖ್ಯೆ (2) ರ ಕಾಮಗಾರಿಗಳ ಪ್ರಕರಣಗಳು ಟೆಂಡರ್ ಆಹ್ವಾನಿಸಿದ ನಂತರ ತಾಂತ್ರಿಕ ಮೌಲ್ಯಮಾಪನ ಹಂತದಲ್ಲಿದ್ದು ರದ್ದುಪಡಿಸಲಾಗಿದೆ.

ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ ಪ್ಯಾರಾ 123 ಹಾಗೂ 124 ರ ಸೂಚನೆಗಳಂತೆ ಕಾಮಗಾರಿಗೆ ಹಣಕಾಸಿನ ಲಭ್ಯತೆ ಇಲ್ಲದಿದ್ದಲ್ಲಿ ಅಂದಾಜು ಪಟ್ಟಿಗಳಿಗೆ ತಾಂತ್ರಿಕ ಮಂಜೂರಾತಿ ನೀಡುವಂತಿಲ್ಲ. ಕರ್ನಾಟಕ ಆರ್ಥಿಕ ಸಂಹಿತೆ 1958 ರ ಅನುಚ್ಛೇದ 14, 15 ಹಾಗೂ 16 ರ ಸೂಚನೆಗಳಂತೆ ಸರ್ಕಾರದ ಹಣ ವೆಚ್ಚ ಮಾಡಬೇಕಾದಲ್ಲಿ ಹಣಕಾಸಿನ ಲಭ್ಯತೆ (Fund Allocation) ಹಾಗೂ ಸಕ್ಷಮ ಮಂಜೂರಾತಿ ಅವಶ್ಯಕವಾಗಿರುತ್ತದೆ. ಆದರೆ ಮೇಲ್ಕಂಡ ಪ್ರಕರಣದಲ್ಲಿ ಹಣಕಾಸಿನ ಕೊರತೆಯಿಂದಾಗಿ ಕಾಮಗಾರಿಗಳ ಟೆಂಡರ್ ರದ್ದುಪಡಿಸಿರುವ ಕ್ರಮ ವಿವೇಚನಾ ರಹಿತ ಕ್ರಮವಾಗಿದ್ದು, ಆರ್ಥಿಕ ವಿಷಯಗಳ ನಿರ್ವಹಣೆಯಲ್ಲಿ ಸಂಘದ ಅಧಿಕಾರಿಗಳು ಸಮರ್ಪಕವಾಗಿ ತೀರ್ಮಾನಗಳನ್ನು ಕೈಗೊಳ್ಳದಿರುವುದರಿಂದ ಅನಗತ್ಯವಾಗಿ ಸರ್ಕಾರದ ಹಣ ಹಾಗೂ ಮಾನವ ಶ್ರಮ ಪೋಲಾಗಲು ಅವಕಾಶ ನೀಡಿದಂತಾಗಿದೆ ಎಂಬ ಅಂಶವನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದು, ಇನ್ನು ಮುಂದೆ ಈ ರೀತಿಯ ನ್ಯೂನ್ಯತೆಗಳು ಮರುಕಳಿಸದಂತೆ ಸರ್ಕಾರದಿಂದ ಸಂಘಕ್ಕೆ ಕಟ್ಟು ನಿಟ್ಟಿನ ನಿರ್ದೇಶನ ನೀಡುವುದು ಅವಶ್ಯಕವಾಗಿದೆ.

3.14 ಕಾಮಗಾರಿಗಳ ನಿರ್ವಹಣೆಗಾಗಿ ಗುತ್ತಿಗೆದಾರರೊಂದಿಗೆ ಕರಾರು ಮಾಡಿಕೊಳ್ಳುವಾಗ ನಿಗದಿತ ಮೌಲ್ಯದ <u>ಮುದ್ರಾಂಕ ಪತ್ರ (Stamp Paper) ಪಡೆಯದಿರುವ ಬಗ್ಗೆ:</u>

ಕರ್ನಾಟಕ ಸ್ಟಾಂಪುಗಳ ಮತ್ತು ನೋಂದಣಿ ಕಾಯ್ದೆ 1957 ರ ಸೆಕ್ಷನ್ 5(1)(ಡಿ) ರ ತಿದ್ದುಪಡಿಯಂತೆ ಕಾಮಗಾರಿಗಳಲ್ಲಿ (Works Contract) ಗುತ್ತಿಗೆದಾರರೊಂದಿಗೆ ಕರಾರು ಮಾಡಿಕೊಳ್ಳುವಾಗ ರೂ.10.00 ಲಕ್ಷ ವರೆಗಿನ ಕರಾರು ಮೊತ್ತಕ್ಕೆ ರೂ.100.00 ಮೌಲ್ಯದ ಮುದ್ರಾಂಕ ಪತ್ರ ಹಾಗೂ ನಂತರದ ಪ್ರತಿ ರೂ.10.00 ಲಕ್ಷಗಳಿಗೆ ರೂ.100.00 ರಂತೆ ಮುದ್ರಾಂಕ ಕಾಗದ ಪಡೆದು ಕರಾರು ಮಾಡಿಕೊಳ್ಳಬೇಕು. ಆದರೆ ವಿಶೇಷ ಲೆಕ್ಕ ಪರಿಶೋಧನೆಯಲ್ಲಿ ಗಮನಿಸಿದಂತೆ ಎಲ್ಲಾ ಪ್ರಕರಣಗಳಲ್ಲಿಯೂ ರೂ.500.00 ಮೌಲ್ಯದ ಮುದ್ರಾಂಕ ಪತ್ರದಲ್ಲಿ ಕರಾರು ಮಾಡಿಕೊಳ್ಳಲಾಗಿದೆ. ಇದರಿಂದಾಗಿ ನೋಂದಣಿ ಮತ್ತು ಮುದ್ರಾಂಕ ಶುಲ್ಕ ರೂಪದಲ್ಲಿ ಬರಬೇಕಾಗಿದ್ದ ಲಕ್ಷಾಂತರ ರೂಪಾಯಿಗಳ ಆದಾಯ ಸರ್ಕಾರಕ್ಕೆ ನಷ್ಟವಾದಂತಾಗಿದೆ. ಸಾಂಕೇತಿಕವಾಗಿ ಕೆಲವು ಪ್ರಕರಣಗಳನ್ನು ಕೆಳಕಂಡಂತೆ ಉಲ್ಲೇಖಿಸಿದೆ.

ಕ್ರ. ಸಂ.	ಕಾಮಗಾರಿ ಹೆಸರು	ಗುತ್ತಿಗೆದಾರರ ಹೆಸರು	ಕರಾರು ಮೌಲ್ಯ (ಲಕ್ಷಗಳಲ್ಲಿ)	ಮುದ್ರಾಂಕ ಪತ್ರ ಪಡೆಯ ಬೇಕಾಗಿರುವುದು	ಮುದ್ರಾಂಕ ಪತ್ರ ಪಡೆದಿರುವುದು	ಮುದ್ರಾಂಕ ಪತ್ರ ಕಡಿಮೆ ಪಡೆದಿರುವುದು
1	ಪ್ಯಾಕೇಜ್-1 ದೇವಗಿರಿ, ಮಲ್ಲಾಡಿಹಳ್ಳಿ, ದೇವರಾಯ ಸಮುದ್ರ, ಯಡಾಪುರ ಇಲ್ಲಿ ವಸತಿ ಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನಿರ್ಮಾಣ	ಸ್ಟಾರ್ ಬಿಲ್ಡರ್ಸ್ ಅಂಡ್ ಡೆವಲಪರ್ಸ್	10691.18	106900.00	500.00	106400.00

ಕ್ರ ಸಂ.	ದಿನಾಂಕ	ಕಾಮಗಾರಿಗಳ ವಿವರ	ಪಾವತಿಸಿದ ಮೊತ್ತ
1	12.12.2017	ಮೈಸೂರು ಜಿಲ್ಲೆ 26 ಎಸ್.ಟಿ ಶಾಲೆಗಳಲ್ಲಿ ಧ್ವಜಸ್ತಂಭ ನಿರ್ಮಾಣ	5720000.00
2	12.12.2017	ಮೈಸೂರು ಜಿಲ್ಲೆ 8 ಎಸ್.ಟಿ ಶಾಲೆಗಳಲ್ಲಿ ಧ್ವಜಸ್ತಂಭ ನಿರ್ಮಾಣ	1760000.00
3	31.01.2018	ಗುಲ್ಬರ್ಗ ವಿಭಾಗ 9 ಎಸ್.ಟಿ ಶಾಲೆಗಳಲ್ಲಿ ಧ್ವಜಸ್ತಂಭ ನಿರ್ಮಾಣ	1881000.00
4	31.01.2018	ಬೆಳಗಾವಿ 4 ಎಸ್.ಟಿ ಶಾಲೆಗಳಲ್ಲಿ ಧ್ವಜಸ್ತಂಭ ನಿರ್ಮಾಣ	836000.00
5	31.01.2018	ಬೆಂಗಳೂರು ಗ್ರಾಮಾಂತರ 5 ಎಸ್.ಟಿ. ಶಾಲೆಗಳಲ್ಲಿ ಧ್ವಜಸ್ತಂಭ ನಿರ್ಮಾಣ	1045000.00
6	31.01.2018	ಗುಲ್ಬರ್ಗ ವಿಭಾಗ 20 ಎಸ್.ಟಿ ಶಾಲೆಗಳಲ್ಲಿ ಧ್ವಜಸ್ತಂಭ ನಿರ್ಮಾಣ	4400000.00
7	31.01.2018	ಬೆಳಗಾವಿ 24 ಎಸ್.ಟಿ ಶಾಲೆಗಳಲ್ಲಿ ಧ್ವಜಸ್ತಂಭ ನಿರ್ಮಾಣ	5280000.00
8	31.01.2018	ಬೆಳಗಾವಿ 28 ಎಸ್.ಟಿ ಶಾಲೆಗಳಲ್ಲಿ ಧ್ವಜಸ್ತಂಭ ನಿರ್ಮಾಣ	6160000.00
		ಒಟ್ಟು	**2,70,82,000.00**

ಈ ಕಾಮಗಾರಿಗಳ ಗುಣಮಟ್ಟ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳುವುದಲ್ಲದೆ, ನಿರ್ಮಿತಿ ಕೇಂದ್ರದೊಂದಿಗೆ ಪತ್ರ ವ್ಯವಹಾರ ಮಾಡಿ ಸದರಿ ಪ್ರಕರಣದಲ್ಲಿ ಖರ್ಚಾಗದ ಹಣ ಉಳಿದಿದ್ದಲ್ಲಿ ಹಿಂಪಾವತಿ ಮಾಡಿಕೊಂಡು ಉಪಯುಕ್ತತಾ ಪತ್ರ ಪಡೆದುಕೊಳ್ಳಲು ಕ್ರಮ ವಹಿಸುವುದು ಸೂಕ್ತವಾಗಿರುತ್ತದೆ.

3.13 ಟೆಂಡರ್‌ಗಳನ್ನು ರದ್ದುಪಡಿಸಿರುವ ಬಗ್ಗೆ:

ವಸತಿ ಶಿಕ್ಷಣ ಸಂಸ್ಥೆಗಳ ಸಂಘವು 2017-18 ರ ಸಾಲಿನಲ್ಲಿ ಟೆಂಡರ್ ಆಹ್ವಾನಿಸಿರುವುದಕ್ಕೆ ಸಂಬಂಧಿಸಿದಂತೆ ದಿನಾಂಕ: 27-08-2018 ರಂದು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಸಂಸ್ಥೆಯ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಟೆಂಡರ್ ಅನುಮೋದನಾ ಸಮಿತಿ ಸಭೆಯಲ್ಲಿ ಈ ಕೆಳಕಂಡ ಟೆಂಡರ್‌ಗಳನ್ನು ರದ್ದುಪಡಿಸಲಾಗಿದೆ.

ಕ್ರ ಸಂ.	ರದ್ದುಪಡಿಸಿದ ಒಟ್ಟು ಕಾಮಗಾರಿಗಳು	ಕಾಮಗಾರಿಗಳ ಅಂದಾಜು ಮೊತ್ತದಲ್ಲಿ ಟೆಂಡರ್‌ಗೆ ಇಟ್ಟ ಒಟ್ಟು ಮೊತ್ತ	ಒಟ್ಟು ಅನುಮೋದಿತ ಟೆಂಡರ ಮೊತ್ತ	ಟೆಂಡರ್ ರದ್ದುಪಡಿಸಲು ಕಾರಣ
1	45	5254.16 ಲಕ್ಷ	5482.77	ಸರ್ಕಾರದ ನಿರ್ದೇಶನದಂತೆ ಹಾಗೂ ಟೆಂಡರ್ ವ್ಯಾಲಿಡಿಟಿ ಮುಕ್ತಾಯವಾಗಿದ್ದರಿಂದ ಟೆಂಡರ್‌ಗಳನ್ನು ರದ್ದುಪಡಿಸಲಾಗಿದೆ.
2	36	–	–	ನಿಧಿ ಕೊರತೆಯಿಂದ ಕಾಮಗಾರಿಗಳನ್ನು ರದ್ದುಪಡಿಸಲು ತೀರ್ಮಾನಿಸಲಾಯಿತು.

117

ಮೇಲ್ಕಂಡ ವಿವರಗಳಂತೆ 2015-16 ರ ಲೋಕೋಪಯೋಗಿ ಶಿವಮೊಗ್ಗ ವೃತ್ತದ ಷೆಡ್ಯೂಲ್ ದರಗಳನ್ವಯ ತಯಾರಿಸಲಾದ ಅಂದಾಜು ಪಟ್ಟಿಯಂತೆ ಚಿತ್ರಹಳ್ಳಿ ಗ್ರಾಮದಲ್ಲಿ ನಿರ್ಮಿಸಲು ಉದ್ದೇಶಿಸಲಾದ ಮೊರಾರ್ಜಿ ದೇಸಾಯಿ ವಸತಿ ಶಾಲೆ (ಪರಿಶಿಷ್ಟ ವರ್ಗ) ನಿರ್ಮಾಣ ಸಿವಿಲ್ ಕಾಮಗಾರಿಗಳ ಅಂದಾಜು ಮೊತ್ತ ರೂ.1317.17 ಲಕ್ಷಕ್ಕೆದುರಾಗಿ ಮೆ// ಅಪೂರ್ವ ಕನ್‌ಸ್ಟ್ರಕ್ಷನ್ ಕಂ. ತುಮಕೂರು. ಇವರು ಸಲ್ಲಿಸಿದ (-) 5.67% ಕಡಿಮೆ ದರ ನಮೂದಿಸಲ್ಪಟ್ಟ ರೂ.1242.49 ಲಕ್ಷ ಮೊತ್ತದ ಟೆಂಡರ್‌ನ್ನು ದಿನಾಂಕ: 18.11.2016 ರಂದು ಜರುಗಿದ ಟೆಂಡರ್ ಅನುಮೋದನಾ ಸಮಿತಿಯಲ್ಲಿ ಅನುಮೋದಿಸಲಾಗಿರುತ್ತದೆ. ದಿನಾಂಕ: 23.12.2016 ರಂದು ಗುತ್ತಿಗೆದಾರರೊಂದಿಗೆ ಗುತ್ತಿಗೆ ಕರಾರು ಒಪ್ಪಂದವನ್ನು ಮಾಡಿಕೊಳ್ಳಲಾಗಿರುತ್ತದೆ. ದಿನಾಂಕ: 06.01.2017 ರಂದು ಕಾಮಗಾರಿ ಕಾರ್ಯಾದೇಶವನ್ನು ನೀಡಲಾಗಿದ್ದು ದಿನಾಂಕ: 24.02.2017 ರಂದು ನಿವೇಶನವನ್ನು ಹಸ್ತಾಂತರಿಸಲಾಗಿರುತ್ತದೆ. ದಿನಾಂಕ: 02.03.2017 ರಂದು ಕಾಮಗಾರಿಯನ್ನು ಪ್ರಾರಂಭಿಸಿರುವುದಾಗಿ ದಾಖಲಿಸಲಾಗಿದೆ. ಕಾಮಗಾರಿಯನ್ನು ಪೂರ್ಣಗೊಳಿಸಲು 18 ತಿಂಗಳ ಕಾಲಾವಧಿಯ ಗಡುವನ್ನು ನಿಗದಿಗೊಳಿಸಲಾಗಿದ್ದು, ದಿನಾಂಕ: 31.10.2019 ರ ಅಂತ್ಯದವರೆವಿಗೂ ಕಾಮಗಾರಿ ಪೂರ್ಣಗೊಳಿಸಿರುವುದಿಲ್ಲ ಹಾಗೂ ಹಸ್ತಾಂತರಿಸಲ್ಪಟ್ಟಿರುವುದಿಲ್ಲ. ಕಡತದಲ್ಲಿನ ಪತ್ರ ವ್ಯವಹಾರಗಳಿಂದ ತಿಳಿದುಬರುವಂತೆ ಕೆಲಸ ಕೈಗೊಂಡು ನಿರ್ಮಿಸಬೇಕಾದ ನಿರ್ದಿಷ್ಟ ಕಟ್ಟಡಗಳಿಗೆ ಸಂಬಂಧಿಸಿದಂತೆ ನಕ್ಷೆ, ವಿನ್ಯಾಸ ಇತ್ಯಾದಿ ಪೂರಕ ದಾಖಲೆಗಳನ್ನು ಒದಗಿಸಲಾಗಿದ್ದರೂ ಗುತ್ತಿಗೆದಾರರ ನಿಧಾನಗತಿಯ ಕಾರಣದಿಂದಾಗಿ ನಿಗದಿತ ಪ್ರಗತಿಯು ಸಾಧ್ಯವಾಗದ ಕಾರಣ ಗುತ್ತಿಗೆದಾರರಿಗೆ ಪಾವತಿಸಲಾದ ಬಿಲ್ಲುಗಳಿಂದ Liquidated Damages ವಸೂಲಿಸಲಾಗಿದೆ. ದಿನಾಂಕ: 20.11.2016 ರಂದು, ಅಂದರೆ ಕಾಮಗಾರಿಯ ಪ್ರಾರಂಭಗೊಳ್ಳುವುದಕ್ಕೆ ಪೂರ್ವದಲ್ಲಿಯೇ ಮಾನ್ಯ ಸಮಾಜ ಕಲ್ಯಾಣ ಸಚಿವರು ಕಾಮಗಾರಿಯ ಸ್ಥಳಕ್ಕೆ ಭೇಟಿ ನೀಡಿದಾಗ ಕಾಮಗಾರಿಯ ಮೂಲ ವಿನ್ಯಾಸದಲ್ಲಿಯೇ ಬದಲಾವಣೆಗಳನ್ನು ಸೂಚಿಸಿರುತ್ತಾರೆ. ಕಾಮಗಾರಿಯನ್ನು ಉದ್ದೇಶಿಸಲಾದ ಸ್ಥಳವು ಪ್ರಶಸ್ತವಾಗಿದ್ದು 50 ಎಕರೆಯಷ್ಟು ಜಾಗ ಲಭ್ಯವಿರುವುದರಿಂದ ಐದು ವಸತಿ ಶಾಲೆಗಳು ಒಂದೆ ಕಡೆ ಬರುವಂತೆ ಒಂದು ಸಮಗ್ರ ವಿನ್ಯಾಸ ಹಾಗೂ ನಕ್ಷೆಯನ್ನು ತಯಾರಿಸಿ ರಾಜ್ಯದಲ್ಲಿಯೇ ಮಾದರಿಯಾಗುವಂತೆ ವಸತಿ ಶಾಲೆಗಳ ಸಂಕೀರ್ಣವನ್ನು ನಿರ್ಮಿಸುವಂತೆ ಸೂಚಿಸಿರುವುದಾಗಿ ಕಡತದಲ್ಲಿ ದಾಖಲಿಸಲಾಗಿದೆ. ಪರಿಣಾಮವಾಗಿ ಕಾಮಗಾರಿಯ ಮೂಲ ವಿನ್ಯಾಸದಲ್ಲಿ ಅನೇಕ ಬದಲಾವಣೆಗಳು ಉಂಟಾಗಿರುತ್ತದೆ. ಐದು ವಸತಿ ಶಾಲೆಗಳು ಒಂದೇ ಕಡೆ ಬರುವುದರಿಂದ ಹಾಸ್ಟೆಲ್ ಕಟ್ಟಡ, ಸೆಪ್ಟಿಕ್ ಟ್ಯಾಂಕ್ ಇತ್ಯಾದಿ ಅವಶ್ಯಕತೆಗಳನ್ನು ಪ್ರತ್ಯೇಕವಾಗಿ ನಿರ್ಮಿಸುವ ಬದಲು ಸಮಗ್ರವಾಗಿ ಪರಿಗಣಿಸಿ ನಿರ್ಮಿಸಲು ನಿರ್ಧರಿಸಲಾಗಿದೆ.

ಅದರಂತೆ ಭೋದಕವರ್ಗದ ವಸತಿ ಗೃಹ ನಿರ್ಮಾಣ ಕಾಮಗಾರಿಯನ್ನು ಇದೇ ಆವರಣದಲ್ಲಿ ನಿರ್ಮಿಸಲಾಗುತ್ತಿರುವ MDRS (ಪ.ಜಾತಿ) ವಸತಿ ಶಾಲೆಯ ಕಾಮಗಾರಿಯಡಿಯಲ್ಲಿ ಸೇರಿಸಲು ನಿರ್ಧರಿಸಲಾಗಿದೆ. ಅದೇ ರೀತಿಯಾಗಿ 150 ಕೆ.ಎಲ್.ಡಿ. ಪ್ಲಾಂಟ್‌ನ್ನು ಇಡೀ ವಸತಿ ಶಾಲೆಗಳ ಸಂಕೀರ್ಣದ ಅಗತ್ಯಕ್ಕೆ ತಕ್ಕಂತೆ ನಿರ್ಮಿಸಲು ನಿರ್ಧರಿಸಲಾಗಿದೆ. ಪ್ರವೇಶ ದ್ವಾರದಲ್ಲಿ ನಿರ್ಮಿಸಲು ಉದ್ದೇಶಿಸಿದ ಆರ್ಚ್ ನಿರ್ಮಾಣವನ್ನು KRCRS (ಪ.ಜಾತಿ) ಕಾಮಗಾರಿಯಲ್ಲಿ ಕೈಗೊಳ್ಳಲು ಮತ್ತು ಇದೇ ರೀತಿಯಲ್ಲಿ ಅನೇಕ ಬದಲಾವಣೆಗಳನ್ನು ಮಾಡಲಾಗಿದ್ದು, ಕಾಮಗಾರಿಯ ಮೂಲ ಸ್ವರೂಪ ಮತ್ತು ವಿನ್ಯಾಸದಲ್ಲಿ ಬದಲಾವಣೆಗಳಾಗಿರುತ್ತದೆ. ಕಾಮಗಾರಿಯನ್ನು ಪ್ರಾರಂಭಿಸುವ ದಿನಾಂಕಕ್ಕೆ ಮೊದಲೇ ಕಾಮಗಾರಿಯ ಸ್ವರೂಪದಲ್ಲಿ ಮಹತ್ತರ ಬದಲಾವಣೆಗಳಾಗಿರುವುದು ಮತ್ತು ಇದರಿಂದ ಮೂಲ ಟೆಂಡರ್‌ನ ಐಟಂ ಹಾಗೂ ಪ್ರಮಾಣಗಳಲ್ಲಿ ತೀವ್ರ ಬದಲಾವಣೆಗಳಾಗುವುದು ಕಂಡು ಬಂದಿದ್ದಾಗ್ಯೂ ಸಹ ಅದೇ ಟೆಂಡರ್‌ನ್ನೇ ಮುಂದುವರಿಸಿ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಹೆಚ್ಚುವರಿ ಹಾಗೂ ಕಾಮಗಾರಿಯಲ್ಲಿ ಬದಲಾವಣೆಗಳನ್ನು ವರ್ಕ್‌ಸ್ಲಿಪ್ ಮತ್ತು EIRL ಗಳ ಮೂಲಕ ಕಾರ್ಯಗತಗೊಳಿಸಲಾಗಿದ್ದು ವಿವರಗಳು ಕೆಳಕಂಡಂತಿರುತ್ತದೆ.

2	**ಪ್ಯಾಕೇಜ್–2** ಬೀದರ್, ಮುದ್ನಾಳ್, ಗುಂಡೆಪಲ್ಲಿ ಇಲ್ಲಿ ಸರ್ಕಾರಿ ಪ್ರಥಮದರ್ಜೆ ಕಾಲೇಜು ನಿರ್ಮಾಣ	ಕೆ.ಎಂ.ವಿ ಪ್ರಾಜೆಕ್ಟ್(ಲಿ)	8008.34	80100.00	500.00	79600.00
3	**ಪ್ಯಾಕೇಜ್–3** ಹಡಲಗೆರೆ, ಕವಿತಾಳ, ತಲಬಾಲ ಇಲ್ಲಿ ಸರ್ಕಾರಿ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜು ನಿರ್ಮಾಣ	ರಾಮಕೃಷ್ಣ ಇನ್‌ಫ್ರಾಸ್ಟ್ರಕ್ಚರ್ (ಲಿ)	8019.35	80100.00	500.00	79600.00
4	ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಬೈರನಾಯಕನಹಳ್ಳಿ ನೆಲಮಂಗಲ(ತಾ)	ಸುರೇಶ	1636.72	16400.00	500.00	15900.00

ಉದಾಹರಣೆಗಾಗಿ ಮೇಲ್ಕಂಡ ಪ್ರಕರಣಗಳನ್ನು ನಮೂದಿಸಿದ್ದು ನೂರಾರು ಪ್ರಕರಣಗಳಲ್ಲಿ ಕಡಿಮೆ ಮೌಲ್ಯದ ಮುದ್ರಾಂಕ ಪಡೆದಿರುವುದರಿಂದ ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ಆರ್ಥಿಕ ನಷ್ಟ ಉಂಟಾಗಿರುತ್ತದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು.

3.15 ಪರಿಶಿಷ್ಟ ವರ್ಗ ಯೋಜನೆಯಡಿ ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು, ಚಿತ್ರಹಳ್ಳಿಯಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆ ಸಂಕೀರ್ಣ ನಿರ್ಮಾಣ ಕಾಮಗಾರಿಯ ಅಂದಾಜು ಪಟ್ಟಿಯನ್ನು ದೋಷಪೂರ್ಣವಾಗಿ ತಯಾರಿಸಿರುವ ಕುರಿತು

ಆಡಳಿತಾತ್ಮಕ ಅನುಮೋದನೆ ಮೊತ್ತ	ರೂ.1350.00 ಲಕ್ಷ
ಸಿವಿಲ್ ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ	ರೂ.1317.17 ಲಕ್ಷ
ಟೆಂಡರ್ ಅನುಮೋದನೆ ಮೊತ್ತ	ರೂ.1224.49 ಲಕ್ಷ
ಟೆಂಡರ್ ಶೇಕಡಾವಾರು	(–) 5.67% (ಎಸ್.ಆರ್. 2015–16)
ಟೆಂಡರ್ ಗುತ್ತಿಗೆದಾರರು	ಮೆ//ಅಪೂರ್ವ ಕನ್‌ಸ್ಟ್ರಕ್ಷನ್ ಕಂ. ತುಮಕೂರು
ಯೋಜನಾ ಸಲಹೆಗಾರರು	ಮೇ//ಚೇತನಾ ಕನ್‌ಸೋರ್ಟಿಯಂ
ಕರಾರು ಒಪ್ಪಂದ ಮಾಡಿಕೊಳ್ಳಲಾದ ದಿನಾಂಕ	23.12.2016
ಕಾಮಗಾರಿ ಆದೇಶ ಸಂಖ್ಯೆ	KREIS/Project(1)CR(2)175/2016-17 dt:06.01.2017
ನಿವೇಶನವನ್ನು ಹಸ್ತಾಂತರಿಸಿದ ದಿನಾಂಕ	24.02.2017
ಕಾಮಗಾರಿ ಪ್ರಾರಂಭ ದಿನಾಂಕ	02.03.2017
ಕಾಮಗಾರಿ ಪೂರ್ಣಗೊಳಿಸಲು ನಿಗಧಿಪಡಿಸಿದ ದಿನಾಂಕ	01.09.2018
ವರ್ಕ್‌ಸ್ಲಿಪ್ ಮತ್ತು EIRL ಒಟ್ಟು ಅನುಮೋದನೆ ಮೊತ್ತ	ರೂ.7659496.00
ಸಪ್ಲಿಮೆಂಟರಿ ಅಗ್ರಿಮೆಂಟ್ ಮಾಡಿಕೊಳ್ಳಲಾದ ದಿನಾಂಕ	29.05.2018
ಕಾಮಗಾರಿ ಪೂರ್ಣಗೊಳಿಸಲು ವಿಸ್ತರಿಸಲಾದ ದಿನಾಂಕ:	30.06.2019

ಟೆಂಡರ್‌ಗಳನ್ನು ಕರೆಯುವ ಕುರಿತು ಪರಿಶೀಲಿಸಿರುವುದಿಲ್ಲ. 23.12.2018 ರಂದು ಗುತ್ತಿಗೆದಾರರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ, ದಿನಾಂಕ: 06.01.2017 ರಂದು ಕಾರ್ಯಾದೇಶವನ್ನು ನೀಡಲಾಗಿದ್ದು, ದಿನಾಂಕ: 24.02.2017 ರಂದು ನಿವೇಶವನ್ನು ಗುತ್ತಿಗೆದಾರರಿಗೆ ಹಸ್ತಾಂತರಿಸಲಾಗಿರುತ್ತದೆ ಮತ್ತು ದಿನಾಂಕ: 02.03.2017 ರಂದು ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸಿರುತ್ತಾರೆ. ಅಂದರೆ ಮಾನ್ಯ ಸಮಾಜ ಕಲ್ಯಾಣ ಸಚಿವರು ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿಯ ಮೂಲ ವಿನ್ಯಾಸದಲ್ಲಿ ಬದಲಾವಣೆಗಳನ್ನು ಸೂಚಿಸಲಾದ ದಿನಾಂಕದಂದು ಗುತ್ತಿಗೆದಾರರೊಂದಿಗೆ ಇನ್ನೂ ಯಾವುದೇ ಒಪ್ಪಂದವನ್ನು ಮಾಡಿಕೊಂಡಿರಲಿಲ್ಲ, ಕಾಮಗಾರಿ ಆದೇಶವನ್ನಾಗಲಿ ಹೊರಡಿಸಲಾಗಿರಲಿಲ್ಲ. ಆದಕಾರಣ ಮೂಲ ಟೆಂಡರ್‌ನಲ್ಲಿ ಅಗಾಧವಾದ ಬದಲಾವಣೆಗಳುಂಟುಗುವ ಸಂದರ್ಭವುಂಟಾಗಿರುವುದನ್ನು ಪರಿಗಣಿಸಿ ಬದಲಾವಣೆಗೊಂಡ ಎಲ್ಲಾ ಕಾಮಗಾರಿಗಳನ್ನು ಕೂಡಲೇ ಟೆಂಡರ್‌ನ್ನು ವಜಾಗೊಳಿಸಿ ಚಾಲ್ತಿಯಲ್ಲಿದ್ದ ಷೆಡ್ಯೂಲ್ ದರಗಳನ್ನು ಆಧರಿಸಿ (ಮೂಲ ಅಂದಾಜು ಪಟ್ಟಿಯನ್ನು 2015-16 ರ ಎಸ್.ಆರ್. ನಂತೆ ತಯಾರಿಸಲಾಗಿದ್ದು ವರ್ಕ್‌ಸ್ಲಿಪ್ EIRL ಗಳನ್ನು 2016-17 ರ ಎಸ್.ಆರ್. ನಂತೆ ತಯಾರಿಸಿರುವುದರಿಂದ) ಪರಿಷ್ಕೃತ ವಿನ್ಯಾಸದಂತೆ ಪರಿಷ್ಕೃತ ಅಂದಾಜು ಪಟ್ಟಿಯನ್ನು ತಯಾರಿಸಿ ಆ ಪ್ರಕಾರವಾಗಿ ಹೊಸದಾಗಿ ಟೆಂಡರ್‌ಗಳನ್ನು ಕರೆಯಬಹುದಾಗಿತ್ತು. ಇದರಿಂದ ನೈಜವಾದ ಕಾಮಗಾರಿ ಮೌಲ್ಯಕ್ಕೆ ಸರ್ಧಾತ್ಮಕವಾದ ಟೆಂಡರ್‌ಗಳನ್ನು ನಿರೀಕ್ಷಿಸಬಹುದಾಗಿತ್ತು. ಆದರೆ ಅವುಗಳನ್ನು ವರ್ಕ್‌ಸ್ಲಿಪ್/EIRL ಮೂಲಕ ಕಾರ್ಯಗತಗೊಳಿಸಲು ಕೈಗೊಂಡ ಕ್ರಮವು ಸಮಂಜಸವಾಗಿರುವುದಿಲ್ಲ. ಅಲ್ಲದೆ ಕಾಮಗಾರಿಯ ಮೂಲ ಅಂದಾಜು ಪಟ್ಟಿಯನ್ನು 2015-16 ಷೆಡ್ಯೂಲ್ ದರಗಳಂತೆ ತಯಾರಿಸಲಾಗಿದ್ದು ಆ ಪ್ರಕಾರವಾಗಿಯೇ ಟೆಂಡರ್ ಪರ್ಸೆಂಟೇಜನ್ನು (-) 5.67% ನಿರ್ಧರಿಸಲಾಗಿದೆ. ವರ್ಕ್‌ಸ್ಲಿಪ್/EIRL ಐಟಂಗಳಿಗೆ ದರ ಪರಿಗಣಿಸುವಾಗ 2016-17 ರ ಸಾಲಿನ ಷೆಡ್ಯೂಲ್ ದರಗಳನ್ನು ಆಧರಿಸಲಾಗಿದ್ದು, ಆದರೆ 2015-16 ರ ಸಾಲಿನ ಷೆಡ್ಯೂಲ್ ದರಗಳ ಮೇಲೆ ಲೆಕ್ಕ ಹಾಕಲಾದ ಟೆಂಡರ್ ಪರ್ಸೆಂಟೇಜನ್ನು ಪರಿಗಣಿಸಲಾಗಿರುತ್ತದೆ. ಇದು ಅವೈಜ್ಞಾನಿಕವಾಗಿದ್ದು ನಿಯಮಕ್ಕೆ ವ್ಯತಿರಿಕ್ತವಾಗಿರುತ್ತದೆ. ಕಾಮಗಾರಿ ಆದೇಶವನ್ನು ನೀಡುವ ಕಾಲಕ್ಕೆ ಷೆಡ್ಯೂಲ್ ದರಗಳು ಬದಲಾಗಿದ್ದಲ್ಲಿ ಬದಲಾದ ದರಗಳಂತೆ ಟೆಂಡರ್ ಪ್ರೀಮಿಯಂ ನಿರ್ಧರಿಸುವುದು ಸರಿಯಾದ ಕ್ರಮವಾಗಿರುತ್ತದೆ. ಪರಿಷ್ಕೃತ ವರ್ಕ್‌ಸ್ಲಿಪ್/ EIRL ಅನುಮೋದನೆಗೆ ಸಲ್ಲಿಸುವ ಪೂರ್ವದಲ್ಲಿ ಈ ಬಗ್ಗೆ ಸೂಕ್ತ ಕ್ರಮ ವಹಿಸಬಹುದಾಗಿದೆ.

4. ಗುತ್ತಿಗೆದಾರರ ಮೂಲ ದರ ಬಿಲ್ಲನ್ನು ಪರಿಶೀಲಿಸುವ ಹಂತದಲ್ಲಿ ಟೆಂಡರ್ ಐಟಂಗಳಿಗೆ ಗುತ್ತಿಗೆದಾರರು ನಮೂದಿಸಿ ದರಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸೂಕ್ತವಾಗಿ ನಿರ್ಧಾರವನ್ನು ಕೈಗೊಂಡಿರುವುದು ಕಂಡುಬರುತ್ತದೆ. ಇದಕ್ಕೆ ಉದಾಹರಣೆಯಾಗಿ ಕೆಳಕಂಡ ಐಟಂಗಳಿಗೆ ಮೂಲ ಅಂದಾಜಿನಲ್ಲಿದ್ದ ದರ ಹಾಗು ಗುತ್ತಿಗೆದಾರರು ನಮೂದಿಸಿದ ದರಗಳನ್ನು ಹೋಲಿಕೆ ಮಾಡಬಹುದಾಗಿದೆ.

ಟೆಂಡರ್ ಐಟಂ ಸಂಖ್ಯೆ	ಷೆಡ್ಯೂಲ್ ಐಟಂ	ಅಂದಾಜು ಪರಿಮಾಣ	ಅಂದಾಜು ದರ (ರೂ.ಗಳಲ್ಲಿ)	ಮೊತ್ತ (ರೂ.ಗಳಲ್ಲಿ)	ಟೆಂಡರ್ ದರ (ರೂ.ಗಳಲ್ಲಿ)	ಟೆಂಡರ್ ಮೊತ್ತ (ರೂ.ಗಳಲ್ಲಿ)	ಶೇಕಡಾ ವ್ಯತ್ಯಾಸ	ಕೆಲಸದ ಸಂಕ್ಷಿಪ್ತ ವಿವರ
2	208	967 M3	849.75	821708.25	0.10	96.70	(-100%)	ಮೆದು ಬಂಡೆಯಲ್ಲಿ ಮಣ್ಣಿನ ಕೆಲಸ

ದಿನಾಂಕ:29-05-2018 ರಂದು ಹೆಚ್ಚುವರಿ ಮೊತ್ತ ರೂ.76,59,496.00 ಕ್ಕೆ ಪೂರಕ ಕರಾ.. ಮಾಡಿಕೊಳ್ಳಲಾಗಿದ್ದು, ವರ್ಕ್‌ಸ್ಲಿಪ್ ಮತ್ತು EIRL ವಿವರ ಕೆಳಕಂಡಂತಿರುತ್ತದೆ.

ವರ್ಕ್‌ಸ್ಲಿಪ್ ಮೊತ್ತ	ರೂ. 13,956,918.76
EIRL ಮೊತ್ತ	ರೂ. 150,03,091.24
ಒಟ್ಟು ಅಧಿಕ	289,60,010.00
ಉಳಿತಾಯ	213,00,513.95
ನಿವ್ವಳ ಹೆಚ್ಚುವರಿ ಮೊತ್ತ	76,59,496.00

ಪರಿಷ್ಕೃತ ಕಾಮಗಾರಿಯ ಮೊತ್ತ ರೂ.1319.08 ಲಕ್ಷ ಆಗಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಲು ದಿನಾಂಕ: 30.06.2019 ರ ವರೆಗೆ ಕಾಲಾವಧಿಯನ್ನು ವಿಸ್ತರಿಸಲಾಗಿರುತ್ತದೆ.

ದಿನಾಂಕ: 31.10.2019 ರ ಅಂತ್ಯದವರೆವಿಗೂ ಕಾಮಗಾರಿ ಪೂರ್ಣಗೊಂಡು ಕಟ್ಟಡಗಳನ್ನು ಹಸ್ತಾಂತರಿಸಲಾಗಿರುವುದಿಲ್ಲ. ಮೇಲ್ಕಂಡಂತೆ ಅನುಮೋದಿಸಲ್ಪಟ್ಟ ವರ್ಕ್‌ಸ್ಲಿಪ್, EIRL ಸಹ ಬದಲಾಣೆಗೊಂಡಿದ್ದು, ಪರಿಷ್ಕೃತ ವರ್ಕ್‌ಸ್ಲಿಪ್ EIRL ಸಿದ್ಧಪಡಿಸಲಾಗಿದ್ದು, ಅನುಮೋದನೆ ಬಾಕಿಯಿರುತ್ತದೆ. ವಿವರ ಕೆಳಕಂಡಂತಿರುತ್ತದೆ.

ಪರಿಷ್ಕೃತ ವರ್ಕ್‌ಸ್ಲಿಪ್ ಮೊತ್ತ	ರೂ. 147.69 ಲಕ್ಷ
ಪರಿಷ್ಕೃತ EIRL ಮೊತ್ತ	ರೂ. 499.03 ಲಕ್ಷ
ಒಟ್ಟು ಮೊತ್ತ	673.72 ಲಕ್ಷ
ಮೂಲ ಟೆಂಡರ್‌ನಲ್ಲಿನ ಉಳಿತಾಯ	339.26 ಲಕ್ಷ
ನಿವ್ವಳ ಹೆಚ್ಚುವರಿ	334.46 ಲಕ್ಷ

ಆ ಪ್ರಕಾರವಾಗಿ ಪರಿಷ್ಕೃತ ಗುತ್ತಿಗೆ ಮೊತ್ತ ರೂ.1576.95 ಲಕ್ಷಕ್ಕೆ ಏರಿಕೆಯಾಗಲಿದ್ದು, ಮೂಲ ಟೆಂಡರ್ ಮೊತ್ತ ರೂ.1242.49 ಲಕ್ಷಕ್ಕೆ ಹೋಲಿಸಿದಾಗ ಶೇಕಡ 26.92 ರಷ್ಟು ಹೆಚ್ಚುವರಿಯಾಗುತ್ತದೆ. ಮೂಲ ಟೆಂಡರ್ ಐಟಂಗಳಲ್ಲಿ ರೂ.339.26 ಲಕ್ಷ ಉಳಿತಾಯವಾಗಿದ್ದು, ರೂ.903.23 ಲಕ್ಷ ಮೊತ್ತ ಮಾತ್ರ ಮೂಲ ಟೆಂಡರ್‌ನ ಭಾಗವಾಗಿದ್ದು, ಉಳಿದ ರೂ.673.72 ಲಕ್ಷ ಮೊತ್ತ ಬದಲಾವಣೆಯ ಭಾಗವಾಗಿದ್ದು, ಇದು ಶೇಕಡ 42.72 ರಷ್ಟು ಆಗುತ್ತದೆ. ಇದರಿಂದಾಗಿ ಈ ಮುಂದಿನಂತೆ ವಿಶ್ಲೇಷಿಸಲಾಗಿದೆ.

1. ಕಾಮಗಾರಿಯ ಮೂಲ ಅಂದಾಜು ಪಟ್ಟಿಯು ದೋಷಪೂರಿತವಾಗಿದ್ದು, ವಾಸ್ತವ ಅಂಶಗಳನ್ನು ಪರಿಗಣಿಸದೆ ಸಿದ್ಧಪಡಿಸಲಾಗಿದೆ.
2. ಮಾನ್ಯ ಸಮಾಜ ಕಲ್ಯಾಣ ಸಚಿವರ ಸೂಚನೆಗಳ ಮೇರೆಗೆ ಕಾಮಗಾರಿಯ ಮೂಲ ಸ್ವರೂಪ ಮತ್ತು ವಿನ್ಯಾಸದಲ್ಲಿ ಬದಲಾವಣೆಯಾಗಿದ್ದು, ರೂ.76.59 ಲಕ್ಷ ಮೊತ್ತಕ್ಕೆ ಪೂರಕ ಕರಾರು ಮಾಡಿಕೊಳ್ಳಲಾಗಿದ್ದು, ಆ ಪ್ರಕಾರ ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳ್ಳಬೇಕಿತ್ತು. ಆದರೆ ಮೇಲೆ ಹೇಳಲಾದಂತೆ ವರ್ಕ್‌ಸ್ಲಿಪ್/EIRL ನಲ್ಲಿ ಮತ್ತೆ ವ್ಯತ್ಯಾಸವಾಗಿರುತ್ತದೆ. ಮಾನ್ಯ ಸಚಿವರ ಸೂಚನೆಯ ಮೇರೆಗೆ ಬದಲಾವಣೆಯಾದಂತೆ ತಯಾರಿಸಲಾದ ವರ್ಕ್‌ಸ್ಲಿಪ್/EIRL ಪುನಃ ಬದಲಾವಣೆಗೊಳ್ಳಲು ಸಮಂಜಸ ಕಾರಣಗಳಾಗಿರುವುದಿಲ್ಲ.
3. ಮಾನ್ಯ ಸಮಾಜ ಕಲ್ಯಾಣ ಸಚಿವರು ದಿನಾಂಕ: 20.11.2016 ರಂದು ಕಾಮಗಾರಿಯು ನಡೆಯುತ್ತಿದ್ದ ಸ್ಥಳಕ್ಕೆ ಭೇಟಿ ನೀಡಿ ಮೇಲ್ಕಂಡ ಬದಲಾವಣೆಗಳನ್ನು ಸೂಚಿಸಿದ್ದರೂ, ಬದಲಾದ ಅವಶ್ಯಕತೆಗಳಿಗನುಗುಣವಾಗಿ ಪರಿಷ್ಕೃತ ಅಂದಾಜು ಪಟ್ಟಿಯನ್ನು ತಯಾರಿಸಿ ಹೊಸದಾಗಿ

112

ಪರಿಶೀಲಿಸದಿರುವುದು ಲೋಪವಾಗಿರುತ್ತದೆ. ಇಂತಹ ಪ್ರಕರಣಗಳು ಮರುಕಳಿಸದಂತೆ ಸೂಕ್ತ ನಿರ್ದೇಶನ ನೀಡುವುದು ಅಗತ್ಯವಿದೆ.

3.16 **ನ್ಯಾಯಾಲಯ/ಲೋಕಾಯುಕ್ತ ಸಂಸ್ಥೆಯಲ್ಲಿ ಟೆಂಡರ್ ಅಕ್ರಮಗಳಿಗೆ ದಾಖಲಾಗಿರುವ ಕಾಮಗಾರಿಗಳ ವಿವರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸದಿರುವುದು:**

ಸಂಘದಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಕೈಗೆತ್ತಿಗೊಳ್ಳಲಾದ ವಿವಿಧ ಕಟ್ಟಡ ನಿರ್ಮಾಣ ಮಾಡಲು ಟೆಂಡರ್ ಪ್ರಕ್ರಿಯೆ ಮೂಲಕ ಕೈಗೆತ್ತಿಗೊಂಡ ಕಾಮಗಾರಿಗಳ ಪೈಕಿ ಯಾವುದಾದರೂ ಕಾಮಗಾರಿಗಳ ಸಂಬಂಧ ನ್ಯಾಯಾಲಯ ಅಥವಾ ಲೋಕಾಯುಕ್ತ ಅಥವಾ ಎ.ಸಿ.ಬಿ. ಸಂಸ್ಥೆಗಳಲ್ಲಿ ಟೆಂಡರ್ ಅಕ್ರಮಗಳ ಕುರಿತು ದಾಖಲಾಗಿರುವ ಪ್ರಕರಣಗಳ ವಿವರಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸುವಂತೆ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 7/2019 ದಿನಾಂಕ: 11.09.2019 ರಲ್ಲಿ ಕೋರಲಾಗಿದ್ದು, ಸದರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರಕ್ಕೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಈ ಕೆಳಕಂಡ ಕಾಮಗಾರಿಗಳ ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಇರುವುದಾಗಿ ವಿವರಗಳನ್ನು ನೀಡಲಾಗಿದೆ.

ಕ್ರ ಸಂ.	ಕಾಮಗಾರಿಯ ವಿವರ	ಗುತ್ತಿಗೆ ಮೊತ್ತ (ರೂ. ಲಕ್ಷಗಳಲ್ಲಿ)	ಗುತ್ತಿಗೆದಾರರ ವಿವರ	ನ್ಯಾಯಾಲಯ ಅಥವಾ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಿಸಿರುವ ಪ್ರಕರಣದ ಸಂಖ್ಯೆ ಮತ್ತು ದಿನಾಂಕ	ಪ್ರಸ್ತುತ ಪ್ರಕರಣದ ಹಂತ
1	ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕು ಗೇರುಪುರ ಗ್ರಾಮದಲ್ಲಿ ಶ್ರೀಮತಿ. ಇಂದಿರಾ ಗಾಂಧಿ ವಸತಿ ಶಾಲೆ ಕಾಮಗಾರಿ	1729.68	ಮೆ॥ ಕೆ.ಎಂ.ವಿ. ಪ್ರಾಜೆಕ್ಟ್ಸ್ ಲಿ.,	WP No. 10247-18	ಮರು ವಿಚಾರಣಾ ದಿನಾಂಕ: 10.10.2019 ರಂದು ನಿಗಧಿಪಡಿಸಿರುತ್ತದೆ.
2	ಉತ್ತರ ಕನ್ನಡ ಜಿಲ್ಲೆ ಮುಂಡಗೋಡು ತಾಲ್ಲೂಕು ಕರಗಿನಕೊಪ್ಪ ಗ್ರಾಮದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಪದವಿ ಪೂರ್ವ ಕಾಲೇಜಿಗೆ ಮೇಲ್ದರ್ಜೆಗೇರಿಸುವ ಕಾಮಗಾರಿ	1254.56	ಮೆ॥ ಸಿಗ್ಮಾ ಪ್ರಾಜೆಕ್ಟ್	WP No. 10247-18	ಮರು ವಿಚಾರಣಾ ದಿನಾಂಕ: 10.10.2019 ರಂದು ನಿಗಧಿಪಡಿಸಿರುತ್ತದೆ.

ದಿನಾಂಕ: 16-02-2018 ರಂದ ನಡೆದ ಟೆಂಡರ್ ಅನುಮೋದನಾ ಸಮಿತಿ ಸಭೆಯಲ್ಲಿ ಒಟ್ಟು 54 ಕಾಮಗಾರಿಗಳಿಗೆ ಟೆಂಡರ್ ಅನುಮೋದನೆ ನೀಡಿದ್ದು, ಅದರಲ್ಲಿ ಶಿವಮೊಗ್ಗ ಜಿಲ್ಲೆ ಹೊಸನಗರ ತಾಲೂಕು ಗೇರುಪುರ ಗ್ರಾಮದಲ್ಲಿ ಇಂದಿರಾಗಾಂಧಿ ವಸತಿ ಶಾಲೆ ನಿರ್ಮಾಣ ಮಾಡುವುದು ಹಾಗೂ ಉತ್ತರ ಕನ್ನಡ

3	2.10	406 M3	1220.55	495543.30	0.10	40.60	(–100%)	ಗಡಸು ಬಂಡೆಯಲ್ಲಿ ಮಣ್ಣಿನ ಕೆಲಸ
8	4.6	155 M3	5638.22	873924.10	0.10	15.50	(–100%)	ಸಿಸಿ 1:2:4
65	10.1	451 M3	798.25	360010.75	0.10	45.10	(–100%)	ಯಲಹಂಕ ಟೈಲ್ಸ್
67	ಡಿಆರ್	1128 M3	136.08	153566.00	0.10	112.85	(–100%)	ಮಣ್ಣಿನ ಕೆಲಸ

ಮೇಲೆ ತಿಳಿಸಿದಂತೆ ಟೆಂಡರ್ ಐಟಂ ಸಂಖ್ಯೆ: 2, 3, 8, 65 ಮತ್ತು 67 ಗಳಿಗೆ ಟೆಂಡರ್‌ದಾರರು ಕೇವಲ ರೂ.0.10 ದರವನ್ನು ಸಾಂಕೇತಿಕವಾಗಿ ನಮೂದಿಸಿರುತ್ತಾರೆ. ಅಂದಾಜು ಪಟ್ಟಿಯಂತೆ ಈ ಐಟಂವಾರು ಕೆಲಸಗಳ ಒಟ್ಟು ಮೊತ್ತ ರೂ.27,04,753.00 ಆಗಲಿದ್ದು, ಇದಕ್ಕೆದುರಾಗಿ ಗುತ್ತಿಗೆದಾರರು ಕೇವಲ ರೂ.310.89 ಮೊತ್ತವನ್ನು ನಮೂದಿಸಿ ಟೆಂಡರ್ ಸಲ್ಲಿಸಿರುತ್ತಾರೆ. ವ್ಯತ್ಯಾಸ ಶೇಕಡ 100 ರಷ್ಟಾಗುತ್ತದೆ. ಅಂದರೆ ಈ ಕೆಲಸಗಳನ್ನು ಮುಫತ್ತಾಗಿ ಮಾಡಿಕೊಡಲು ಟೆಂಡರ್‌ದಾರರು ಪರೋಕ್ಷವಾಗಿ ಒಪ್ಪಿಕೊಂಡಿರುವುದಾಗಿ ತಿಳಿದು ಬರುತ್ತದೆ.

Unbalance ಐಟಂಗಳಿಗೆ ಹೆಚ್ಚುವರಿ ಬ್ಯಾಂಕ್ ಗ್ಯಾರಂಟಿಯನ್ನು ಪಡೆದುಕೊಂಡಿರುವುದನ್ನು ಹೊರತುಪಡಿಸಿ ಟೆಂಡರ್ ಪರಿಶೀಲನಾ ಸಮಯದಲ್ಲಿ ಅಸಮಂಜಸವಾದ/ಅವಾಸ್ತವ ದರಗಳ ಕುರಿತು ಪರಿಶೀಲಿಸಿರುವುದಿಲ್ಲ. ವಾಸ್ತವಾಗಿ ನಿರ್ವಹಿಸಲಾದ ಪ್ರಮಾಣ ಮತ್ತು ದರದ ಮೊತ್ತ ಕೆಳಕಂಡಂತಿದೆ:

ಟೆಂಡರ್ ಐಟಂ ನಂ.	ಮೂಲ ಟೆಂಡರ್‌ನ ಪರಿಮಾಣ	ಅಂದಾಜಿನಲ್ಲಿರುವಂತೆ ಮೊತ್ತ (ರೂ.ಗಳಲ್ಲಿ)	ಕಾರ್ಯಗತಗೊಂಡ ಪರಿಮಾಣ	ಮೊತ್ತ (ರೂ.ಗಳಲ್ಲಿ)
2	967 M3	821708	249.66	24.97
3	406 M3	495543	–	–
8	155 M3	873924	153.93	15.39
65	451 M3	360010	–	–.
67	1128 M3	153566	–	–

ಟೆಂಡರ್ ಐಟಂ ನಂ.3, 65 ಮತ್ತು 67 ರ ಒಟ್ಟು ಅಂದಾಜು ಮೌಲ್ಯ ರೂ.10,09,119.00 ಆಗಿದ್ದು ಈ ಐಟಂಗಳು ಕಾರ್ಯಗತವಾಗಿರುವುದಿಲ್ಲ. ಅಂದರೆ ಅನವಶ್ಯಕವಾಗಿ ಈ ಐಟಂಗಳನ್ನು ಅಂದಾಜು ಪಟ್ಟಿಯಲ್ಲಿ ಸೇರಿಸಿಕೊಂಡು ದೋಷಯುಕ್ತ ಅಂದಾಜು ಪಟ್ಟಿ ಸಿದ್ಧಪಡಿಸಲಾಗಿದೆ. ಟೆಂಡರ್‌ದಾರರು ಇದರ ಲಾಭವನ್ನು ಪಡೆದುಕೊಂಡು ಅವೈಜ್ಞಾನಿವಾಗಿ ದರಗಳನ್ನು ನಮೂದಿಸಲು ಅವಕಾಶ ಕಲ್ಪಿಸಿದಂತಾಗಿದೆ. ಇದರಿಂದಾಗಿ ನೈಜ ಟೆಂಡರ್ ದರದ ಸ್ಪರ್ಧಾತ್ಮಕತೆ ಕಂಡುಕೊಳ್ಳುವಲ್ಲಿ ವಿಫಲರಾಗಿ ಗುತ್ತಿಗೆದಾರರಿಗೆ ಲಾಭವನ್ನು ಮಾಡಿಕೊಟ್ಟಂತಾಗಿರುತ್ತದೆ. ಟೆಂಡರ್ ಪರಿಶೀಲನಾ ಹಂತದಲ್ಲಿ ಈ ಕುರಿತು ಕೂಲಂಕಷವಾಗಿ

ಗುತ್ತಿಗೆದಾರರೊಂದಿಗೆ ಕರಾರು ಮಾಡಿಕೊಂಡು ಕಾರ್ಯಾದೇಶ ನೀಡಲಾಗಿದೆ. ನಂತರ ಗುತ್ತಿಗೆದಾರರಿಗೆ ಶೇಕರಣಾ ಮುಂಗಡವನ್ನು ಪಾವತಿಸಲಾಗಿದೆ.

ಕ್ರ ಸಂ.	ಕಾಮಗಾರಿ ಹೆಸರು	ಅನುಮೋದಿತ ಟೆಂಡರ್ ಮೊತ್ತ	ಶೇಕಡಾ 5 ರಷ್ಟು ಶೇಕರಣಾ ಮುಂಗಡ ಪಾವತಿಸಿರುವುದು	ಮುಂಗಡ ಪಾವತಿಸಿದ ದಿನಾಂಕ
1	ಹಾವೇರಿ ಜಿಲ್ಲೆಯ ದೇವಗಿರಿ, ಮಲ್ಲಾಡಿಹಳ್ಳಿ ಚಿತ್ರದುರ್ಗ ಜಿಲ್ಲೆ, ಕೋಲಾರ ಜಿಲ್ಲೆಯ ದೇವರಾಯ ಸಮುದ್ರ ಚಾಮರಾಜನಗರ ಜಿಲ್ಲೆಯ ಯಡಾಪುರ ಇಲ್ಲಿ ಸರ್ಕಾರಿ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜು ನಿರ್ಮಾಣ	10691.18 ಲಕ್ಷಗಳು	4,00,00,000.00	22.12.2018

ಕಾಮಗಾರಿ ನಡೆಸಬೇಕಾದ ಸ್ಥಳದ ಲಭ್ಯತೆ ಇಲ್ಲದಿದ್ದರೂ ಶೇಕರಣಾ ಮುಂಗಡ ನೀಡಿರುವ ಕ್ರಮ ಸರಿಯಲ್ಲ. ಇದರಿಂದಾಗಿ ಸರ್ಕಾರದ ಹಣ ಅನಗತ್ಯವಾಗಿ ಗುತ್ತಿಗೆದಾರರ ಬಳಿ ಉಳಿದಿರುವುದರಿಂದ, ಗುತ್ತಿಗೆದಾರರಿಗೆ ಪರೋಕ್ಷವಾಗಿ ಆರ್ಥಿಕ ಲಾಭ ಮಾಡಿಕೊಟ್ಟಂತಾಗಿದೆ. ಸದರಿ ಮೊತ್ತ ಸಂಘದ ಬ್ಯಾಂಕ್ ಖಾತೆಯಲ್ಲಿ ಉಳಿದಿದ್ದರೆ ಬಡ್ಡಿಯ ರೂಪದಲ್ಲಿ ಆದಾಯ ಲಭ್ಯವಾಗುತ್ತಿತ್ತು. (ಪ್ರಸ್ತುತ ಚಾಲ್ತಿಯಲ್ಲಿರುವ ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆಗೆ ನೀಡಲಾಗುತ್ತಿರುವ ವಾರ್ಷಿಕ ಶೇಕಡ 4.5 ರಂತೆ ಬಡ್ಡಿ ದರದಂತೆ ಅಂದಾಜಿಸಿದಲ್ಲಿ ಒಂದು ವರ್ಷಕ್ಕೆ ರೂ.18.00 ಲಕ್ಷದಷ್ಟು ಬಡ್ಡಿ ರೂಪದ ಆದಾಯ ಬರಬಹುದಾಗಿದ್ದ ಅವಕಾಶ ತಪ್ಪಿಹೋಗಿದೆ) ಆದರೆ ವಿವೇಚನೆ ಬಳಸದೇ ಅನಗತ್ಯವಾಗಿ ಗುತ್ತಿಗೆದಾರರಿಗೆ ಶೇಕರಣಾ ಮುಂಗಡವನ್ನು ನೀಡಲಾಗಿದೆ. ಟೆಂಡರ್ ನಿಬಂಧನೆಗಳಂತೆ ಅದನ್ನು ವಸೂಲಿ ಮಾಡಲು ಕ್ರಮ ವಹಿಸಿರುವುದಿಲ್ಲ. ಗುತ್ತಿಗೆದಾರರು ಶೇಕರಣಾ ಮುಂಗಡದ ಮೊತ್ತವನ್ನು ಯಾವ ಉದ್ದೇಶಕ್ಕೆ ಬಳಸಿದ್ದಾರೆ ಎಂದು ಸಂಘದ ಅಧಿಕಾರಿಗಳು ಮೇಲ್ವಿಚಾರಣೆ ಮಾಡಿರುವುದಿಲ್ಲ. ಆದ್ದರಿಂದ ಈ ನಷ್ಟಕ್ಕೆ ಕಾರಣರಾದವರ ವಿರುದ್ಧ ಸೂಕ್ತ ಕ್ರಮ ಅವಶ್ಯಕವಾಗಿದೆ.

4.2 <u>ಶೇಕರಣಾ ಮುಂಗಡದ ಮೊತ್ತಗಳನ್ನು ಗುತ್ತಿಗೆದಾರರಿಂದ ವಸೂಲಿ ಮಾಡುತ್ತಿರುವ ಪ್ರಕರಣಗಳಲ್ಲಿ</u> ಅತ್ಯಂತ ವಿಳಂಬವಾಗಿ ವಸೂಲಿ ಮಾಡುತ್ತಿರುವಬಗ್ಗೆ:

ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಕೈಗೊಂಡಿರುವ ಕಟ್ಟಡ ನಿರ್ಮಾಣ ಕಾಮಗಾರಿಗಳಲ್ಲಿ ಟೆಂಡರ್ ನಿಬಂಧನೆ 42 ಹಾಗೂ 42.01 ರಂತೆ ಗುತ್ತಿಗೆದಾರರಿಗೆ ಅನುಮೋದಿತ ಟೆಂಡರ್ ಮೊತ್ತದ ಶೇಕಡಾ 5 ರಷ್ಟು ಮೊತ್ತವನ್ನು ಶೇಕರಣಾ ಮುಂಗಡ (Mobilization Advance) ವನ್ನಾಗಿ ಪಾವತಿಸಲಾಗಿದೆ. ಮುಂಗಡ ಪಾವತಿಸುವಾಗ ಕೆಳಕಂಡ ನಿಬಂಧನೆಯನ್ನು ವಿಧಿಸಲಾಗಿದೆ.

"Mobilization Advance deductions shall commence in the next interim payment certificate following that in which the total of all such payments to the contractor has reached not less than 15% of the contract price or 3 months from the date of payment of mobilization advance which ever period concludes earlier"

ಆದರೆ ವಾಸ್ತವಿಕವಾಗಿ ಮೇಲ್ಕಂಡ ನಿಬಂಧನೆಯಂತೆ ಕ್ರಮ ಕೈಗೊಂಡಿರುವುದಿಲ್ಲ. ಕೆಲವು ಪ್ರಕರಣಗಳಲ್ಲಿ ಮುಂಗಡ ನೀಡಿ ಒಂದು ವರ್ಷವಾದರೂ ವಸೂಲಿ ಪ್ರಾರಂಭವಾಗಿರುವುದಿಲ್ಲ. ಸರ್ಕಾರದ ಹಣ ಅನಗತ್ಯವಾಗಿ ಗುತ್ತಿಗೆದಾರರ ಬಳಿ ಉಳಿಯುವಂತಾಗಿದೆ. ಕೆಲವು ಉದಾಹರಣೆಗಳು ಕೆಳಕಂಡಂತಿದೆ.

ಜಿಲ್ಲೆ ಮಂಡಗೋಡು ತಾಲೂಕು ಕರಗಿನಕೊಪ್ಪ ಗ್ರಾಮದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಪದವಿ ಪೂರ್ವ ಕಾಲೇಜನ್ನಾಗಿ ಮೇಲ್ದರ್ಜೆಗೇರಿಸುವ ಕಾಮಗಾರಿಗಳು ಸೇರಿರುತ್ತವೆ.

ಮೇಲ್ಕಂಡ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಮತ್ತು ಟೆಂಡರ್ ಅನುಮೋದನೆ ಬಗ್ಗೆ ಮೆ: ಮೈಕಾನ್ ಕನ್‌ಸ್ಟ್ರಕ್ಷನ್ ಲಿಮಿಟೆಡ್ ಸಂಸ್ಥೆಯು ಕರ್ನಾಟಕ ಉಚ್ಚ ನ್ಯಾಯಾಲದಲ್ಲಿ ರಿಟ್ ಪಿಟಿಷನ್ ಸಂಖ್ಯೆ 10247/2018 ದಾಖಲಿಸಿದ್ದು, ನ್ಯಾಯಾಲಯವು ದಿನಾಂಕ: 13.03.2018 ರಲ್ಲಿ ಟೆಂಡರ್‌ಗಳಲ್ಲಿ ಯಥಾಸ್ಥಿತಿ ಕಾಪಾಡುವಂತೆ ಮಧ್ಯಂತರ ತಡೆ ಆಜ್ಞೆ ನೀಡಿದ್ದು ಈವರೆಗೆ ಇತ್ಯರ್ಥಗೊಂಡಿರುವುದಿಲ್ಲ. ಸದರಿ ಪ್ರಕರಣಗಳ ಮರು ವಿಚಾರಣಾ ದಿನಾಂಕವನ್ನು 10.10.2019 ರಂದು ನ್ಯಾಯಾಲಯವು ನಿಗಧಿಪಡಿಸಿರುವುದಾಗಿ ತಿಳಿಸಲಾಗಿದೆ.

ಕರಗಿನಕೊಪ್ಪ ಗ್ರಾಮದಲ್ಲಿ ರೂ.1150.00 ಲಕ್ಷಗಳ ಅಂದಾಜು ಮೊತ್ತದ ಮೊರಾರ್ಜಿ ವಸತಿ ಶಾಲೆ ಮೇಲ್ದರ್ಜೆಗೇರಿಸುವ ಕಾಮಗಾರಿಯಲ್ಲಿ 5 ಜನ ಗುತ್ತಿಗೆದಾರರು ಭಾಗವಹಿಸಿದ್ದು ಈ ಕಾಮಗಾರಿಯ ತಾಂತ್ರಿಕ ಮೌಲ್ಯ ಮಾಪನದಲ್ಲಿ ಮೆ: ಮೈಕಾನ್ ಕನ್‌ಸ್ಟ್ರಕ್ಷನ್ (ಲಿ) ರವರು ಬಿ.ಬಿ.ಎಂ. ಪರಿಮಾಣ ನಮೂದಿಸಿಲ್ಲದ ಕಾರಣ ತಿರಸ್ಕರಿಸಲಾಗಿದೆ. ಮೆ: ಅಪೂರ್ವ ಕನ್‌ಸ್ಟ್ರಕ್ಷನ್ ಸಂಸ್ಥೆಯು ಲೈನ್ ಆಫ್ ಕ್ರೆಡಿಟ್ ಸಲ್ಲಿಸಿಲ್ಲವೆಂದೂ, ಶ್ರೀ ಶಿವಪ್ರಸಾದ್ ಗುತ್ತಿಗೆದಾರರು ಇದೇ ರೀತಿಯ ಕೆಲಸವನ್ನು ನಿರ್ವಹಿಸಿರುವ ಬಗ್ಗೆ ಕಾಮಗಾರಿ ದೃಢೀಕರಣ ಪತ್ರವನ್ನು ಸಲ್ಲಿಸಿರುವುದಿಲ್ಲವೆಂದು ತಿರಸ್ಕರಿಸಲಾಗಿದೆ. ಉಳಿದಂತೆ ತಾಂತ್ರಿಕ ಮೌಲ್ಯಮಾಪನದಲ್ಲಿ ಅರ್ಹರಾಗಿರುವ ಮೆ: ಸಿಗ್ಮ ಪ್ರಾಜೆಕ್ಟ್ ಹಾಗೂ ಶ್ರೀ ಪಿ. ಗಿರೀಶ್ ಗುತ್ತಿದಾರರ ಆರ್ಥಿಕ ಬಿಡ್ ಮೌಲ್ಯ ಮಾಪನದಲ್ಲಿ ಮೆ: ಸಿಗ್ಮ ಪ್ರಾಜೆಕ್ಟ್ ರವರು ಕನಿಷ್ಠ ಬಿಡ್ ಸಲ್ಲಿಸಿರುವ (ಎಲ್-1) ಗುತ್ತಿಗೆದಾರರಾಗಿದ್ದರೂ ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ಇದುವರೆವಿಗೂ ಕಾರ್ಯಾದೇಶ ನೀಡಿರುವುದಿಲ್ಲ.

ಗೇರುಪುರ ಗ್ರಾಮದಲ್ಲಿ ರೂ.1729.68 ಲಕ್ಷಗಳ ಮೊತ್ತದಲ್ಲಿ ಇಂದಿರಾಗಾಂಧಿ ವಸತಿ ಶಾಲೆ ನಿರ್ಮಾಣ ಮಾಡುವ ಕಾಮಗಾರಿಗೆ 7 ಜನ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿದ್ದು, ತಾಂತ್ರಿಕ ಮೌಲ್ಯ ಮಾಪನದಲ್ಲಿ ಮೆ: ಅಪೂರ್ವ ಕನ್‌ಸ್ಟ್ರಕ್ಷನ್ ಹಾಗೂ ಶ್ರೀ ದಯಾನಂದ ಶೆಟ್ಟಿ ರವರು ಲೈನ್ ಆಫ್ ಕ್ರೆಡಿಟ್ ಸಲ್ಲಿಸಿಲ್ಲವೆಂದು, ಶ್ರೀ ಗೋಪಾಲರೆಡ್ಡಿ ರವರು ವಿದ್ಯುತ್ ಪರವಾನಿಗೆ ಸಲ್ಲಿಸಿಲ್ಲವೆಂದು, ಶ್ರೀ ಕೃಷ್ಣೇಗೌಡ ರವರು ಇದೇ ರೀತಿಯ ಕೆಲಸವನ್ನು ನಿರ್ವಹಿಸಿರುವ ಬಗ್ಗೆ ಕಾಮಗಾರಿ ದೃಢೀಕರಣ ಪತ್ರವನ್ನು ಸಲ್ಲಿಸಿರುವುದಿಲ್ಲವೆಂದು ಅವರುಗಳ ಟೆಂಡರ್‌ಗಳನ್ನು ತಿರಸ್ಕರಿಸಲಾಗಿದೆ. ಉಳಿದಂತೆ ಮೆ: ಕೆ.ಎಂ.ವಿ. ಪ್ರಾಜೆಕ್ಟ್, ಶ್ರೀ ನರಹರಿ, ಶ್ರೀ ಪಿ.ಗಿರೀಶ್ ಹಾಗೂ ಮೆ: ಮೈಕಾನ್ ಕನ್‌ಸ್ಟ್ರಕ್ಷನ್ (ಲಿ) ರವರು ಅರ್ಹಗೊಂಡಿರುವುದನ್ನು ಪರಿಗಣಿಸಿ ಆರ್ಥಿಕ ಬಿಡ್ ಮೌಲ್ಯ ಮಾಪನದಲ್ಲಿ ಮೆ: ಕೆ.ಎಂ.ವಿ. ಪ್ರಾಜೆಕ್ಟ್ ರವರು ಕನಿಷ್ಠ ಬಿಡ್ ಸಲ್ಲಿಸಿರುವ (ಎಲ್-1) ಗುತ್ತಿಗೆದಾರರಾಗಿದ್ದು, ಸದರಿ ಸಂಸ್ಥೆಗೆ ಕಾರ್ಯಾದೇಶ ನೀಡಲಾಗಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

4. <u>ಕಾಮಗಾರಿ ನಿರ್ವಹಿಸಲು ಗುತ್ತಿಗೆದಾರರಿಗೆ ನೀಡಿರುವ ಶೇಕರಣಾ ಮುಂಗಡದಲ್ಲಿನ (Mobilizations Advance) ನ್ಯೂನ್ಯತೆಗಳು:</u>

4.1 <u>ಕಾಮಗಾರಿ ನಿರ್ವಹಿಸಲು ಸ್ಥಳದ ಲಭ್ಯತೆ ಇಲ್ಲದಿದ್ದರೂ ಗುತ್ತಿಗೆದಾರರಿಗೆ ಶೇಕರಣಾ ಮುಂಗಡ (Mobilizations Advance) ನೀಡಿರುವ ಬಗ್ಗೆ:</u>

ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ ಪ್ಯಾರಾ 102 ಮತ್ತು 135 ರಂತೆ ಕಟ್ಟಡ ನಿರ್ಮಾಣ ಕಾಮಗಾರಿಗೆ ಅಂದಾಜು ಪಟ್ಟಿ ತಯಾರಿಸುವ ಮೊದಲೇ ನಿವೇಶನ ಲಭ್ಯತೆ ಬಗ್ಗೆ ದೃಢಪಡಿಸಿಕೊಳ್ಳಬೇಕು. ಆದರೆ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಕೆಳಕಂಡ ಪ್ರಕರಣದಲ್ಲಿ ನಿವೇಶನದ ಲಭ್ಯತೆ ಇಲ್ಲದಿದ್ದರೂ ಹಾಗೂ ನಿವೇಶನಗಳ ಬಗ್ಗೆ ತಕರಾರು ಇದ್ದರೂ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿ,

ರಲ್ಲಿ ನೀಡಲಾಗಿದೆ. ಗುತ್ತಿಗೆದಾರರಿಂದ ಬ್ಯಾಂಕ್ ಗ್ಯಾರಂಟಿ ಪಡೆದು ಶೇಕರಣಾ ಮುಂಗಡಗಳನ್ನು ನೀಡಲಾಗಿದೆ. ಆದರೆ ಆದಾಯ ತೆರಿಗೆ ಕಾಯ್ದೆ 1961 ರ ಸೆಕ್ಷನ್ 194(ಸಿ) ರಂತೆ ಗುತ್ತಿಗೆದಾರರಿಗೆ ಯಾವುದೇ ಮೊತ್ತ ಪಾವತಿಸಬೇಕಾದರೆ ಶೇಕಡಾ 1 ಅಥವಾ 2 ರಂತೆ ಆದಾಯ ತೆರಿಗೆಯನ್ನು ಮೂಲದಲ್ಲಿಯೇ ಕಡಿತಗೊಳಿಸಿ ಪಾವತಿಸಬೇಕು. ಆದರೆ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ 2017-18 ಹಾಗೂ 2018-19 ರ ಸಾಲಿನಲ್ಲಿ ರೂ.35.02 ಕೋಟಿಗಳಷ್ಟು ಶೇಕರಣಾ ಮುಂಗಡವನ್ನು ವಿವಿಧ ಗುತ್ತಿಗೆದಾರರಿಗೆ ಪಾವತಿಸಿದ್ದರೂ, ಸುಮಾರು ರೂ.69.888 ಲಕ್ಷಗಳಷ್ಟು ಆದಾಯ ತೆರಿಗೆಯನ್ನು ಮೂಲದಲ್ಲಿಯೇ ಕಡಿತಗೊಳಿಸಿರುವುದಿಲ್ಲ. ಇದು ಆದಾಯ ತೆರಿಗೆ ಕಾಯ್ದೆಯ ಶಾಸನಾತ್ಮಕ ಸೂಚನೆಗಳ ಉಲ್ಲಂಘನೆಯಾಗಿದೆ. ಈ ಬಗ್ಗೆ ಆದಾಯ ತೆರಿಗೆ ಇಲಾಖೆಯಿಂದ ಶಾಸನಾತ್ಮಕ ಕ್ರಮಗಳನ್ನು ಕೈಗೊಂಡಲ್ಲಿ ಅಥವಾ ವಸೂಲಿಸಬೇಕಾಗಿರುವ ಆದಾಯ ತೆರಿಗೆ ಮೊತ್ತದ ಮೇಲೆ ಬಡ್ಡಿ ಮತ್ತು ದಂಡ ವಿಧಿಸಿದಲ್ಲಿ ಮೂಲದಲ್ಲಿಯೇ ಆದಾಯ ತೆರಿಗೆಯನ್ನು ವಸೂಲಿಸದೆ ಶೇಕರಣಾ ಮುಂಗಡ ಪಾವತಿಗೆ ಕಾರಣರಾದ ಅಧಿಕಾರಿಗಳು ಜವಾಬ್ದಾರರಾಗಬೇಕಾಗುತ್ತದೆ.

5. **ಲೆಕ್ಕಪರಿಶೋಧನಾ ಫಲಿತಾಂಶ:**

1. ಇ-ಸಂಗ್ರಹಣೆ ಮೂಲಕ ಕೈಗೊಂಡಿರುವ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸಿದಾಗ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳು 2000 ರನ್ವಯ ಹಾಗೂ ಸರ್ಕಾರವು ವಿವಿಧ ಸುತ್ತೋಲೆಗಳಲ್ಲಿ ಕಾಲ ಕಾಲಕ್ಕೆ ನೀಡಿರುವ ಸ್ಪಷ್ಟನೆ ಮತ್ತು ಮಾರ್ಗ ಸೂಚನೆಗಳನ್ವಯ ಏಕ ಬಿಡ್ ಟೆಂಡರ್‌ಗಳನ್ನು ಅನುಮೋದಿಸುವ ಹಾಗೂ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ನಿಗದಿಪಡಿಸಲಾದ ಕನಿಷ್ಠ ಸಮಯವನ್ನು ಪಾಲಿಸುವಲ್ಲಿ ವಿವೇಚನೆಯನ್ನು ಬಳಸಿರುವುದು ಕಂಡು ಬಂದಿರುವುದಿಲ್ಲ.
2. ಇ-ಸಂಗ್ರಹಣೆ ಮೂಲಕ ಕೈಗೊಂಡಿರುವ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿ ತಾಂತ್ರಿಕ ಬಿಡ್‌ನ ಮೌಲ್ಯ ಮಾಪನ ಮಾಡುವಾಗ ಕೆಲವು ಕಾಮಗಾರಿಗಳಲ್ಲಿ ಅರ್ಹರಾಗಿರುವ ಗುತ್ತಿಗೆದಾರರನ್ನು ಅನರ್ಹಗೊಳಿಸಲಾಗಿದ್ದು ಹಾಗೂ ಅನರ್ಹರಾಗಿರುವ ಗುತ್ತಿಗೆದಾರರನ್ನು ಅರ್ಹರನ್ನಾಗಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದು ಇದರಿಂದಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳು 2000 ರ ನಿಯಮಗಳನ್ನು ಉಲ್ಲಂಘಿಸಿ ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ವಹಿಸಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.
3. ಕಟ್ಟಡ ನಿರ್ಮಾಣ ಕಾಮಗಾರಿಯ ಸ್ಥಳವನ್ನು ಸಂಬಂಧಪಟ್ಟ ಇಲಾಖೆಯಿಂದ ಪೂರ್ಣವಾಗಿ ವಶಕ್ಕೆ ಪಡೆದುಕೊಳ್ಳದೆ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಕೈಗೊಳ್ಳಬಾರದೆಂದು ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯ ಪ್ಯಾರ 102 ಮತ್ತು 135 ರಲ್ಲಿ ತಿಳಿಸಲಾಗಿದ್ದರೂ ಟೆಂಡರ್ ಪ್ರಕ್ರಿಯೆ ಕೈಗೊಂಡು ಕಾರ್ಯಾದೇಶಗಳನ್ನು ನೀಡಿ ಗುತ್ತಿಗೆದಾರರಿಗೆ ಕಾಮಗಾರಿಗಳ ಸ್ಥಳವನ್ನು ನಿಗದಿತ ಅವಧಿಯಲ್ಲಿ ಹಸ್ತಾಂತರಿಸದೆ ಕಾಮಗಾರಿಗಳ ನಿರ್ಮಾಣದಲ್ಲಿ ವಿಳಂಬವಾಗಿರುವ ಅಂಶವನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.
4. ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯಲ್ಲಿ ನೀಡಲಾಗಿರುವ ಮಾರ್ಗಸೂಚಿಗಳಂತೆ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ತಯಾರಿಸದೆ, ದೋಷಪೂರಿತ ಅಂದಾಜು ಪಟ್ಟಿ ತಯಾರಿಕೆಯಿಂದಾಗಿ ವರ್ಕ್‌ಸ್ಲಿಪ್ ಮತ್ತು ಇ.ಐ.ಆರ್.ಎಲ್. ಉಂಟಾಗಿದ್ದು, ಇದರಿಂದಾಗಿ ಕಾಮಗಾರಿಗಳ ವೆಚ್ಚದಲ್ಲಿ ಹೆಚ್ಚಳವಾಗಿ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆಯಾಗಿರುವ ಅಂಶವನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

ಕ್ರ ಸಂ.	ಕಾಮಗಾರಿ ಹೆಸರು	ಪಾವತಿಸಿದ ಮುಂಗಡ ಮೊತ್ತ	ದಿನಾಂಕ	30-09-2019 ರ ವರೆಗೆ ವಸೂಲಿ	ಬಾಕಿ
1	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಬೆಳಗಾವಿ	19,90,000.00	10.09.2018	-	19,90,000.00
2	ದೇವಗಿರಿ, ದೇವರಾಯನ ಸಮುದ್ರ ಮಲ್ಲಾಡಿಹಳ್ಳಿ ಇಲ್ಲಿ ಮುರಾರ್ಜಿ ವಸತಿ ಶಾಲೆ ನಿರ್ಮಾಣ	4,00,00,000.00	22.12.2018	-	4,00,00,000.00
3	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಜಗಳೂರು	16,44,000.00	31.01.2019	-	16,44,000.00
4	10 ಸ್ಥಳಗಳಲ್ಲಿ ಮುರಾರ್ಜಿ ವಸತಿ ಶಾಲೆ ನಿರ್ಮಾಣ	8,64,62,150.00	27.01.2018	29107202.00	5,73,54,948.00
5	ಗುಂಡೇಪಲ್ಲಿ, ಮುದನಾಳ್, ಗೂಡಂಪಲ್ಲಿ ಗ್ರಾಮಗಳಲ್ಲಿ ಮೊರಾರ್ಜಿ ವಸತಿ ಶಾಲೆ ನಿರ್ಮಾಣ	4,00,40,000.00	03.01.2019	82,73,000.00	3,17,67,000.00

ಮೇಲ್ಕಂಡ ವಿವರಗಳನ್ನು ಗಮನಿಸಿದಾಗ ಗುತ್ತಿಗೆದಾರರಿಗೆ ಸಾಮಗ್ರಿಗಳ ಖರೀದಿಗಾಗಿ ಹಾಗೂ ಪ್ರಾರಂಭಿಕ ಪ್ರಾಸಂಗಿಕ ವೆಚ್ಚಗಳಿಗಾಗಿ ನೀಡಲಾದ ಮುಂಗಡಗಳನ್ನು ಗುತ್ತಿಗೆದಾರರು ಅದೇ ಉದ್ದೇಶಕ್ಕೆ ಬಳಸಿರುವುದು ಸಂಶಯಾಸ್ಪದ ಎಂದು ಭಾವಿಸಲು ಅವಕಾಶವಾಗಿರುತ್ತದೆ. ಕೋಟ್ಯಾಂತರ ಸರ್ಕಾರದ ಹಣ ಬಡ್ಡಿಯಿಲ್ಲದೇ ಅನಗತ್ಯವಾಗಿ ಗುತ್ತಿಗೆದಾರರ ಬಳಿ ಉಳಿಯುವಂತಾಗಿದೆ. ಸದರಿ ಮೊತ್ತ ಸಂಘದ ಬ್ಯಾಂಕ್ ಖಾತೆಯಲ್ಲಿದ್ದರೆ ಲಕ್ಷಾಂತರ ರೂ.ಗಳಷ್ಟು ಬಡ್ಡಿ ರೂಪದ ಆದಾಯ ಬರಬಹುದಾಗಿದ್ದ ಅವಕಾಶ ತಪ್ಪಿಹೋಗಿದೆ. ಟೆಂಡರ್ ನಿಬಂಧನೆಗಳಂತೆ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಂಡಿರುವುದಿಲ್ಲ. ಗುತ್ತಿಗೆದಾರರು ಪಡೆದ ಶೇಕರಣಾ ಮುಂಗಡ ಮೊತ್ತವನ್ನು ಯಾವ ಉದ್ದೇಶಕ್ಕೆ ಬಳಸಿದ್ದಾರೆ ಎಂಬ ಬಗ್ಗೆ ಸಂಘವು ಸೂಕ್ತ ಮೇಲ್ವಿಚಾರಣೆ ಮಾಡದಿರುವುದು ಸಂಘದ ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯಲೋಪವೆಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಪಡಲಾಗಿದೆ. ಸಾಮಗ್ರಿ ಖರೀದಿಸಿರುವ ಬಗ್ಗೆ ಇನ್‌ವಾಯ್ಸ್ ಅಥವಾ ಓಚರುಗಳನ್ನು ಪಡೆದುಕೊಂಡಿರುವುದಿಲ್ಲ. ಕೂಡಲೇ ಶೇಕರಣಾ ಮುಂಗಡ ನೀಡಿರುವ ಎಲ್ಲಾ ಪ್ರಕರಣಗಳ ಸಮಗ್ರ ಪರಿಶೀಲನೆ ನಡೆಸಿ ಟೆಂಡರ್ ನಿಬಂಧನೆಗಳಂತೆ ಕ್ರಮ ಕೈಗೊಂಡು, ಇನ್ನು ಮುಂದೆ ಈ ರೀತಿಯ ನ್ಯೂನ್ಯತೆಗಳು ಮರುಕಳಿಸದಂತೆ ಕ್ರಮ ವಹಿಸುವುದು ಅವಶ್ಯಕವಾಗಿದೆ ಹಾಗೂ ಈ ನಷ್ಟಕ್ಕೆ ಕಾರಣರಾಗಿರುವ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಅವಶ್ಯಕವಾಗಿದೆ.

4.3 <u>ಗುತ್ತಿಗೆದಾರರಿಗೆ ಶೇಕರಣಾ ಮುಂಗಡ (Mobilization Advance) ನೀಡುವಾಗ ಆದಾಯ ತೆರಿಗೆಯನ್ನು ಕಡಿತಗೊಳಿಸದಿರುವ ಬಗ್ಗೆ:</u>

ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ 2017-18 ಹಾಗೂ 2018-19 ರ ಸಾಲಿನಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿಗಳ ಗುತ್ತಿಗೆ ಪಡೆದಿರುವ ವಿವಿಧ ಗುತ್ತಿಗೆದಾರರಿಗೆ ಟೆಂಡರ್ ನಿಬಂಧನೆಗಳಂತೆ (Clause 42 & 42.1 of the General Conditions of Contract) ಟೆಂಡರ್ ಮೊತ್ತದ ಮೇಲೆ ಶೇಕಡಾ 5 ರಷ್ಟು ಮೊತ್ತವನ್ನು ಶೇಕರಣಾ ಮುಂಗಡವನ್ನಾಗಿ ಪಾವತಿಸಲಾಗಿದೆ. ವಿವರಗಳನ್ನು ಅನುಬಂಧ-7

ಸಂಸ್ಥೆಯಲ್ಲಿನ ಲೆಕ್ಕಶಾಖೆಗೆ ಅಗತ್ಯವಿರುವಷ್ಟು ಸಿಬ್ಬಂದಿಯನ್ನು ಖಾಯಂ ಆಗಿ ನೇಮಕ ಮಾಡಿಕೊಳ್ಳಲು ಅಥವಾ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ಎರವಲು ಸೇವೆಯ ಮೇಲೆ ನಿಯೋಜಿಸಿಕೊಂಡಲ್ಲಿ ಮೇಲೆ ತಿಳಿಸಿರುವ ನ್ಯೂನ್ಯತೆಗಳನ್ನು ಸರಿಪಡಿಸಿ ಹಾಗೂ ಸದರಿ ಸಂಘದ ಲೆಕ್ಕಪತ್ರಗಳನ್ನು ನಿಯಮ ಹಾಗೂ ಕ್ರಮಬದ್ಧವಾಗಿ ನಿರ್ವಹಿಸಬಹುದಾಗಿದೆ ಎಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಿಸಿದೆ.

7. ಸರ್ಕಾರದ ಹಣವನ್ನು ವೆಚ್ಚ ಮಾಡಬೇಕಾದಲ್ಲಿ ಸರ್ಕಾರದ ಅಧಿಕಾರಿಗಳು, ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 15ರ ಸೂಚನೆಗಳನುಸಾರ ತನ್ನ ಸ್ವಂತ ಹಣ ವೆಚ್ಚ ಮಾಡುವಾಗ ವಹಿಸುವ ಜಾಗರೂಕತೆ ಹಾಗೂ ವಿವೇಚನೆಯನ್ನು ಬಳಸಿ ವೆಚ್ಚ ಮಾಡಬೇಕಾಗಿರುತ್ತದೆ. ಆದ್ದರಿಂದ ಸದರಿ ಸಾಲಿನಲ್ಲಿ ಭರಿಸಲಾದ ವೆಚ್ಚಗಳಲ್ಲಿ ಆರ್ಥಿಕ ಔಚಿತ್ಯದ ಸೂತ್ರಗಳ ಪಾಲನೆಯಾಗಿಲ್ಲದಿರುವುದರಿಂದ, ಸದರಿ ಸಾಲಿನಲ್ಲಿ ಕೈಗೊಂಡಿರುವ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳು ಹಾಗೂ ಕಾಮಗಾರಿ ವೆಚ್ಚಗಳ ಕುರಿತು ಪೂರ್ಣ ಪ್ರಮಾಣದಲ್ಲಿ ಲೆಕ್ಕ ತನಿಖೆಯು ಅಗತ್ಯವಿರುವುದರಿಂದ, ಆಂತರಿಕ ಲೆಕ್ಕಪರಿಶೋಧನೆ ವಿಭಾಗವನ್ನು ಸೃಜಿಸಿಕೊಂಡು, ಪಾವತಿ ಪೂರ್ವ ಲೆಕ್ಕಪರಿಶೋಧನೆಗೆ ಒಳಪಡಿಸುವುದು ಸೂಕ್ತವೆಂದು ಅಭಿಪ್ರಾಯಪಡಲಾಗಿದೆ.

8. 2017-18 ರ ಸಾಲಿನಲ್ಲಿ ಸುಮಾರು ರೂ.1986.25 ಕೋಟಿ ವೆಚ್ಚವನ್ನು ಕಟ್ಟಡ ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿಗಳಿಗೆ ಸಂಘವು ಭರಿಸಿದೆ. ಕಾಮಗಾರಿಗಳ ತಾಂತ್ರಿಕ ಅನುಮೋದನೆಯನ್ನು ಅಧೀಕ್ಷಕ ಅಭಿಯಂತರರಿಗೆ ನೀಡಲು ಅಧಿಕಾರ ಪ್ರತ್ಯಾಯೋಜಿಸಿರುವ ಕ್ರಮವು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಅಧಿಕಾರಿಗಳಿಗೆ ಸರ್ಕಾರದಿಂದ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರಕ್ಕಿಂತ ಹೆಚ್ಚಿನ ಅಧಿಕಾರ ಪ್ರಾಪ್ತ ಮಾಡಿರುವುದು ಕಂಡುಬಂದಿದೆ. ಅಧಿಕ ಅಂದಾಜು ಮೊತ್ತದ ಕಾಮಗಾರಿಗಳನ್ನು ಸಂಘದಿಂದ ನಿರ್ವಹಿಸುತ್ತಿರುವುದರಿಂದ ಮುಖ್ಯ ಅಭಿಯಂತರರ ಹಂತದ ಅಧಿಕಾರಿಯನ್ನು ನೇಮಿಸಿದಲ್ಲಿ ಹಾಗೂ ಅಗತ್ಯ ಸಂಖ್ಯೆಯ ಅಧೀನ ಹಂತದ ಅಭಿಯಂತರರ ಹುದ್ದೆಗಳನ್ನು ಒದಗಿಸಿ ಕೊಡುವ ಮೂಲಕ ತಾಂತ್ರಿಕವಾಗಿ ಸಂಘವನ್ನು ಬಲಪಡಿಸುವುದು ಸೂಕ್ತವೆಂದು ಅಭಿಪ್ರಾಯಿಸಲಾಗಿದೆ.

ಅಪರ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು
ಲೆಕ್ಕಪತ್ರ ಇಲಾಖೆ, ಬೆಂಗಳೂರು

ಲೆಕ್ಕ ಪರಿಶೋಧನಾ ತಂಡ :

1)	ಶ್ರೀ ಎಸ್.ಎನ್. ಚಂದ್ರಶೇಖರ	ಅಪರ ನಿರ್ದೇಶಕರು
2)	ಶ್ರೀ ಎಸ್.ಪಿ. ಸುರೇಶ್‌ಕುಮಾರ್	ಉಪ ನಿರ್ದೇಶಕರು
3)	ಶ್ರೀ ಆಂಜನಪ್ಪ	ಉಪ ನಿರ್ದೇಶಕರು
4)	ಶ್ರೀ ವಿ. ಚಂದ್ರಶೇಖರ	ಲೆಕ್ಕ ಪರಿಶೋಧನಾಧಿಕಾರಿ
5)	ಶ್ರೀ ಟಿ. ತಿಮ್ಮರಾಯಪ್ಪ	ಲೆಕ್ಕಾಧೀಕ್ಷಕರು

5. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ತಯಾರಿಸಲು, ತಾಂತ್ರಿಕ ಬಿಡ್ ಮೌಲ್ಯ ಮಾಪನ ಮಾಡಲು, ಕಾಮಗಾರಿಗಳ ನಿರ್ವಹಣೆಯ ಉಸ್ತುವಾರಿ ವಹಿಸಲು, ಕಾಮಗಾರಿಯ ಅಳತೆ ದಾಖಲಿಸಿ ಬಿಲ್ಲುಗಳನ್ನು ಸಲ್ಲಿಸಲು, ಕಾಮಗಾರಿಗಳ ವರ್ಕ್‌ಸ್ಲಿಪ್ ಮತ್ತು ಇ.ಐ.ಆರ್.ಎಲ್. ಪ್ರಸ್ತಾವನೆಗಳನ್ನು ಸಲ್ಲಿಸಲು ಹೀಗೆ ಎಲ್ಲಾ ಕೆಲಸಗಳನ್ನು ತಾಂತ್ರಿಕ ಸಮಾಲೋಚಕರುಗಳ (ಪಿ.ಎಂ.ಸಿ.) ಮೂಲಕ ನಿರ್ವಹಿಸಲಾಗುತ್ತಿರುವುದು ಕಂಡು ಬಂದಿರುತ್ತದೆ. ಸದರಿ ಸಂಸ್ಥೆಯಲ್ಲಿ ಅಗತ್ಯವಿರುವಷ್ಟು ಸಹಾಯಕ ಅಭಿಯಂತರು/ಕಿರಿಯ ಅಭಿಯಂತರುಗಳನ್ನು ನೇಮಕ ಮಾಡಿಕೊಳ್ಳದೇ ಇರುವುದರಿಂದ ಅಥವಾ ಇತರೆ ಇಲಾಖೆಗಳಿಂದ ಎರವಲು ಸೇವೆಯ ಮೇಲೆ ಪಡೆಯದಿರುವುದರಿಂದ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ತಯಾರಿಸಲು, ತಾಂತ್ರಿಕ ಬಿಡ್ ಮೌಲ್ಯ ಮಾಪನ ಮಾಡಲು, ಕಾಮಗಾರಿಗಳ ನಿರ್ವಹಣೆಯ ಉಸ್ತುವಾರಿ ವಹಿಸಲು, ಕಾಮಗಾರಿಯ ಅಳತೆ ದಾಖಲಿಸಿ ಬಿಲ್ಲುಗಳನ್ನು ಸಲ್ಲಿಸಲು, ಕಾಮಗಾರಿಗಳ ವರ್ಕ್‌ಸ್ಲಿಪ್ ಮತ್ತು ಇ.ಐ.ಆರ್.ಎಲ್. ಪ್ರಸ್ತಾವನೆಗಳನ್ನು ಸಲ್ಲಿಸಲು ಅಗತ್ಯ ಸಿಬ್ಬಂದಿಯ ಕೊರತೆಯಿಂದಾಗಿ ಈ ಎಲ್ಲಾ ಕೆಲಸಗಳನ್ನು ತಾಂತ್ರಿಕ ಸಮಾಲೋಚಕರುಗಳ (ಪಿ.ಎಂ.ಸಿ.) ಮೂಲಕ ನಿರ್ವಹಿಸಲಾಗುತ್ತಿದೆ. ಇದರಿಂದಾಗಿ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ತಯಾರಿಸುವಾಗ ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯಲ್ಲಿ ಅಂದಾಜು ಪಟ್ಟಿ ತಯಾರಿಕೆಯಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ನೀಡಿರುವ ಮಾರ್ಗಸೂಚಿಗಳಂತೆ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ತಯಾರಿಸದೇ, ದೋಷಪೂರಿತ ಅಂದಾಜು ಪಟ್ಟಿಗಳ ತಯಾರಿಕೆಯಿಂದ ವರ್ಕ್‌ಸ್ಲಿಪ್ ಮತ್ತು ಇ.ಐ.ಆರ್.ಎಲ್. ಉಂಟಾಗಿ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆಯಾಗಲು ಕಾರಣವಾಗುವುದಲ್ಲದೇ, ಕಾಮಗಾರಿಗಳ ನಿರ್ವಹಣೆಯ ಉಸ್ತುವಾರಿ, ಅಳತೆಗಳ ದಾಖಲೆ, ಬಿಲ್ಲುಗಳ ಸಲ್ಲಿಸುವಿಕೆಗೆ ಸಂಬಂಧಿಸಿದಂತೆ ಆಗಬಹುದಾದ ನಿರ್ಲಕ್ಷ್ಯತೆ, ಕಳಪೆ ಕಾಮಗಾರಿ, ಹೆಚ್ಚುವರಿ ಪಾವತಿ, ಕಾಮಗಾರಿಯ ಗುಣಮಟ್ಟದ ಬಗ್ಗೆ ತಾಂತ್ರಿಕ ಸಮಾಲೋಚಕರುಗಳನ್ನು (ಪಿ.ಎಂ.ಸಿ.) ಹೊಣೆಯಾಗಿಸುವ ಬಗ್ಗೆ ಕರಾರಿನಲ್ಲಿ ಉಲ್ಲೇಖಿಸಿ ಅವಕಾಶ ಕಲ್ಪಿಸಿಕೊಂಡಿರುವುದಿಲ್ಲ. ಆದರೆ ಇಲಾಖಾ ಅಭಿಯಂತರರುಗಳನ್ನು ನೇಮಿಸಿಕೊಂಡಿದ್ದಲ್ಲಿ ಕರ್ತವ್ಯ ನಿರ್ಲಕ್ಷ್ಯತೆ, ಕಳಪೆ ಕಾಮಗಾರಿ, ಹೆಚ್ಚುವರಿ ಪಾವತಿ, ಕಾಮಗಾರಿಯ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಉಂಟಾಗಬಹುದಾದ ಯಾವುದೇ ನಷ್ಟಗಳಿಗೆ ಅಂತಹ ಸಿಬ್ಬಂದಿಯವರನ್ನು ಹೊಣೆಯಾಗಿಸಿ ಅನ್ವಯವಾಗುವ ಸರ್ಕಾರಿ ಸೇವಾ ನಿಯಮಗಳಂತೆ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಿ ದಂಡನೆ ವಿಧಿಸಲು ಮತ್ತು ಅವರ ನಿರ್ಲಕ್ಷ್ಯತೆಯಿಂದ ಉಂಟಾಗುವ ಹೆಚ್ಚುವರಿ ಪಾವತಿ ಅಥವಾ ನಷ್ಟವು ಸೇರಿದಂತೆ ಯಾವುದೇ ಮೊತ್ತವನ್ನು ಅಂತಹವರಿಂದ ವಸೂಲಿಸಲು ಸಾಧ್ಯವಾಗುವುದು. ಈ ಸಂಸ್ಥೆಯ ವತಿಯಿಂದ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳ ನಿರ್ಮಾಣ ಮಾಡಲು ಅಗತ್ಯವಿರುವ ಸಹಾಯಕ ಅಭಿಯಂತರು/ಕಿರಿಯ ಅಭಿಯಂತರುಗಳನ್ನು ಖಾಯಂ ಆಗಿ ನೇಮಕ ಮಾಡಿಕೊಳ್ಳಲು ಅಥವಾ ಲೋಕೋಪಯೋಗಿ/ನೀರಾವರಿ/ಪಂಚಾಯತ್‌ರಾಜ್ ಇಲಾಖೆ ಸೇರಿದಂತೆ ಇತರೆ ಇಲಾಖೆಗಳಿಂದ ನಿಯೋಜನೆ ಮೇಲೆ ಪಡೆದು ಕಾಮಗಾರಿಗಳನ್ನು ನಿರ್ವಹಿಸಿದಲ್ಲಿ ಮೇಲೆ ತಿಳಿಸಿರುವ ನ್ಯೂನ್ಯತೆಗಳನ್ನು ಸರಿಪಡಿಬಹುದಾಗಿದೆ ಎಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಿಸಿದೆ.

6. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಚೇರಿಯ ಲೆಕ್ಕ ಶಾಖೆಯಲ್ಲಿ ಸಹ ಕಾಮಗಾರಿಗಳ ಬಿಲ್ಲುಗಳ ಪರಿಶೀಲನೆ, ಬಿಲ್ಲುಗಳನ್ನು ಪಾವತಿಗಾಗಿ ಸಲ್ಲಿಸುವುದು ಸೇರಿದಂತೆ ಇತರೆ ಕೆಲಸಗಳನ್ನು ಗುತ್ತಿಗೆ ನೌಕರರ ಮೂಲಕ ನಿರ್ವಹಿಸಲಾಗುತ್ತಿದೆ. ಕಾಮಗಾರಿ ಬಿಲ್ಲುಗಳ ಪಾವತಿಯಲ್ಲಿ ಕರ್ತವ್ಯ ನಿರ್ಲಕ್ಷ್ಯತೆಯಿಂದ ಉಂಟಾಗುವ ಯಾವುದೇ ತಪ್ಪುಗಳಿಗೆ ಅಥವಾ ನಷ್ಟಗಳಿಗೆ ಗುತ್ತಿಗೆ ನೌಕರರನ್ನು ಹೊಣೆಯಾಗಿಸಿ ಶಿಸ್ತು ಕ್ರಮ ಕೈಗೊಳ್ಳಲು ಅಥವಾ ಹೆಚ್ಚುವರಿ ಪಾವತಿ ಅಥವಾ ಸರ್ಕಾರಕ್ಕೆ ಉಂಟಾಗುವ ಮೊತ್ತವನ್ನು ವಸೂಲಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಈ